ವಿಶ್ವವಾಣಿ
ವಿಶ್ವಾಸವೇ ವಿಶ್ವ

ಮಹಿಳಾ ಬಿಲ್ಗಾರಿಕೆ ವಿಶ್ವಕಪ್
ಭಾರತಕ್ಕೆ ಬಂಗಾರದ ಪದಕ

ಚೀನಾದ ಶಾಂಘೈನಲ್ಲಿ ಭಾನುವಾರ ನಡೆದ ಮಹಿಳಾ ಬಿಲ್ಗಾರಿಕೆ ವಿಶ್ವಕಪ್‌ನಲ್ಲಿ ಭಾರತ ತಂಡವು ಅತಿಥೇಯ ಚೀನಾವನ್ನು ಮಣಿಸಿ ಬಂಗಾರದ ಪದಕವನ್ನು ಗೆದ್ದಿದೆ. ದೀಪಿಕಾ ಕುಮಾರಿ, ಅಂಕಿತಾ ಮತ್ತು ಕುಂಕುಮ್ ಮೊಹೋದ್ ಭಾರತ ತಂಡವನ್ನು ಪ್ರತಿನಿಧಿಸಿದ್ದರು.

ತಮಿಳುನಾಡಿನ ಸಿಎಂ ಆಗಿ ಪ್ರಮಾಣವಚನ ಸ್ವೀಕರಿಸಿದ ದಳಪತಿ

ವಿಜಯ್‌ಗೆ ಪಟ್ಟಾಭಿಷೇಕ

5 ದಿನಗಳ ಹೋರಾಟಕ್ಕೆ 6ನೇ ದಿನ ಫಲ, 29ರ ಕೀರ್ತನಾ ಕಿರಿಯ ಸಚಿವೆ
10 ಲಕ್ಷ ಕೋಟಿ ರು. ಸಾಲದೊಂದಿಗೆ ಹೊಣೆ ಹೊತ್ತಿದ್ದೇನೆ: ಸಿಎಂ ವಿಜಯ್

ಚೆನ್ನೈ: ಸತತ 5 ದಿನಗಳು ಪಡಿಪಾಟಲುಪಟ್ಟಿದ್ದ ಟಿವಿಕೆ ಮುಖ್ಯಸ್ಥ ಜೋಸೆಫ್ ವಿಜಯ್ 6ನೇ ದಿನವಾದ ಭಾನುವಾರ ತಮಿಳುನಾಡಿನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುವ ಮೂಲಕ ನಿಟ್ಟುಸಿರುಬಿಟ್ಟಿದ್ದಾರೆ. ಗರಿಷ್ಠ 108 ಸ್ಥಾನ ಗೆದ್ದಿದ್ದರೂ ಬಹುಮತಕ್ಕೆ ಬೇಕಿದ್ದ ಹೆಚ್ಚುವರಿ ಹತ್ತು ಸ್ಥಾನಗಳು ಅವರಿಗೆ ಲಭಿಸದೇ ಹೋಗಿದ್ದರಿಂದ ರಾಜ್ಯಪಾಲ ರಾಜೇಂದ್ರ ಅರ್ಲೇಕರ್ ವಿಜಯ್‌ರನ್ನು ವಾಪಸ್ ಕಳಿಸಿದ್ದರು. ಶನಿವಾರ ವಿಜಯ್‌ಗೆ ಅಗತ್ಯವಿದ್ದ ಶಾಸಕರ ಬೆಂಬಲ ಲಭಿಸಿದ್ದರಿಂದ ರಾಜ್ಯಪಾಲರು ಪ್ರಮಾಣವಚನಕ್ಕೆ ಅನುವು ಮಾಡಿಕೊಟ್ಟಿದ್ದರು.

ಭಾನುವಾರ ಚೆನ್ನೈನ ನೆಹರು ಒಳಾಂಗಣ ಕ್ರೀಡಾಂಗಣದಲ್ಲಿ ಬೆಳಗ್ಗೆ 10 ಗಂಟೆಗೆ ನಡೆದ ಅದ್ಧೂರಿ ಸಮಾರಂಭದಲ್ಲಿ ವಿಜಯ್ ಅವರು ತಮಿಳುನಾಡಿನ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದರು. ಆರಂಭದಲ್ಲಿ ಸಿನಿಮಾ ಶೈಲಿಯಲ್ಲಿ ಪ್ರಮಾಣ ಸ್ವೀಕರಿಸಲು ಹೋದ ವಿಜಯ್‌ರನ್ನು ರಾಜ್ಯಪಾಲರು ತಡೆದು ವಿಧಿಯಂತೆ ಪ್ರಮಾಣವಚನವನ್ನು ಬೋಧಿಸಿದರು. ಬಹುಮತ ಸಾಬೀತುಪಡಿಸಲು ರಾಜ್ಯಪಾಲರು ಮೇ 13ರವರೆಗೆ (3 ದಿನಗಳು) ವಿಜಯ್‌ಗೆ ಗಡುವು ನೀಡಿದ್ದಾರೆ.

ತಿರುಚ್ಚಿರಾಪಳ್ಳಿಗೆ ರಾಜೀನಾಮೆ: ವಿಜಯ್ ಪೆರಂಬೂರು ಮತ್ತು ತಿರುಚ್ಚಿರಾಪಳ್ಳಿ ಪೂರ್ವ ಕ್ಷೇತ್ರದಲ್ಲಿ ಸ್ಪರ್ಧಿಸಿ ಗೆಲುವು ಸಾಧಿಸಿದ್ದರು. ಒಂದು ಕ್ಷೇತ್ರವನ್ನು ಬಿಡ ಬೇಕಾಗಿರುವುದರಿಂದ ತಿರುಚ್ಚಿರಾಪಳ್ಳಿಯನ್ನು ಬಿಟ್ಟು ಕೊಡಲಿದ್ದಾರೆ. ಇಲ್ಲಿ ನಟಿ ತ್ರಿಷಾ ಸ್ಪರ್ಧಿಸುವ ನಿರೀಕ್ಷೆಯಿದೆ.

ಸದ್ಯ ವಿಜಯ್ ಅವರು ತಮ್ಮ ಸಂಪುಟದಲ್ಲಿ 9 ಮಂದಿ ಶಾಸಕರಿಗೆ ಮಂತ್ರಿಗಿರಿ ನೀಡಿದ್ದಾರೆ. ಟಿವಿಕೆಗೆ ಬೆಂಬಲ ನೀಡಿದ ಕಾಂಗ್ರೆಸ್ ಪಕ್ಷದ ಇಬ್ಬರು ಶಾಸಕರಿಗೆ ಸಂಪುಟದಲ್ಲಿ ಸ್ಥಾನ ನೀಡಲಾಗಿದೆ. ವಿಸಿಕೆ, ಸಿಪಿಐ, ಸಿಪಿಎಂ ಮತ್ತು ಮುಸ್ಲಿಂ ಲೀಗ್ ಪಕ್ಷಗಳು ಸರಕಾರಕ್ಕೆ ಬಾಹ್ಯ ಬೆಂಬಲ ನೀಡಿರುವುದರಿಂದ ಈ ಪಕ್ಷಗಳ ಶಾಸಕರು ಸಂಪುಟ ಸೇರುತ್ತಿಲ್ಲ. ಈ ಹಿಂದೆ ಡಿಸಿಎಂ ಸ್ಥಾನಕ್ಕೆ ವಿಸಿಕೆ ಬೇಡಿಕೆ ಇಟ್ಟಿದೆ ಎಂದು ಹೇಳಲಾಗಿತ್ತು.

→ 4

ಸುಮಾರು 10 ಲಕ್ಷ ಕೋಟಿ ರುಪಾಯಿಗೂ ಅಧಿಕ ಸಾಲದ ಹೊರೆಯೊಂದಿಗೆ ಈ ಜವಾಬ್ದಾರಿಯನ್ನು ವಹಿಸಿಕೊಂಡಿದ್ದೇನೆ. ಸಾರ್ವಜನಿಕರಿಗೆ ರಾಜ್ಯದ ನೈಜ ಸ್ಥಿತಿಯನ್ನು ತಿಳಿಸುವುದು ನನ್ನ ಕರ್ತವ್ಯ. ಇದಕ್ಕಾಗಿ ನಾವು ಶ್ವೇತಪತ್ರವನ್ನು ಬಿಡುಗಡೆ ಮಾಡುತ್ತೇವೆ. ಸುಳ್ಳು ಭರವಸೆಗಳನ್ನು ಜನರಿಗೆ ನೀಡಲ್ಲ.

ಜೆ.ವಿಜಯ್
ತ.ನಾಡು ಸಿಎಂ

ಸರಕಾರದ ಬಳಿ ಹಣವಿಲ್ಲ ಎನ್ನುತ್ತ ಹೊಸ ಸರಕಾರದ ಆಡಳಿತ ಆರಂಭಿಸಬೇಡಿ. ಹಣವಿದೆ, ಅದನ್ನು ಬಳಸುವ ಇಚ್ಛಾಶಕ್ತಿ ಬೇಕು. ಈ ಫೆಬ್ರವರಿಯಲ್ಲೇ ಬಜೆಟ್‌ನಲ್ಲಿ ತಮಿಳುನಾಡಿನ ಆರ್ಥಿಕ ಸ್ಥಿತಿಯ ಬಗ್ಗೆ ಸ್ಪಷ್ಟವಾಗಿ ಹೇಳಲಾಗಿತ್ತು. ಅದು ನಿಮಗೂ ಗೊತ್ತಿದೆ. ನಿಮಗೆ ಮತಹಾಕಿದ ಜನರಿಗೆ ಮೋಸ ಮಾಡಬೇಡಿ.

ಸ್ಟಾಲಿನ್
ತ.ನಾಡು ಮಾಜಿ ಸಿಎಂ

200 ಯುನಿಟ್ ವಿದ್ಯುತ್ ಉಚಿತ, ಮಹಿಳೆಯರ ರಕ್ಷಣೆಗೆ ಕಾರ್ಯಪಡೆ

ಅಧಿಕಾರಕ್ಕೇರಿದ ಬೆನ್ನಲ್ಲೇ ತಮಿಳುನಾಡಿನ ಪ್ರತಿ ಮನೆಗಳಿಗೆ 200 ಯೂನಿಟ್ ಉಚಿತ ವಿದ್ಯುತ್ ಹಾಗೂ ಮಹಿಳೆಯರ ರಕ್ಷಣೆಗೆ ವಿಶೇಷ ಕಾರ್ಯಪಡೆ ರಚಿಸುವುದಾಗಿ ವಿಜಯ್ ಘೋಷಣೆ ಮಾಡಿದ್ದಾರೆ. ಪ್ರಮಾಣವಚನ ಸ್ವೀಕಾರ ಬಳಿಕ ಮಾತನಾಡಿದ ವಿಜಯ್, ನಾನು ಯಾವುದೇ ರಾಜಮನೆತನದಿಂದ ಬಂದಿಲ್ಲ. ನಾನು ಕೂಡ ಕಷ್ಟವನ್ನು ಅನುಭವಿಸಿದ್ದೇನೆ. ಜನರೇ ನನ್ನನ್ನು ಆರಿಸಿದ್ದಾರೆ. ಸುಳ್ಳು ಭರವಸೆಗಳನ್ನು ನೀಡಿ ನಾನು ಮೋಸ ಮಾಡಲ್ಲ ಎಂದರು.

ವಂದೇ ಮಾತರಂ ಆರೂ ಚರಣ ಗಾಯನ

ವಿಜಯ್ ಪ್ರಮಾಣವಚನದ ವೇಳೆ ಜನಗಣಮನದ ಜೊತೆಗೆ ವಂದೇ ಮಾತರಂನ ಆರೂ ಚರಣಗಳನ್ನು ಹಾಡಲಾಯಿತು. ಇತ್ತೀಚೆಗೆ ಪ.ಬಂಗಾಳದಲ್ಲಿ ಸುವೇಂದು ಅಧಿಕಾರಿ ಪ್ರಮಾಣವಚನದ ವೇಳೆ ವಂದೇ ಮಾತರಂ ಗೀತೆಯನ್ನು ಹಾಡಿರಲಿಲ್ಲ ಎಂಬ ಕಾರಣಕ್ಕೆ ಈ ವಿಚಾರ ಸದ್ದು ಮಾಡಿದೆ. ಮೊದಲು ವಂದೇ ಮಾತರಂ, ನಂತರ ಜನಗಣಮನವನ್ನು ಹಾಡಲಾಯಿತು.

ಪತ್ನಿ, ಮಕ್ಕಳು ಗೈರು, ನಟಿ ತ್ರಿಷಾ ಹಾಜರ್

ವಿಜಯ್ ಪತ್ನಿ ಸಂಗೀತಾ, ಮಕ್ಕಳಾದ ಜೇಸನ್ ಸಂಜಯ್, ದಿವ್ಯಾ ಸಾಶಾ ವಿಜಯ್ ಪ್ರಮಾಣ ವಚನಕ್ಕೆ ಗೈರು ಹಾಜರಾಗಿದ್ದಾರೆ. ಇದು ಅಭಿಮಾನಿಗಳಿಗೆ ನೋವು ತಂದಿದೆ. ಆದರೆ ಭಾವೀ ಪತ್ನಿ ಎಂದೇ ಹೇಳಲ್ಪಟ್ಟಿರುವ ಖ್ಯಾತ ನಟಿ ತ್ರಿಷಾ ಕೃಷ್ಣನ್ ಸೀರೆಯುಟ್ಟು ಹಾಜರಾಗಿ ಎಲ್ಲರ ಗಮನ ಸೆಳೆದರು. ಅವರು ವಿಜಯ್ ತೆರವು ಮಾಡಿರುವ ತಿರುಚ್ಚಿರಾಪಳ್ಳಿ ಪೂರ್ವ ಕ್ಷೇತ್ರದಿಂದ ಸ್ಪರ್ಧಿಸುವ ನಿರೀಕ್ಷೆಯಿದೆ. ಚುನಾವಣೆ ಫಲಿತಾಂಶ ಬಂದ ದಿನ ತ್ರಿಷಾ ತಿರುಪತಿ ತಿಮ್ಮಪ್ಪನ ದರ್ಶನ ಪಡೆದಿದ್ದರು.

1961-2026

ಸಚಿವ ಸುಧಾಕರ್ ಅಕಾಲಿಕ ನಿಧನ

ಶ್ವಾಸಕೋಶದ ಸೋಂಕು, ಐಸಿಯುನಲ್ಲೇ ಕೊನೆಯುಸಿರು
ನೀರಾವರಿ ಯೋಜನೆಗೆ ಸುಧಾಕರ್ ಹೆಸರಿಡಲು ಚಿಂತನೆ

ಬೆಂಗಳೂರು: ಸಚಿವ, ಚಿತ್ರದುರ್ಗದ ಉಸ್ತುವಾರಿ ಸಚಿವರಾಗಿದ್ದ ಡಿ.ಸುಧಾಕರ್ (66) ಭಾನುವಾರ (ಮೇ 10) ಕೊನೆಯುಸಿರೆಳೆದಿದ್ದಾರೆ. ಸೋಮವಾರ ಅಂತ್ಯಕ್ರಿಯೆ ನಡೆಯಲಿದೆ. ಭಾನುವಾರದಿಂದ ಮೂರು ದಿನಗಳ ಕಾಲ ಶೋಕಾಚರಣೆಯನ್ನು ರಾಜ್ಯ ಸರಕಾರ ಘೋಷಿಸಿದೆ. ನೀರಾವರಿ ಯೋಜನೆಯೊಂದಕ್ಕೆ ಅವರ ಹೆಸರನ್ನಿಡಲು ರಾಜ್ಯ ಸರಕಾರ ಚಿಂತನೆ ನಡೆಸಿದೆ. ಮೊಣಕಾಲು ಶಸ್ತ್ರಚಿಕಿತ್ಸೆ ಸಂಬಂಧ ಸಚಿವ ಡಿ.ಸುಧಾಕರ್ ಅವರು ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗೆ ದಾಖಲಾಗಿದ್ದರು. ಆದರೆ ಶಸ್ತ್ರಚಿಕಿತ್ಸೆ ನಂತರ ಶ್ವಾಸಕೋಶದಲ್ಲಿ ಸೋಂಕು ಕಾಣಿಸಿಕೊಂಡು ಆರೋಗ್ಯ ಸ್ಥಿತಿ ಚಿಂತಾಜನಕವಾಗಿತ್ತು.

→ 4

ಸುಧಾಕರ್ ಸಾರ್ವಜನಿಕ ಸೇವೆಯ ಬಗ್ಗೆ ಅಪಾರ ಕಾಳಜಿ ಮತ್ತು ಸಮರ್ಪಣೆ ಹೊಂದಿದ್ದ ವ್ಯಕ್ತಿ. ಅವರಂತಹ ವ್ಯಕ್ತಿಗಳು ಹೆಚ್ಚು ಕಾಲ ಜನರ ನಡುವೆ ಇರಬೇಕಿತ್ತು. ವೈದ್ಯರ ನಿರಂತರ ಪ್ರಯತ್ನಗಳು ಮತ್ತು ನಮ್ಮೆಲ್ಲರ ಪ್ರಾರ್ಥನೆಗಳ ಹೊರತಾಗಿಯೂ, ಸುಧಾಕರ್ ನಮ್ಮನ್ನು ಅಗಲಿದ್ದಾರೆ. ಇದು ಅತ್ಯಂತ ನೋವಿನ ಕ್ಷಣ.

-ಸಿದ್ದರಾಮಯ್ಯ, ಮುಖ್ಯಮಂತ್ರಿ

ತಾತಗುಣಿ ಬಳಿ ಜಿಲೆಟಿನ್ ಕಡ್ಡಿ ಪತ್ತೆ: ತನಿಖೆ

ಮೋದಿ ಭೇಟಿ ವೇಳೆ ಸ್ಫೋಟ ಬೆದರಿಕೆ: ವ್ಯಕ್ತಿಯ ಬಂಧನ

ಬೆಂಗಳೂರು: ಶ್ರೀಶ್ರೀ ರವಿಶಂಕರ್ ಗುರೂಜಿಯವರ ಆರ್ಟ್ ಆಫ್ ಲಿವಿಂಗ್ ಕಾರ್ಯಕ್ರಮದಲ್ಲಿ ಭಾಗವಹಿಸಲು ಭಾನುವಾರ ಪ್ರಧಾನಿ ಮೋದಿ ಬೆಂಗಳೂರಿಗೆ ಬಂದಿದ್ದ ವೇಳೆ ಆತಂಕಕಾರಿ ಕ್ಷಣಗಳು ನಿರ್ಮಾಣವಾಗಿದ್ದವು. ಮೋದಿ ಭಾಗವಹಿಸುವ ಎರಡೂ ಜಾಗಗಳಲ್ಲಿ ಸ್ಫೋಟ ನಡೆಸುವುದಾಗಿ ಬೆದರಿಕೆ ಹಾಕಿದ್ದ ಲೋಹಿತ್ ಎಂಬ ವ್ಯಕ್ತಿಯನ್ನು ಬೆಂಗಳೂರು ಪೊಲೀಸರು ಬಂಧಿಸಿದ್ದಾರೆ.



ಇನ್ನು ರವಿಶಂಕರ್ ಗುರೂಜಿ ಆಶ್ರಮ ದಿಂದ 3 ಕಿ.ಮೀ. ದೂರವಿರುವ ಕಗ್ಗಲೀಪುರ ಬಳಿಯ ತಾತಗುಣಿ ರಸ್ತೆಯ ಕಾಂಪೌಂಡ್ ಬಳಿ ಎರಡು ಜಿಲೆಟಿನ್ ಕಡ್ಡಿ ಗಳು ಪತ್ತೆಯಾಗಿವೆ. ಕಲ್ಲು ಕ್ವಾರಿಗಳಿಗೆ ಬಳಸುವ ಈ ಜಿಲೆಟಿನ್ ಕಡ್ಡಿಗಳು ಜೀವಂತ ಸ್ಥಿತಿಯಲ್ಲಿರಲಿಲ್ಲ ಎಂದು ತಿಳಿದುಬಂದಿದೆ. ಇದರ ಹಿನ್ನೆಲೆಯನ್ನು ಪತ್ತೆ ಮಾಡಲು ತನಿಖಾ ತಂಡ ರಚನೆಯಾಗಿದೆ. ಸ್ಫೋಟದ ಬೆದರಿಕೆ ಹಾಕಿದ್ದ ಲೋಹಿತ್‌ಗೆ ಜಿಲೆಟಿನ್ ಕಡ್ಡಿ ಪತ್ತೆಗೂ ಸಂಬಂಧ ಎಂದು ಪ್ರಾಥಮಿಕ ತನಿಖೆಯಲ್ಲಿ ತಿಳಿದುಬಂದಿದೆ.

ಮಾನಸಿಕ ಅಸ್ವಸ್ಥ?: ಸ್ಫೋಟದ ಬೆದರಿಕೆ ಹಾಕಿದ್ದ ವ್ಯಕ್ತಿ ತನಿಖೆ ವೇಳೆ ಮಾನಸಿಕ ಅಸ್ವಸ್ಥನಂತೆ ವರ್ತಿಸಿದ್ದಾನೆ. ಪ್ರಧಾನಿ ಮೋದಿ ಭಾಗಿಯಾಗಲಿರುವ ಎರಡೂ ಕಾರ್ಯಕ್ರಮಗಳಲ್ಲಿ ಸ್ಫೋಟ ಮಾಡುವುದಾಗಿ ಬೆಳಗ್ಗೆ 7 ಗಂಟೆಯ ಹೊತ್ತಿಗೆ ಕೋರಮಂಗಲ ಪೊಲೀಸರಿಗೆ ಬೆದರಿಕೆ ಕರೆ ಬಂದಿತ್ತು. ಈ ಸಂಬಂಧ ಕೂಡಲೇ ಜಾಗೃತಗೊಂಡ ಪೊಲೀಸರು 7.30ರ ವೇಳೆಗೆ ಲೋಹಿತ್ ಎಂಬಾತನನ್ನು ಬನ್ನೇರುಘಟ್ಟ ರಸ್ತೆಯ ಮಸೀದಿ ಬಳಿಯಲ್ಲಿ ವಶಕ್ಕೆ ಪಡೆದಿದ್ದಾರೆ. ವಿಚಾರಣೆ ವೇಳೆ ಈತ ಮಾನಸಿಕ ಅಸ್ವಸ್ಥನಂತೆ ವರ್ತನೆ ಮಾಡಿದ್ದು, ಈ ಹಿಂದೆ ದೇಶದ ಗಣ್ಯ ವ್ಯಕ್ತಿಗಳು ಆಗಮಿಸಿದಾಗಲೂ ಇದೇ ರೀತಿಯ ಬೆದರಿಕೆ ಕರೆ ಮಾಡಿದ್ದ. ಖುದ್ದು ವಿಚಾರಣೆ ನಡೆಸಿರುವ ಆಗ್ನೇಯ ವಿಭಾಗ ಡಿಸಿಪಿ ಮಹಮ್ಮದ್ ಸುಜೀತಾ, ಮೇಲ್ನೋಟಕ್ಕೆ ಈತನಿಗೆ ಬೇರೆ ಯಾವುದೇ ಸಂಬಂಧ ಇಲ್ಲ ಎಂಬುದನ್ನು ಖಚಿತಪಡಿಸಿಕೊಂಡಿದ್ದಾರೆ ಎನ್ನಲಾಗಿದೆ.

ಶ್ರೀಶ್ರೀ ರವಿಶಂಕರ್ ಗುರೂಜಿ ಆರ್ಟ್ ಆಫ್ ಲಿವಿಂಗ್ ಕಾರ್ಯಕ್ರಮದಲ್ಲಿ ಭಾಗಿ

ಬೆಂಗಳೂರು ಯೋಗನಗರ: ಮೋದಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಶಾಂತ ಮನಸ್ಥಿತಿ, ಸಂವೇದನಾಶೀಲತೆ, ಸಾಮಾಜಿಕ ಕಳಕಳಿ ಹೊಂದಿರುವ ಯುವ ಜನಾಂಗದಿಂದ ಮಾತ್ರ ವಿಕಸಿತ ಭಾರತ ನಿರ್ಮಾಣ ಸಾಧ್ಯ. ಭಾರತದ ಸಮಗ್ರ ಅಭಿವೃದ್ಧಿಗಾಗಿ ಎಲ್ಲಾ ಸ್ತರಗಳಲ್ಲಿ ಸಾಮೂಹಿಕ ಪ್ರಯತ್ನ ಅಗತ್ಯ ಇದೆ. ಬೆಂಗಳೂರು ಬರೀ ಐಟಿಬಿಟಿ ನಗರವಲ್ಲ, ಯೋಗ ನಗರವೂ ಹೌದು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಬೆಂಗಳೂರಿನಲ್ಲಿ ಆರ್ಟ್ ಆಫ್ ಲಿವಿಂಗ್‌ನ 45ನೇ ವಾರ್ಷಿಕೋತ್ಸವ ಸಮಾರಂಭ ಹಾಗೂ ಧ್ಯಾನ ಮಂದಿರ ಉದ್ಘಾಟಿಸಿ ಮಾತನಾಡಿದ ಅವರು, ಸಮಾಜ ಸ್ವಂತ ಆಸಕ್ತಿಯಿಂದ ರಾಷ್ಟ್ರ ನಿರ್ಮಾಣದಲ್ಲಿ ಭಾಗವಹಿಸಿದಾಗ ಸರಕಾರ ಯಶಸ್ಸು ಕಾಣುತ್ತದೆ. ಸಮಾಜ ಸಕ್ರಿಯವಾದಾಗ ದೇಶದ ದೊಡ್ಡ ಸವಾಲುಗಳಿಗೆ ಸಾಮೂಹಿಕ ಪರಿಹಾರ ಸಿಗಲಿದೆ. ಬೆಂಗಳೂರು ನಗರ ಸಾಫ್ಟ್‌ವೇರ್ ಹಾಗೂ ಸೇವೆಗೆ ಪ್ರಸಿದ್ಧವಾಗಿದೆ. ಆಧ್ಯಾತ್ಮಿಕ ಚೇತನವನ್ನೂ ಈ ನಗರ ಹೊಸ ಉತ್ತುಂಗಕ್ಕೆ ಕೊಂಡೊಯ್ದಿದೆ ಎಂದರು.

ಇಂದು ಪ್ರಪಂಚದಾದ್ಯಂತದ ಜನರು ಭಾರತದ ಆಧ್ಯಾತ್ಮಿಕ ಮೌಲ್ಯಗಳಿಂದ ಪ್ರಭಾವಿತರಾಗಿದ್ದಾರೆ ಮತ್ತು ಈ ಪ್ರಾಚೀನ ಮೌಲ್ಯಗಳಿಂದ ಭಾರತದ ಅನೇಕ ಸಂಸ್ಥೆಗಳು ಪ್ರೇರಣೆ ಪಡೆಯುತ್ತಿವೆ. ಪುರಾತನ ಸಂಸ್ಕಾರದಿಂದ ಭಾರತದ ಅನೇಕ ಸಂಸ್ಥೆಗಳಿಗೆ ಪ್ರೇರೇಪಣೆ ಸಿಗುತ್ತಿದೆ. ನಮ್ಮ ಭಾರತ ವಿವಿಧತೆಯಿಂದ ಕೂಡಿದ ದೇಶವಾಗಿದೆ. ಅನೇಕ ನಂಬಿಕೆ, ಉಪಾಸನೆ, ಸಂಸ್ಕೃತಿಗಳನ್ನು ಹೊಂದಿದೆ. ವಿವಿಧತೆಯ ಮೂಲತತ್ವ ಏನೆಂದರೆ ಬೇರೆಯವರಿಗಾಗಿ ಜೀವನ ನಡೆಸುವುದು ಎಂದು ವ್ಯಾಖ್ಯಾನಿಸಿದರು.

→ 4

ಆರ್ಟ್ ಆಫ್ ಲಿವಿಂಗ್ ಕಾರ್ಯಕ್ರಮದ ವೇಳೆ ರವಿಶಂಕರ್ ಗುರೂಜಿ–ಪ್ರಧಾನಿ ಮೋದಿ.

ಮೋದಿ ದೇಶದ ಅಮೂಲ್ಯ ಪುತ್ರ: ರವಿಶಂಕರ್ ಗುರೂಜಿ

ವಿಶ್ವದ ಪರಮಮಿತ್ರ ಭಾರತದ ಅಮೂಲ್ಯಪುತ್ರ, ಶ್ರೇಷ್ಠ ಪುತ್ರ ಪ್ರಧಾನಿ ನರೇಂದ್ರ ಮೋದಿ ಆಗಿದ್ದಾರೆ. ವಸುಧೈವ ಕುಟುಂಬಕಂ ಉದ್ಘೋಷದ ಮೂಲಕ ನೀವು ಭಾರತವನ್ನು ಬೇರೆಯದೇ ಸ್ತರಕ್ಕೆ ತೆಗೆದುಕೊಂಡು ಹೋಗಿದ್ದೀರಿ. ನಾವು ಈ ಮುಂಚೆ ಹೆಚ್ಚು ಅಸುರಕ್ಷತೆ ಅನುಭವಿಸುತ್ತಿದ್ದೆವು. ಆದರೆ ಈಗ ಅದಿಲ್ಲ. ಉಗ್ರವಾದಕ್ಕೆ ನೀವು ಅಂತ್ಯ ಹಾಡಿದ್ದೀರಿ ಎಂದು ಶ್ರೀಶ್ರೀ ರವಿಶಂಕರ್ ಗುರೂಜಿ ಪ್ರಧಾನಿ ಮೋದಿಯನ್ನು ಹೊಗಳಿದ್ದಾರೆ.

ಎಚ್‌ಎಎಲ್‌ನಲ್ಲಿ ಪ್ರಧಾನಿಗೆ ಬಿಜೆಪಿ ಸನ್ಮಾನ

ರಾಜ್ಯ ಕಾಂಗ್ರೆಸ್ ಸಿಎಂ ಸ್ಥಾನ ಅಭದ್ರ: ಮೋದಿ

ಬೆಂಗಳೂರು: ಕಾಂಗ್ರೆಸ್ ಈಗ ಪರಾವಲಂಬಿ ಪಕ್ಷವಾಗಿದೆ. ಇಂತಹ ಕಾಂಗ್ರೆಸ್‌ಗೆ ಈಗ ಮತ್ತೊಂದು ಪಕ್ಷ ಬೇಕಾಗಿದೆ ಎಂದು ಮೂದಲಿಸಿರುವ ಪ್ರಧಾನಿ ಮೋದಿ, ಕರ್ನಾಟಕದಲ್ಲಿ ಕಳೆದ ಮೂರು ವರ್ಷದಿಂದ ಕಾಂಗ್ರೆಸ್ ಸರಕಾರ ಆಡಳಿತ ನಡೆಸುವ ಬದಲು ಆಂತರಿಕ ಸಂಘರ್ಷ ಪರಿಹರಿಸುವುದರಲ್ಲೇ ನಿರತವಾಗಿದೆ ಎಂದು ಟೀಕಿಸಿದರು. ಪಶ್ಚಿಮ ಬಂಗಾಳ, ಅಸ್ಸಾಂ ಮತ್ತು ಪುದುಚೇರಿ ರಾಜ್ಯಗಳಲ್ಲಿ ಜಯಭೇರಿ ಬಾರಿಸಿದ ಬಳಿಕ ಕರ್ನಾಟಕಕ್ಕೆ ಆಗಮಿಸಿದ ಪ್ರಧಾನಿಯನ್ನು ಎಚ್‌ಎಎಲ್ ವಿಮಾನ ನಿಲ್ದಾಣದಲ್ಲಿ ರಾಜ್ಯ ಬಿಜೆಪಿ ಸನ್ಮಾನಿಸಿತು.

→ 4



ಮೋದಿಗೆ ಶಾಲು ಹೊದಿಸಿ ರಾಜ್ಯ ಬಿಜೆಪಿ ಸನ್ಮಾನಿಸಿತು

ಕದನವಿರಾಮದ ಬೆನ್ನಲ್ಲೇ ಯುದ್ಧ ಮುಗಿಯುವ ಹಂತದಲ್ಲಿದೆ ಎಂದ ಪುಟಿನ್
ರಷ್ಯಾ ಅಧ್ಯಕ್ಷನ ಹೇಳಿಕೆ ಬೆನ್ನಲ್ಲೇ ಶಾಂತಿಯ ಭರವಸೆ, ವಿಶ್ವಾದ್ಯಂತ ನವೋತ್ಸಾಹ

4 ವರ್ಷಗಳ ರಷ್ಯಾ-ಉಕ್ರೇನ್ ರಕ್ತಪಾತ ಅಂತ್ಯದತ್ತ

ಮಾಸ್ಕೋ: 2022, ಫೆ.24ರಿಂದ ಶುರುವಾದ ರಷ್ಯಾ–ಉಕ್ರೇನ್ ಯುದ್ಧ 4 ವರ್ಷಗಳ ಬಳಿಕ ಮುಗಿಯುವ ಹಂತಕ್ಕೆ ಬಂದಿದೆ.

ಶನಿವಾರವಷ್ಟೇ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎರಡೂ ದೇಶಗಳ ನಡುವೆ ಮೂರು ದಿನಗಳ ಕದನವಿರಾಮವನ್ನು ಘೋಷಿಸಿದ್ದರು. ಅದರ ಬೆನ್ನಲ್ಲೇ ಸ್ವತಃ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಯುದ್ಧ ಮುಗಿಯುವ ಹಂತಕ್ಕೆ ಬಂದಿದೆ ಎಂದು ಹೇಳಿದ್ದಾರೆ. ಇದು ಹೊಸ ಭರವಸೆಯನ್ನು ಹುಟ್ಟುಹಾಕಿದೆ.

ಮಾಸ್ಕೋದಲ್ಲಿ ನಡೆದ ವಿಜಯ ದಿನಾಚರಣೆಯ ವೇಳೆ ಮಾತನಾಡಿದ ಪುಟಿನ್, ಯುದ್ಧ ಮುಗಿಯುವ ಹಂತಕ್ಕೆ ಬಂದಿದೆ ಎಂದು ನಾನು ಭಾವಿಸುತ್ತೇನೆ ಎನ್ನುವ ಮೂಲಕ ಅವರು ಯುದ್ಧ ನಿಲ್ಲಿಸುವ ಬಗ್ಗೆ ಸೂಚನೆ ನೀಡಿದ್ದಾರೆ.

ಇದೇ ವೇಳೆ ಟ್ರಂಪ್ ಸೂಚಿಸಿದ್ದ ಮೂರು ದಿನಗಳ ಕದನ ವಿರಾಮವನ್ನು ರಷ್ಯಾ ಮತ್ತು ಉಕ್ರೇನ್ ಪಾಲಿಸಿವೆ. ಎರಡೂ ದೇಶಗಳು ತಲಾ 1,000 ಕೈದಿಗಳನ್ನು ಬಿಡುಗಡೆ ಮಾಡಲು ಒಪ್ಪಿಕೊಂಡಿವೆ. ಯುದ್ಧ ಆರಂಭವಾದ ನಂತರ ನಡೆದ ಅತಿದೊಡ್ಡ ಕೈದಿಗಳ ವಿನಿಮಯಗಳಲ್ಲಿ ಇದೂ ಒಂದಾಗಿದೆ. ಸಂಧಾನದ ಬಗ್ಗೆ ಮಾತನಾಡಿದ ಪುಟಿನ್, ಯುರೋಪಿಯನ್ ನಾಯಕರೊಂದಿಗೆ ಮತ್ತೆ ಸಂವಾದಕ್ಕೆ ಸಿದ್ಧ ಎಂದು ಹೇಳಿದ್ದಾರೆ.

→ 4



3.50 ಲಕ್ಷ ರಷ್ಯಾ, 1.4 ಲಕ್ಷ ಉಕ್ರೇನ್ ಯೋಧರ ಸಾವು

ಸತತ 4 ವರ್ಷಗಳ ಕಾಲ ನಡೆದ ಯುದ್ಧದಲ್ಲಿ ನಿಖರವಾಗಿ ಎಷ್ಟು ಸಾವುಗಳಾಗಿವೆ, ಎಷ್ಟು ನಷ್ಟವಾಗಿದೆ ಎಂಬ ಅಂದಾಜುಗಳು ಸಿಕ್ಕಿಲ್ಲ. ಆದರೆ ಒಂದು ಅಂದಾಜಿನ ಪ್ರಕಾರ ರಷ್ಯಾದ 3.52 ಲಕ್ಷ ಯೋಧರು ಮೃತಪಟ್ಟಿದ್ದಾರೆ. ಇನ್ನು ಉಕ್ರೇನ್‌ಗೆ ಸೇರಿದ 1.40 ಲಕ್ಷ ಯೋಧರು ಪ್ರಾಣ ಕಳೆದುಕೊಂಡಿದ್ದಾರೆ. ಉಕ್ರೇನ್‌ನಲ್ಲಿ 15,578 ನಾಗರಿಕರು ಮೃತಪಟ್ಟಿದ್ದಾರೆಂದು ವಿಶ್ವಸಂಸ್ಥೆ ಮಾನವಹಕ್ಕುಗಳ ಆಯೋಗ ಅಂದಾಜಿಸಿದೆ.

ಪಾಕ್‌ನಲ್ಲಿ ಬಾಂಬ್ ಸ್ಫೋಟ: 21 ಸಾವು

ಇಸ್ಲಾಮಾಬಾದ್: ಪಾಕಿಸ್ತಾನಕ್ಕೆ ರಕ್ತಸಿಕ್ತ ಭಾನುವಾರವಾಗಿದೆ. ವಾಯವ್ಯ ಪಾಕಿಸ್ತಾನದ ಖೈಬರ್ ಪಖ್ತುಂಖ್ವದ ಬನ್ನು ಎಂಬಲ್ಲಿನ ಪೊಲೀಸ್ ಚೆಕ್ ಪಾಯಿಂಟ್ ಮೇಲೆ ಭಯೋತ್ಪಾದಕರು ನಡೆಸಿದ ದಾಳಿಯಲ್ಲಿ 21 ಸೈನಿಕರು ಸಾವನ್ನಪ್ಪಿದ್ದಾರೆ. 12ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ.

ದಾಳಿಕೋರರು ಮೊದಲು ಪೊಲೀಸ್ ಚೆಕ್ ಪಾಯಿಂಟ್‌ನಲ್ಲಿ ಕಾರ್ ಬಾಂಬ್ ಸ್ಫೋಟಿಸಿದ್ದು, ನಂತರ ಗುಂಡು ಹಾರಿಸಿದರು. ಇದರಿಂದಾಗಿ ಪೊಲೀಸರಿಗೆ ಚೇತರಿಸಿಕೊಳ್ಳಲು ಅಥವಾ ಪ್ರತೀಕಾರ ತೀರಿಸಿಕೊಳ್ಳಲು ಸಮಯವಿರಲಿಲ್ಲ. ದಾಳಿಯ ನಂತರ, ದಾಳಿಕೋರರು ಪೊಲೀಸರ ಶಸ್ತ್ರಾಸ್ತ್ರಗಳನ್ನು ದೋಚಿ ಸ್ಥಳದಿಂದ ಪರಾರಿಯಾಗಿದ್ದರು. ಸಶಸ್ತ್ರ ಗುಂಪು ಇತ್ತೇಹಾದ್–ಉಲ್–ಮುಜಾಹಿದ್ದೀನ್ ಪಾಕಿಸ್ತಾನ ದಾಳಿಯ ಹೊಣೆಯನ್ನು ಹೊತ್ತುಕೊಂಡಿದೆ.

ಸತತ 2ನೇ ಬಾರಿ ಹಿಮಂತ ಸಿಎಂ

ಗುವಾಹಟಿ: ಅಸ್ಸಾಂಗೆ ಸತತ 2ನೇ ಬಾರಿ ಹಿಮಂತ ಬಿಸ್ವಾ ಶರ್ಮಾ ಮುಖ್ಯಮಂತ್ರಿಯಾಗಲಿದ್ದಾರೆ. ಭಾನುವಾರ ನಡೆದ ಸಭೆಯಲ್ಲಿ

ಅವರನ್ನು ಎನ್‌ಡಿಎ ಶಾಸಕಾಂಗ ನಾಯಕರನ್ನಾಗಿ ಆಯ್ಕೆ ಮಾಡಲಾಯಿತು. ಇದರ ಬೆನ್ನಲ್ಲೇ ಅವರಿಗೆ ಸರಕಾರ ರಚಿಸಲು ರಾಜ್ಯಪಾಲರು ಆಹ್ವಾನ ನೀಡಿದ್ದಾರೆ. ಕೇಂದ್ರ ಸಚಿವ ಜೆ.ಪಿ. ನಡ್ಡಾ, ಹರಿಯಾಣ ಮುಖ್ಯಮಂತ್ರಿ ನಯಾಬ್ ಸಿಂಗ್ ಸೈನಿ ಎನ್‌ಡಿಎ ಸಭೆಯಲ್ಲಿ ಹಾಜರಿದ್ದರು. ಬಿಜೆಪಿ ಮಿತ್ರ ಪಕ್ಷಗಳಾದ ಅಸ್ಸಾಂ ಗಣ ಪರಿಷದ್ (ಎಜಿಪಿ) ಹಾಗೂ ಬೋಡೋಲ್ಯಾಂಡ್ ಪೀಪಲ್ಸ್ ಫ್ರಂಟ್ (ಬಿಪಿಎಫ್) ಸಹ ಹಿಮಂತ ಬಿಸ್ವಾ ಶರ್ಮಾ ಅವರ ನಾಮನಿರ್ದೇಶನವನ್ನು ಬೆಂಬಲಿಸಿದೆ. ಇದರಿಂದ ಸರ್ವಾನುಮತದಿಂದ ನಾಯಕರಾಗಿ ಆಯ್ಕೆಯಾಗಿದ್ದಾರೆ.

ಮೇ 12ರಂದು ಪ್ರಮಾಣ ವಚನ ಕಾರ್ಯಕ್ರಮ ನಡೆಯುವ ಸಾಧ್ಯತೆ ಇದೆ. ಇತ್ತೀಚೆಗೆ ನಡೆದ ಅಸ್ಸಾಂ ಚುನಾವಣೆಯಲ್ಲಿ ಬಿಜೆಪಿ ಮೈತ್ರಿಕೂಟ 92 ಸ್ಥಾನ ಗೆದ್ದಿದೆ.

ಸೊಂಪಾದ ಪುಟಗಳು

ಸಿದ್ದು ಸಂದೇಶ ರಾಹುಲ್ ಕಿವಿಗೆ ತಲುಪಿತು
ಮೂರ್ತಿಪೂಜೆ
ಆರ್.ಟಿ. ವಿಠ್ಠಲಮೂರ್ತಿ 6

ತ.ನಾಡಿನಲ್ಲಿ ನಟರು ಮುಖ್ಯಮಂತ್ರಿ ಆಗುವುದು ಏಕೆ?
ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್ 7

ದಾರಿದೀಪೋಕ್ತಿ

ನಿಮ್ಮ ಸುತ್ತ ನಿಮ್ಮನ್ನು ಇನ್ನಷ್ಟು ಸುಧಾರಿಸುವ, ಉತ್ತಮಗೊಳಿಸುವ ಜನರನ್ನು ಇಟ್ಟುಕೊಳ್ಳಬೇಕು. ಯಾವುದೇ ಅಸೂಯೆ, ನಾಟಕ, ನಕಾರಾತ್ಮಕ ಚಿಂತನೆಗಳಿರುವ ವ್ಯಕ್ತಿಗಳನ್ನಲ್ಲ. ಉತ್ತಮ ಗುರಿ ಸಾಧಿಸಲು ಉತ್ತಮ ಭಾವನೆ ಇರುವವರು ಹತ್ತಿರ ಇರಬೇಕು.

ವಕ್ರತುಂಡೋಕ್ತಿ

ಮನೆಯಲ್ಲಿ ಅಮ್ಮ ಇರೋವರೆಗೂ ಎಲ್ಲರೂ ಚಿಕ್ಕ ಮಕ್ಕಳೇ. ಅಮ್ಮನ ಕೈಲಿ ಮೊಬೈಲ್ ಸಿಕ್ಕಿದ ಮೇಲೆ ಮುಗೀತ್. ನಾವೇ ಆಗ ಅವರಿಗೆ 'ದೊಡ್ಡಪ್ಪ'!

ಬಾಲಾಪರಾಧದ ಮೇಲೆ ವಯಸ್ಕನ ಬಂಧನ ಅಸಾಧ್ಯ

ಬೆಂಗಳೂರು: ಅಪ್ರಾಪ್ತ ವಯಸ್ಸಿನಲ್ಲಿದ್ದಾಗ ಎಸಗಿರುವ ಅಪರಾಧಗಳನ್ನು ಆಧಾರವಾಗಿಟ್ಟುಕೊಂಡು

ಗೂಂಡಾ ಕಾಯಿದೆಯಡಿ ಮುನ್ನೆಚ್ಚರಿಕೆ ಕ್ರಮವಾಗಿ ಬಂಧಿಸಲು ಅಧಿಕಾರವಿಲ್ಲ ಎಂದು ಹೈಕೋರ್ಟ್ ಆದೇಶಿಸಿದೆ. ಇದೇ ಪ್ರಕರಣದಲ್ಲಿ ಬಳ್ಳಾರಿ ಕಾರಾಗೃಹದಲ್ಲಿರುವ ಅಭಿಚೆರಿ ಅಲಿಯಾಸ್ ಅಭಿ ಎಂಬುವವರನ್ನು ತಕ್ಷಣ ಬಿಡುಗಡೆ ಮಾಡಬೇಕು ಎಂದು ಸೂಚಿಸಿದೆ. ತಮ್ಮ ಮಗನ ಬಂಧನ ಪ್ರಶ್ನಿಸಿ ಕೋಲಾರ ಜಿಲ್ಲೆಯ ಕೆಜಿಎಫ್‌ನ ಮೇರಿ ಉಷಾ ಎಂಬುವವರು ಸಲ್ಲಿಸಿದ್ದ ಹೇಬಿಯಸ್ ಕಾರ್ಪಸ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಪೀಠ ಮೇಲಿನಂತೆ ನಿರ್ದೇಶನ ನೀಡಿದೆ.

ಟಿಎಂಸಿ ಮೂವರು ವಕ್ತಾರರ ಅಮಾನತು

ಕೋಲ್ಕತಾ: ಪ.ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ಹೀನಾಯ ಸೋಲನುಭವಿಸಿದ ಬೆನ್ನಲ್ಲೇ, ಪಕ್ಷ ವಿರೋಧಿ ಹೇಳಿಕೆ ನೀಡಿದ ಮೂವರು ನಾಯಕರನ್ನು ಟಿಎಂಸಿ ಅಮಾನತು ಮಾಡಿದೆ. ಪಕ್ಷದ ಶಿಸ್ತು ಉಲ್ಲಂಘಿಸಿದ ಆರೋಪದ ಮೇಲೆ ವಕ್ತಾರರಾದ ಕೊಹಿನೂರ್ ಮಜುಮ್ದಾರ್, ರಿಜು ದತ್ತ ಮತ್ತು ಕಾರ್ತಿಕ್ ಘೋಷ್ ಅವರನ್ನು 6 ವರ್ಷಗಳ ಕಾಲ ಅಮಾನತುಗೊಳಿಸಲಾಗಿದೆ.

ಫನ್‌ತರಂಗ
- ರಘುಪತಿ ಶೃಂಗೇರಿ -

ಬೆಂಗಳೂರಿನಲ್ಲಿ ಒಂದು ರಸ್ತೆ ಗುಂಡಿ ಮುಚ್ಚಲು ಒಂದು ಲಕ್ಷ ಖರ್ಚು - ವಿವಾದ
ಸುದ್ದಿ



ಅಪ್ರಾಪ್ತ ವಯಸ್ಸಿನಲ್ಲಿನ ಅಪರಾಧ ಕೃತ್ಯ | ಈಗ ಬಂಧನ, ಕೋರ್ಟ್ ಅಸಮಾಧಾನ

ವಯಸ್ಕನಾದಾಗ ಬಂಧನ ಸಲ್ಲ: ಹೈಕೋರ್ಟ್

ಬೆಂಗಳೂರು: ಅಪ್ರಾಪ್ತ ವಯಸ್ಸಿನಲ್ಲಿದ್ದಾಗ ಎಸಗಿರುವ ಅಪರಾಧಗಳನ್ನು ಆಧಾರವಾಗಿಟ್ಟುಕೊಂಡು ಗೂಂಡಾ ಕಾಯಿದೆಯಡಿ ಮುನ್ನೆಚ್ಚರಿಕಾ ಕ್ರಮವಾಗಿ ಬಂಧನ ಆದೇಶ ಹೊರಡಿಸಲು ಅಧಿಕಾರವಿಲ್ಲ ಎಂದು ಹೈಕೋರ್ಟ್ ಆದೇಶಿಸಿದೆ.

ಅಲ್ಲದೆ, ಬಳ್ಳಾರಿ ಕೇಂದ್ರ ಕಾರಾಗೃಹದಲ್ಲಿರುವ ಬಂಧಿತರಾಗಿರುವ ಅಭಿಚೇರಿ ಅಲಿಯಾಸ್ ಅಭಿ ಎಂಬುವವರನ್ನು ತಕ್ಷಣ ಬಿಡುಗಡೆ ಮಾಡಬೇಕು ಎಂದು ಸೂಚನೆ ನೀಡಿದೆ. ತಮ್ಮ ಮಗನನ್ನು ಬಂಧಿಸಿರುವ ಆದೇಶ ಪ್ರಶ್ನಿಸಿ ಕೋಲಾರ ಜಿಲ್ಲೆಯ ಕೆಜಿಎಫ್‌ನ ಮೇರಿ ಉಷಾ ಎಂಬುವರು ಸಲ್ಲಿಸಿದ್ದ ಹೇಬಿಯಸ್ ಕಾರ್ಪಸ್ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಅನು ಶಿವರಾಮನ್ ಮತ್ತು ತಾರಾ ವಿತಸ್ತ ಗಂಜು ಅವರಿದ್ದ ಪೀಠ ಈ ಆದೇಶ ನೀಡಿದೆ. ಬಂಧಿತರು 2006ರ ಅಕ್ಟೋಬರ್ 8 ರಂದು ಜನಿಸಿದ್ದು, ಪ್ರಸ್ತುತ 19 ವರ್ಷ ವಯಸ್ಸಿನವರಾಗಿದ್ದಾರೆ. ಅವರ ವಿರುದ್ಧ 2025ರ ಡಿಸೆಂಬರ್ 11ರಂದು ಗೂಂಡಾ ಕಾಯಿದೆಯಡಿ ಬಂಧನ ಆದೇಶ ಹೊರಡಿಸಲಾಗಿದೆ. ಅವರ ವಿರುದ್ಧದ ಆರೋಪಗಳು 2023, 24,25ರಲ್ಲಿ ನಡೆದಿರುವ ಘಟನೆಗಳಾಗಿವೆ. ಹೀಗಾಗಿ ಅವರನ್ನು ಬಂಧನಕ್ಕೆ ಆದೇಶ ಹೊರಡಿಸಿರುವುದು 18 ವರ್ಷಕ್ಕೂ ಕಡಿಮೆ ವಯಸ್ಸಿನಲ್ಲಿ ದಾಖಲಾಗಿರುವ ಪ್ರಕರಣಗಳನ್ನು ಉಲ್ಲೇಖಿಸಲಾಗಿದೆ.

ಏನಿದು ಪ್ರಕರಣ?

ತನ್ನ ಮಗ ಅಭಿಚೇರಿ ಕೊಲೆ ಯತ್ನ, ಹಲ್ಲೆ ಸೇರಿದಂತೆ ಹತ್ತು ಪ್ರಕರಣಗಳು ದಾಖಲಾಗಿವೆ ಎಂಬ ಕಾರಣಕ್ಕೆ 2025ರ ಡಿಸೆಂಬರ್ 11 ರಂದು ಜಿಲ್ಲಾಧಿಕಾರಿಗಳು ಆತನನ್ನು 'ಗೂಂಡಾ ಕಾಯಿದೆ' ಅಡಿ ಬಂಧಿಸಲು ಆದೇಶಿಸಿದ್ದರು. ಬಳಿಕ ಬಳ್ಳಾರಿಯ ಕೇಂದ್ರ ಕಾರಾಗೃಹದ ಬಂಧನದಲ್ಲಿಟಿರುವುದಕ್ಕೆ ಸಂಬಂಧಿಸಿದಂತೆ ಕೋಲಾರ ಜಿಲ್ಲಾಧಿಕಾರಿ 2025ರ ಡಿಸೆಂಬರ್ 11ರಂದು ಹೊರಡಿಸಿರುವ ಆದೇಶ ಮತ್ತು ಈ ಆದೇಶ ಅಂಗೀಕರಿಸಿರುವ ಗೃಹ ಇಲಾಖೆಯ ಕಾರ್ಯದರ್ಶಿ 2025ರ ಡಿಸೆಂಬರ್ 17ರಂದು ಹೊರಡಿಸಿರುವ ಆದೇಶ ಕಾನೂನು ಬಾಹಿರ ಎಂದು ಘೋಷಣೆ ಮಾಡಿ ಬಂಧನದಿಂದ ತಕ್ಷಣ ಬಿಡುಗಡೆಗೆ ನಿರ್ದೇಶನ ನೀಡಬೇಕು ಎಂದು ಕೋರಿದ್ದರು.

ಮಕ್ಕಳ ಹಕ್ಕುಗಳ ವಿರುದ್ಧದ ನಿರ್ಧಾರ

ಬಾಲನ್ಯಾಯ ಕಾಯಿದೆಯನ್ನು ಸಂವಿಧಾನದ ಪರಿಚ್ಛೇದ 15(3) ಅಡಿ ಜಾರಿ ಮಾಡಲಾಗಿದೆ. ಈ ಕಾಯಿದೆಯು ಮಕ್ಕಳ ಹಕ್ಕುಗಳ ರಕ್ಷಣೆಗೆ ಸಂಬಂಧಿಸಿದಂತೆ ವಿಶ್ವಸಂಸ್ಥೆ ಮತ್ತು ಹೇಗ್ ಸಮ್ಮೇಳನದಲ್ಲಿ

ಆಗಿರುವ ಒಡಂಬಡಿಕೆಗಳ ಅನುಸಾರದಲ್ಲಿ ಜಾರಿ ಮಾಡಲಾಗಿದೆ. ಹೀಗಾಗಿ ಕಾಯಿದೆಯ ಸೆಕ್ಷನ್ 24 ರ ಉದ್ದೇಶವು, ಅಪ್ರಾಪ್ತನಾಗಿದ್ದ ಸಂದರ್ಭದಲ್ಲಿ ಮಾಡಿದ ಅಪರಾಧ ಕೃತ್ಯಗಳು, ಅವರ ಪ್ರಾಪ್ತರಾದ ಸಂದರ್ಭದಲ್ಲಿ ಅನ್ವಯವಾಗುವುದಿಲ್ಲ ಎಂಬುದಾಗಿ ಹೇಳಲಾಗಿದೆ. ಆದ್ದರಿಂದ ಬಂಧಿತನ ವಿರುದ್ಧದ ಪ್ರಕರಣಗಳು ಅಪ್ರಾಪ್ತನಾಗಿದ್ದಾಗಿನವಾಗಿದ್ದು. ಆ ಪ್ರಕರಣಗಳ ಆಧಾರದಲ್ಲಿ ಗೂಂಡಾ ಕಾಯಿದೆಯಡಿ ಬಂಧನ ಆದೇಶ ಹೊರಡಿಸಲಾಗು ವುದಿಲ್ಲ. ಬಂಧನದ ನಿರ್ಧಾರ ತೆಗೆದುಕೊಳ್ಳುವಾಗ ಅಧಿಕಾರಿಗಳು ಹಳೆಯ ಪ್ರಕರಣಗಳನ್ನು ಗಣನೆಗೆ ತೆಗೆದುಕೊಂಡಿರುವುದು ಕಾಯ್ದೆಯ ಉದ್ದೇಶಕ್ಕೆ ವಿರುದ್ಧವಾಗಿದೆ. ಹೀಗಾಗಿ ಬಂಧನ ಆದೇಶ ರದ್ದುಪಡಿಸಿ ತಕ್ಷಣ ಬಿಡುಗಡೆ ಮಾಡಬೇಕು ಎಂದು ಆದೇಶಿಸುತ್ತಿರುವುದಾಗಿ ನ್ಯಾಯಪೀಠ ತನ್ನ ಅದೇಶದಲ್ಲಿ ತಿಳಿಸಿದೆ.

ಪ್ರೀತಿಸಿದಾಕೆ ಜತೆ ಪರಾರಿ: ಹುಡುಗನ ಅಣ್ಣನ ಅಪಹರಣ

ಬೆಂಗಳೂರು: ಪ್ರೀತಿಸಿದ ಹುಡುಗಿಯನ್ನು ಕರೆದುಕೊಂಡು ಹೋಗಿರುವ ಯುವಕನ ಸಹೋದರನನ್ನು ಯುವತಿಯ ಪೋಷಕರು ಅಪಹರಣ ಮಾಡಿ, ಹಲ್ಲೆ ನಡೆಸಿರುವ ಆರೋಪ ಬೆಂಗಳೂರಲ್ಲಿ ಕೇಳಿಬಂದಿದೆ. ಈ ಕುರಿತು ಬ್ಯಾಡರಹಳ್ಳಿ ಪೊಲೀಸ್ ಠಾಣೆಯಲ್ಲಿ ಅಪಹರಣ ಪ್ರಕರಣ ದಾಖಲಾಗಿದೆ. ಕೊಟ್ರೇಶ್ ಎಂಬಾತನನ್ನು ಅಪಹರಿಸಿ ಹಲ್ಲೆ ಮಾಡಿದ್ದಾರೆ ಎಂದು ಯುವತಿ ತಂದೆ ಮತ್ತು ಸಂಬಂಧಿಕರ ವಿರುದ್ಧ ಆರೋಪ ಕೇಳಿಬಂದಿದೆ. ನಗರದ ಖಾಸಗಿ ಕಾಲೇಜಿನಲ್ಲಿ ವೈದ್ಯಕೀಯ ವ್ಯಾಸಂಗ ಮಾಡುತ್ತಿದ್ದ ಯುವತಿಗೆ ಬಳ್ಳಾರಿ ಮೂಲದ ದೇವಸ್ಥಾನವೊಂದರ ಅರ್ಚಕ ಶಿವು ಎಂಬಾತನ ಪರಿಚಯವಾಗಿತ್ತು. ಇಬ್ಬರೂ ಪರಸ್ಪರ ಪ್ರೀತಿಸುತ್ತಿದ್ದರು. ಮನೆಯವರು ಒಪ್ಪದ ಕಾರಣಕ್ಕೆ ಶನಿವಾರ (ಮೇ 9ರಂದು) ಯುವತಿ ಮನೆ ಬಿಟ್ಟು ಶಿವು ಜತೆ ತೆರಳಿದ್ದರು ಎಂದು ತಿಳಿದುಬಂದಿದೆ. ಇದರಿಂದ ಸಿಟ್ಟಿಗೆದ್ದ ಯುವತಿಯ ತಂದೆ ಮತ್ತು ಅವರ ಕಡೆಯವರು ಬ್ಯಾಡರಹಳ್ಳಿಯ ವಿಶ್ವೇಶ್ವರ ನಗರದಲ್ಲಿ ವಾಸವಿದ್ದ ಶಿವು ಅವರ ಅಣ್ಣ ಕೊಟ್ರೇಶ್ ಅವರನ್ನು ಅಪಹರಿಸಿದ್ದಾರೆ. ಆತನ ಕೈ ಕಾಲು ಕಟ್ಟಿ, ಹಲ್ಲೆ ನಡೆಸಿದ್ದಾರೆ. ನಂತರ ಆತನಿಂದ ವಿಡಿಯೋ ಮಾಡಿಸಿ, ಆ ವಿಡಿಯೋವನ್ನ ಶಿವುಗೆ ಕಳುಹಿಸಿದ್ದಾರೆ ಎನ್ನಲಾಗಿದೆ.

ಸದ್ಯ ಘಟನೆ ಸಂಬಂಧ ಕೊಟ್ರೇಶ್‌ನ ಕುಟುಂಬದವರು ನೀಡಿರುವ ದೂರಿನನ್ವಯ ಬ್ಯಾಡರಹಳ್ಳಿ ಪೊಲೀಸ್ ಠಾಣೆಯಲ್ಲಿ ಕಿಡ್ನಾಪ್ ಪ್ರಕರಣ ದಾಖಲಾಗಿದೆ. ಪ್ರಕರಣ ದಾಖಲಾಗುತ್ತಿದ್ದಂತೆ ಆರೋಪಿಗಳು ತಲೆಮರೆಸಿಕೊಂಡಿದ್ದು, ಹುಡುಕಾಟ ನಡೆಸುತ್ತಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಕಾರಾಗೃಹ ಶಿಕ್ಷೆ ಇಳಿಸಿ ಕೋರ್ಟ್ ಮಹತ್ವದ ಆದೇಶ

ಅಪಘಾತ: ವೃದ್ಧನಿಗೆ 1 ದಿನದ ಶಿಕ್ಷೆ

ಬೆಂಗಳೂರು: ರಸ್ತೆ ಅಪಘಾತದಲ್ಲಿ ವ್ಯಕ್ತಿಯೊಬ್ಬರ ಸಾವಿಗೆ ಕಾರಣವಾಗಿದ್ದ 71 ವರ್ಷದ ಅಪರಾಧಿಯೇ ಅನಾರೋಗ್ಯಕ್ಕೆ ತುತ್ತಾಗಿ ಗಾಲಿಕುರ್ಚಿಯಲ್ಲಿ ನ್ಯಾಯಾಲಯಕ್ಕೆ ಆಗಮಿಸಿದ್ದ ಅಂಶ ಪರಿಗಣಿಸಿರುವ ಹೈಕೋರ್ಟ್, ವಿಚಾರಣಾ ನ್ಯಾಯಾಲಯ ವಿಧಿಸಿದ್ದ ಒಂದು ವರ್ಷದ ಶಿಕ್ಷೆಯನ್ನು ಒಂದು ದಿನದ ಸರಳ ಕಾರಾಗೃಹ ಶಿಕ್ಷೆಗೆ ಇಳಿಕೆ ಮಾಡಿ ಮಹತ್ವದ ಆದೇಶ ಮಾಡಿದೆ.

ವಿಚಾರಣಾ ನ್ಯಾಯಾಲಯ ವಿಧಿಸಿದ್ದ ಶಿಕ್ಷೆಯ ಪ್ರಮಾಣ ಪ್ರಶ್ನಿಸಿ ಮೈಸೂರಿನ ಬನ್ನಿಮಂಟಪ ನಿವಾಸಿ 71 ವರ್ಷದ ಸೈಫುದ್ದೀನ್ ಎಂಬುವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ವಿ.ಶ್ರೀಶಾನಂದ ಅವರಿದ್ದ ನ್ಯಾಯಪೀಠ ಈ ಆದೇಶ ನೀಡಿದೆ. ಪ್ರಕರಣ ಸಂಬಂಧ ವಿಚಾರಣಾ ನ್ಯಾಯಾಲಯ ನೀಡಿದ್ದ ಆದೇಶ, ಆರೋಪಕ್ಕೆ ಸಂಬಂಧಿಸಿದಂತೆ ಸಾಕ್ಷ್ಯಾಧಾರಗಳನ್ನು ಗಮನಿಸಿದ ನ್ಯಾಯಪೀಠ, ಅರ್ಜಿದಾರರು ಗಾಲಿಕುರ್ಚಿಗೆ ಸೀಮಿತರಾಗಿದ್ದಾರೆ. ಅವರು ದಿನನಿತ್ಯದ ಚಟುವಟಿಕೆಗಳಿಗೆ ಮತ್ತೊಬ್ಬರನ್ನು ಅವಲಂಬಿಸಿದ್ದಾರೆ. ಅವರ ವಿರುದ್ಧ ಆರೋಪಗಳಿದ್ದರೂ ಇಂತಹ ಅನಾರೋಗ್ಯ ಸ್ಥಿತಿಯಲ್ಲಿ ಜೈಲಿಗೆ ಕಳುಹಿಸಿದರೂ ಯಾವುದೇ ಪ್ರಯೋಜನವಾಗುವುದಿಲ್ಲ ಎಂದು ತಿಳಿಸಿದೆ.

ಅಲ್ಲದೇ, ಆರೋಪಿ ಮಾಡಿದ ಕೃತ್ಯದಿಂದ ಸಾವಿಗೀಡಾಗಿದ್ದ ಸಂತ್ರಸ್ತರ ಕುಟುಂಬಕ್ಕೆ ಹೆಚ್ಚುವರಿಯಾಗಿ 5 ಲಕ್ಷ ರು.ಗಳನ್ನು 2026ರ ಮೇ 15ರೊಳಗೆ ಪಾವತಿಸಬೇಕು ಎಂದು ಆದೇಶಿಸಿದೆ. ಅಲ್ಲದೇ, ಬ್ಲಡ್ ಮನಿ ಸಿದ್ಧಾಂತ ಎಂಬ ಪರಿಕಲ್ಪನೆ ಭಾರತೀಯ ಕ್ರಿಮಿನಲ್ ನ್ಯಾಯಶಾಸ್ತ್ರಕ್ಕೆ ಅನ್ಯವಾದದ್ದು. ಆದರೂ ಅರ್ಜಿದಾರರ ಆರೋಗ್ಯ ಹಾಗೂ ದೈಹಿಕ ಪರಿಸ್ಥಿತಿ ಗಮನಿಸಿ, ಇದು ವಿಶೇಷ ಪ್ರಕರಣ ಎಂದು ಪರಿಗಣಿಸಿ ಶಿಕ್ಷೆಯನ್ನು ತಿದ್ದುಪಡಿ ಮಾಡುವುದು ಸಮಂಜಸ ಎಂದು ನ್ಯಾಯಪೀಠ ಹೇಳಿದೆ.

ಪ್ರಕರಣದ ಹಿನ್ನೆಲೆ ಏನು?

2012ರ ಜುಲೈ 28ರಂದು ಕೆಆರ್‌ಎಸ್ ರಿಂಗ್ ರಸ್ತೆಯಲ್ಲಿ ಅಪರಾಧಿ ಟೆಸ್ಟ್ ಡ್ರೈವ್ ಮಾಡುತ್ತಿದ್ದ ಕಾರು ದ್ವಿಚಕ್ರವಾಹನಕ್ಕೆ ಹಿಂದಿನಿಂದ ಡಿಕ್ಕಿ ಹೊಡೆದಿತ್ತು. ಇದರಿಂದಾಗಿ ದ್ವಿಚಕ್ರವಾಹನದಲ್ಲಿ ಪ್ರಯಾಣಿಸುತ್ತಿದ್ದ ಲಕ್ಷ್ಮಿ ಎಂಬುವರು ಮೃತಪಟ್ಟು, ಅವರ ಸಹೋದರ ಸಹೋದರ ಗಂಭೀರವಾಗಿ ಗಾಯಗೊಂಡಿದ್ದರು. ಪ್ರಕರಣ ಸಂಬಂಧ ವಿಚಾರಣಾ ನಡೆಸಿದ್ದ ಮೋಟಾರು ವಾಹನಗಳ ಅಪಘಾತ ಪರಿಹಾರ ನ್ಯಾಯಾಧಿಕರಣ, ಎಲ್ಲ ಸಾಕ್ಷ್ಯಾಧಾರಗಳನ್ನು ಪರಿಗಣಿಸಿ ಆರೋಪಿಯನ್ನು ಭಾರತೀಯ ದಂಡ ಸಂಹಿತೆಯ ಸೆಕ್ಷನ್ 279 (ಅಜಾಗರೂಕ ಚಾಲನೆ), 304ಎ (ನಿರ್ಲಕ್ಷ್ಯದಿಂದ ಸಾವು ಸಂಭವಿಸುವುದು) ಸೇರಿದಂತೆ ವಿವಿಧ ಸೆಕ್ಷನ್‌ಗಳ ಅಡಿ ದೋಷಿ ಎಂದು ಪ್ರಕಟಿಸಿತ್ತು, ಈ ಆದೇಶವನ್ನು ಸೆಷನ್ಸ್ ನ್ಯಾಯಾಲಯ ಆ ತೀರ್ಪನ್ನು ದೃಢಪಡಿಸಿತ್ತು. ಈ ಆದೇಶವನ್ನು ಪ್ರಶ್ನಿಸಿ ಸೈಫುದ್ದೀನ್ ಹೈಕೋರ್ಟ್ ಮೆಟ್ಟಿಲೇರಿದ್ದರು.

FORM L-1-A-A-RA
Name of the Insurer: CreditAccess Life Insurance Limited
Registration No. and Date of Registration with the IRDAI:163, March 31, 2023
REVENUE ACCOUNT FOR THE YEAR ENDED ON 31st MARCH 2026
Policyholder's Account (Technical Account)

CreditAccess Life
Suraksha aur Samruddhi

(Amount in Rs. Lakhs)

Particulars	For the Year ended on 31st March 2026							For the Year ended on 31st March 2025						
	Total	Non-linked			Linked			Total	Non-linked			Linked		
		Individual		Group	Individual		Group		Individual		Group	Individual		Group
		Life	Pension		Life	Pension			Life	Pension		Life	Pension	
PREMIUMS EARNED - Net														
(a) Premium	62,558	-	-	62,558	-	-	-	19,297	-	-	19,297	-	-	-
(b) Reinsurance ceded	(57)	-	-	(57)	-	-	-	(40)	-	-	(40)	-	-	-
(c) Reinsurance accepted	-	-	-	-	-	-	-	-	-	-	-	-	-	-
SUB-TOTAL	**62,501**	-	-	**62,501**	-	-	-	**19,257**	-	-	**19,257**	-	-	-
INCOME FROM INVESTMENTS														
(a) Interest, Dividends & Rent – Gross	1,610	-	-	1,610	-	-	-	543	-	-	543	-	-	-
(b) Profit on sale/redemption of investments	660	-	-	660	-	-	-	347	-	-	347	-	-	-
(c) (Loss on sale/ redemption of investments)	(624)	-	-	(624)	-	-	-	(181)	-	-	(181)	-	-	-
(d)Transfer/Gain on revaluation/change in fair value	-	-	-	-	-	-	-	-	-	-	-	-	-	-
(e) Amortisation of Premium / Discount on investments	124	-	-	124	-	-	-	107	-	-	107	-	-	-
Other Income (to be specified)	-	-	-	-	-	-	-	12	-	-	12	-	-	-
Contribution from Shareholders' A/c														
(a) Towards Excess Expenses of Management	11,251	-	-	11,251	-	-	-	2,640	-	-	2,640	-	-	-
(b) Others	-	-	-	-	-	-	-	-	-	-	-	-	-	-
SUB-TOTAL	**13,021**	-	-	**13,021**	-	-	-	**3,468**	-	-	**3,468**	-	-	-
TOTAL (A)	**75,522**	-	-	**75,522**	-	-	-	**22,725**	-	-	**22,725**	-	-	-
COMMISSION	18,386	-	-	18,386	-	-	-	2,979	-	-	2,979	-	-	-
OPERATING EXPENSES RELATED TO INSURANCE BUSINESS	8,215	-	-	8,215	-	-	-	2,966	-	-	2,966	-	-	-
Provision for doubtful debts	-	-	-	-	-	-	-	-	-	-	-	-	-	-
Bad debts written off	-	-	-	-	-	-	-	-	-	-	-	-	-	-
Provision for Tax	-	-	-	-	-	-	-	-	-	-	-	-	-	-
Provisions (other than taxation)	-	-	-	-	-	-	-	-	-	-	-	-	-	-
(a) For diminution in the value of investments (Net)	-	-	-	-	-	-	-	-	-	-	-	-	-	-
(b) For others (to be specified)	-	-	-	-	-	-	-	-	-	-	-	-	-	-
Goods and Services Tax on ULIP Charges	-	-	-	-	-	-	-	-	-	-	-	-	-	-
TOTAL (B)	**26,601**	-	-	**26,601**	-	-	-	**5,945**	-	-	**5,945**	-	-	-
BENEFITS PAID (Net)	15,406	-	-	15,406	-	-	-	4,184	-	-	4,184	-	-	-
Interim Bonuses Paid	-	-	-	-	-	-	-	-	-	-	-	-	-	-
Change in valuation of liability in respect of life policies	-	-	-	-	-	-	-	-	-	-	-	-	-	-
(a) Gross	27,590	-	-	27,590	-	-	-	11,166	-	-	11,166	-	-	-
(b) Amount ceded in Reinsurance	-	-	-	-	-	-	-	-	-	-	-	-	-	-
(c) Amount accepted in Reinsurance	-	-	-	-	-	-	-	-	-	-	-	-	-	-
(d) Fund Reserve for Linked Policies	-	-	-	-	-	-	-	-	-	-	-	-	-	-
(e) Fund for Discontinued Policies	-	-	-	-	-	-	-	-	-	-	-	-	-	-
TOTAL (C)	**42,996**	-	-	**42,996**	-	-	-	**15,350**	-	-	**15,350**	-	-	-
SURPLUS/ (DEFICIT) (D) =(A)-(B)-(C)	**5,925**	-	-	**5,925**	-	-	-	**1,430**	-	-	**1,430**	-	-	-
Amount transferred from Shareholders' Account (Non-Technical Account)	-	-	-	-	-	-	-	-	-	-	-	-	-	-
AMOUNT AVAILABLE FOR APPROPRIATION	5,925	-	-	5,925	-	-	-	1,430	-	-	1,430	-	-	-
APPROPRIATIONS	-	-	-	-	-	-	-	-	-	-	-	-	-	-
Transfer to Shareholders' Account	5,925	-	-	5,925	-	-	-	1,430	-	-	1,430	-	-	-
Transfer to Other Reserves (to be specified)	-	-	-	-	-	-	-	-	-	-	-	-	-	-
Balance being Funds for Future Appropriations	-	-	-	-	-	-	-	-	-	-	-	-	-	-
TOTAL	**5,925**	-	-	**5,925**	-	-	-	**1,430**	-	-	**1,430**	-	-	-

FORM L-2-A-A-PL
Name of the Insurer: CreditAccess Life Insurance Limited
Registration No. and Date of Registration with the IRDAI:163, March 31, 2023
PROFIT & LOSS ACCOUNT FOR THE YEAR ENDED ON 31st MARCH 2026

Shareholder's Account (Non-technical Account)

(Amount in Rs. Lakhs)

Particulars	For the Year ended on 31st March 2026	For the Year ended on 31st March 2025
Amounts transferred from the Policyholders Account (Technical Account)	5,925	1,430
Income From Investments	-	-
(a) Interest, Dividends & Rent – Gross	944	745
(b) Profit on sale/redemption of investments	1,435	2,182
(c) (Loss on sale/ redemption of investments)	(808)	(262)
(d) Amortisation of Premium / Discount on Investments	54	178
Other Income	1	2
TOTAL (A)	**7,551**	**4,275**
Expense other than those directly related to the insurance business	157	128
Contribution to Policyholders' A/c		
(a) Towards Excess Expenses of Management	11,251	2,640
(b) Others	-	-
Interest on subordinated debt	-	-
Expenses towards CSR activities	11	-
Penalties	-	-
Bad debts written off	-	-
Amount Transferred to Policyholders' Account	-	-
Provisions (Other than taxation)	-	-
(a) For diminution in the value of investments (Net)	-	-
(b) Provision for doubtful debts	-	-
(c) Others (to be specified)	-	-
TOTAL (B)	**11,419**	**2,768**
Profit/ (Loss) before tax	**(3,868)**	**1,506**
Provision for Taxation	-	219
Profit / (Loss) after tax	**(3,868)**	**1,287**
APPROPRIATIONS		
(a) Balance at the beginning of the year	1,350	62
(b) Interim dividend paid	-	-
(c) Final dividend paid	-	-
(d) Transfer to reserves/ other accounts (to be specified)	-	-
Profit/Loss carried forward to Balance Sheet	**(2,518)**	**1,350**

Notes:
1) This disclosure is made in accordance with IRDAI/F&A/CIR/MISC/256/09/2021 dated September 30,2021.
2) The audited accounts for the year ended March 31,2026 have been approved in the meeting of the Board of Directors held on May 06, 2026.
3)The Previous year figures have been regrouped/reclassified whereever necessary,to conform to current year presentation

FORM L-3-A-A-BS
BALANCE SHEET AS AT 31st MARCH 2026

(Amount in Rs. Lakhs)

Particulars	As at 31st March 2026	As at 31st March 2025
Sources of Funds		
Shareholders' Funds:		
Share Capital	16,800	16,800
Share Application Money Pending Allotment	-	-
Reserves And Surplus	75	1,375
Credit/(Debit) Fair Value Change Account	(349)	(21)
Sub-Total	**16,526**	**18,154**
Borrowings	-	-
Policyholders' Funds:	-	-
Credit/(Debit) Fair Value Change Account	(669)	(81)
Policy Liabilities	46,016	18,426
Funds for discontinued policies:	-	-
(i) Discontinued on Account of non-payment of premiums	-	-
(ii) Others	-	-
Insurance Reserves	-	-
Provision for Linked liabilities	-	-
Sub-Total	**45,347**	**18,345**
Funds for Future Appropriations	-	-
Linked	-	-
Non-Linked (Non-PAR)	-	-
Non-Linked (PAR)	-	-
Deferred Tax Liabilities (Net)	-	-
TOTAL	**61,873**	**36,499**
Application of Funds		
Investments		
Shareholders'	18,244	17,310
Policyholders'	36,182	15,980
Assets held to cover Linked Liabilities		-
Loans		
Fixed Assets	658	490
Deferred Tax Assets (Net)		
Current Assets	-	
Cash and Bank Balances	3,678	2,026
Advances and Other Assets	2,361	1,712
Sub-Total (A)	**6,039**	**3,738**
Current Liabilities	1,573	944
Provisions	195	75
Sub-Total (B)	**1,768**	**1,019**
Net Current Assets (C) = (A – B)	**4,271**	**2,719**
Miscellaneous Expenditure (to the extent not written off or adjusted)	-	-
Debit Balance in Profit & Loss Account (Shareholders' Account)	2,518	-
Deficit in Revenue Account (Policyholders' A/c)		
TOTAL	**61,873**	**36,499**

Place :Bangalore
Date : 06/05/2026

For and on behalf of the Board of Directors

Sd/-
Diwakar R Boddupalli
Managing Director & CEO
DIN No. 02775640

FORM L-22A - ANALYTICAL RATIOS
Name of the Insurer: CreditAccess Life Insurance Limited

Analytical Ratios for Life Companies — Date:31st March 2026

Sl.No.	Particular	For the Year ended on 31st March 2026	For the Year ended on 31st March 2025
1	**New Business Premium Growth Rate**		
	(i) Linked Business	0%	0%
	(ii) Non-Linked Business		
	Participating	0%	0%
	Non Participating	224%	99%
2	**Percentage of Single Premium (Individual Business) to Total New Business Premium (Individual Business)**	0%	0%
3	**Percentage of Linked New Business Premium (Individual Business) to Total New Business Premium (Individual Business)**	0%	0%
4	**Net Retention Ratio**	99.91%	99.79%
5	**Conservation Ratio (Segment wise)**		
	(i) Linked Business	-	-
	(ii) Non-Linked Business	-	-
	Participating	-	-
	Non Participating	-	-
6	**Expense of Management to Gross Direct Premium Ratio**	43%	31%
7	**Commission Ratio (Gross commission and Rewards paid to Gross Premium)**	29%	15%
8	**Ratio of Policyholders' Fund to Shareholder's funds**	274%	101%
9	**Change in networth (Amount in Rs. Lakhs)**	-3868	1287
10	**Growth in Networth**	-23%	8%
11	**Ratio of Surplus to Policyholder's Fund**	13%	8%
12	**Profit after tax / Total Income**	-6%	6%
13	**(Total Real Estate + Loans)/(Cash & Invested Assets)**	0%	0%
14	**Total Investments/(Capital + Reserves and Surplus)**	323%	183%
15	**Total Affiliated Investments/(Capital+ Reserves and Surplus)**	NA	NA
16	**Investment Yield - (Gross and Net) -Fund wise and With/Without realised gain**		
	a. Shareholder's Fund:		
	Investment Yield - (Gross and Net) -Fund wise and With realised gain	9%	20%
	Investment Yield - (Gross and Net) -Fund wise and Without realised gain	5%	21%
	b. Policyholder's Fund:		
	Investment Yield - (Gross and Net) -Fund wise and With realised gain	5%	9%
	Investment Yield - (Gross and Net) -Fund wise and Without realised gain	1%	10%
17	**Persistency Ratio - Premium Basis (Regular Premium / Limited Premium Payment under Group category)**		
	For 13th month	82%	NA
	For 25th month	NA	NA
	For 37th month	NA	NA
	For 49th Month	NA	NA
	for 61st month	NA	NA
	Persistency Ratio - Number of Policy Basis (Regular Premium / Limited Premium Payment under Group category)		
	For 13th month	71%	NA
	For 25th month	NA	NA
	For 37th month	NA	NA
	For 49th Month	NA	NA
	for 61st month	NA	NA
18	**NPA Ratio**		
	Policyholder's Funds		
	Gross NPA Ratio	NA	NA
	Net NPA Ratio	NA	NA
	Shareholder's Funds		
	Gross NPA Ratio	NA	NA
	Net NPA Ratio	NA	NA
19	**Solvency Ratio**	190%	359%
20	**Debt Equity Ratio**	NA	NA
21	**Debt Service Coverage Ratio**	NA	NA
22	**Interest Service Coverage Ratio**	NA	NA
23	**Average ticket size in Rs. - Individual premium (Non-Single)**	NA	NA

ಎಸ್‌ಐಆರ್: ಬಿಜೆಪಿ ಮುಂದಿನ ಗುರಿ ಕರ್ನಾಟಕ

ಬೆಂಗಳೂರು: ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಚುನಾವಣಾ ಆಯೋಗವನ್ನು ಸಂಪೂರ್ಣವಾಗಿ ತನ್ನ ಹಿಡಿತದಲ್ಲಿ ಇಟ್ಟುಕೊಂಡಿದ್ದು, ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ (ಎಸ್‌ಐಆರ್) ಮುಂದಿನ ಗುರಿ ಕರ್ನಾಟಕ ಎಂದು ಸುಪ್ರೀಂ ಕೋರ್ಟ್‌ನ ವಕೀಲ ಪ್ರಶಾಂತ್ ಭೂಷಣ್ ಹೇಳಿದರು. ಅಸೋಸಿಯೇಷನ್ ಫಾರ್ ಪ್ರೊಟೆಕ್ಷನ್ ಆಫ್ ಸಿವಿಲ್ ರೈಟ್ಸ್ ಭಾನುವಾರ ನಗರದಲ್ಲಿ ಆಯೋಜಿಸಿದ್ದ ಕ್ಷೇತ್ರ ಮರುವಿಂಗಡಣೆ, ಮಹಿಳಾ ಮೀಸಲಾತಿ ಮತ್ತು ಎಸ್‌ಐಆರ್ ಕುರಿತ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು. ಚುನಾವಣಾ ಆಯೋಗವನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಂಡು ಪಶ್ಚಿಮ ಬಂಗಾಳದಲ್ಲಿ ವ್ಯವಸ್ಥಿತವಾಗಿ ವಿಶೇಷ ಸಮಗ್ರ ಪರಿಷ್ಕರಣೆ ಜಾರಿಗೆ ತಂದಿತು. ಸುಪ್ರೀಂಕೋರ್ಟ್ ನಿರ್ದೇಶನದ ನಂತರವೂ ಹೆಚ್ಚು ಬದಲಾವಣೆಯಾಗದೇ ಹೆಚ್ಚಿನ ಮಂದಿ ಮತದಾರರ ಪಟ್ಟಿಯಿಂದ ಹೊರಗುಳಿದರು. ಇದರಿಂದಾಗಿ ಪಶ್ಚಿಮ ಬಂಗಾಳದಲ್ಲಿ ಅಧಿಕಾರ ಹಿಡಿಯುವ ಬಿಜೆಪಿ ಕನಸು ಈಡೇರಿದೆ. ಮುಂದಿನ ಗುರಿ ಕರ್ನಾಟಕ ಹಾಗೂ ಕೇರಳ. ಇಲ್ಲಿ ಅಧಿಕಾರ ಹಿಡಿಯಲು ಎಸ್‌ಐಆರ್ ಅನ್ನು ಬಳಸಿಕೊಳ್ಳಲಿದ್ದಾರೆ ಎಂದು ಹೇಳಿದರು. ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಬಿಜೆಪಿಯ ಏಜೆಂಟರಂತೆ ಕೆಲಸ ಮಾಡಿದರು. ಬಂಗಾಳದಲ್ಲಿ ವಿಶೇಷ ಸಮಗ್ರ ಪರಿಷ್ಕರಣೆ ಜವಾಬ್ದಾರಿ ಹೊತ್ತಿದ್ದ ಅಧಿಕಾರಿಯೊಬ್ಬರು ಅಲ್ಲಿನ ಮುಖ್ಯಮಂತ್ರಿಯ ವಿಶೇಷ ಅಧಿಕಾರಿಯಾಗಿ ನೇಮಕಗೊಂಡಿದ್ದಾರೆ. ಚುನಾವಣಾ ವ್ಯವಸ್ಥೆಯನ್ನೇ ಹೈಜಾಕ್ ಮಾಡಿ ಬಿಜೆಪಿ ಅಧಿಕಾರ ಹಿಡಿಯುತ್ತಿರುವ ಮಾದರಿ ನೋಡಿದರೆ ನಮ್ಮಲ್ಲಿ ಪ್ರಜಾಪ್ರಭುತ್ವ ಅಂತ್ಯವಾಗುತ್ತಿದೆಯೇ ಎನ್ನುವ ಆತಂಕ ಎದುರಾಗಿದೆ ಎಂದರು. ಅಸೋಸಿಯೇಷನ್ ಫಾರ್ ಪ್ರೊಟೆಕ್ಷನ್ ಆಫ್ ಸಿವಿಲ್ ರೈಟ್ಸ್‌ನ ಸುಧೀರ್‌ಕುಮಾರ್ ಮುರೊಳ್ಳಿ, ಸಾಮಾಜಿಕ ಹೋರಾಟಗಾರ್ತಿ ಕೆ.ಎಸ್. ವಿಮಲಾ ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

15ಕ್ಕೆ ಒಳಚರಂಡಿ ಪುರಾಣ ನಾಟಕ ಪ್ರದರ್ಶನ

ಬೆಂಗಳೂರು: ಒಳಚರಂಡಿ ಪುರಾಣ ನಾಟಕ ಪ್ರದರ್ಶನ ಮೇ15 ರಂದು ಸಂಜೆ 7.15ಕ್ಕೆ ನಗರದ ಮಲ್ಲೇಶ್ವರದ ಸೇವಾಸದನದಲ್ಲಿ ಆಯೋಜಿಸಲಾಗಿದೆ ಎಂದು ಅಂತರಂಗ ನಾಟಕ ತಂಡ ತಿಳಿಸಿದೆ. ಒಳಚರಂಡಿ ಪುರಾಣ ನಾಟಕ ಪ್ರಸ್ತುತ ವ್ಯವಸ್ಥೆಗೆ ಹಿಡಿದ ಕನ್ನಡಿ. ಸರಕಾರಿ ಕಚೇರಿಗಳ ಕಾರ್ಯವೈಖರಿ, ವಿಡಂಬನಾತ್ಮಕವಾಗಿ ತೋರಿಸುವ ಪ್ರಯತ್ನ ಈ ನಾಟಕ ಮಾಡಿದೆ. ಚಲನಚಿತ್ರ ನಿರ್ದೇಶಕ ಡಾ.ನಾಗತಿಹಳ್ಳಿ ಚಂದ್ರಶೇಖರ ಅವರ ಸಣ್ಣ ಕತೆ ಆಧಾರಿಸಿ ನಾಟಕಕಾರ ಡಾ.ಗೌರೀಶ್ ಜೋಶಿ ಅವರು ನಾಟಕ ರಚಿಸಿದ್ದಾರೆ. ಅರ್ಚನಾ ಶ್ಯಾಮ್ ಅವರ ವಸ್ತ್ರವಿನ್ಯಾಸ, ರಂಗವಿನ್ಯಾಸ ಮತ್ತು ನಿರ್ದೇಶನದಲ್ಲಿ ಈ ನಾಟಕ ಮೂಡಿಬಂದಿದೆ. ನಾಟಕದ ಟಿಕೆಟ್‌ಗಳು ಬುಕ್ ಮೈ ಶೋ ನಲ್ಲಿ ಲಭ್ಯವಿದ್ದು, ಹೆಚ್ಚಿನ ಮಾಹಿತಿಗಾಗಿ 9880914509, 9986911321 ಸಂಪರ್ಕಿಸಿ ಎಂದು ತಂಡ ಪ್ರಕಟಣೆಯಲ್ಲಿ ತಿಳಿಸಿದೆ.

ಶಾಸಕರಿಗೆ ಪ್ರಮಾಣ ವಚನ ಮುಂದೂಡಿಕೆ



ಬೆಂಗಳೂರು: ನೂತನ ವಿಧಾನಸಭಾ ಸದಸ್ಯರ ಪ್ರಮಾಣವಚನ ಸ್ವೀಕಾರ ಕಾರ್ಯಕ್ರಮವನ್ನು ಮುಂದೂಡಲಾಗಿದೆ.ಎಚ್.ವೈ.ಮೇಟಿ ಹಾಗೂ ಶಾಮನೂರು ಶಿವಶಂಕರಪ್ಪ ನಿಧನದಿಂದ ತೆರವಾಗಿದ್ದ ಸ್ಥಾನಕ್ಕೆ ನಡೆದ ಉಪಚುನಾವಣೆಯಲ್ಲಿ ಬಾಲಗಕೋಟೆ ಹಾಗೂ ದಾವಣಗೆರೆ ಕ್ಷೇತ್ರದಿಂದ ಆಯ್ಕೆಯಾಗಿರುವ ಉಮೇಶ ಹುಲ್ಲಪ್ಪ ಮೇಟಿ ಹಾಗೂ ಸಮರ್ಥ್ ಶಾಮನೂರು ಮಲ್ಲಿಕಾರ್ಜುನ್ ಅವರು ವಿಧಾನಸಭಾ ಸದಸ್ಯರಾಗಿ ಪ್ರಮಾಣವಚನ ಸ್ವೀಕರಿಸಲು ಮೇ 11 ರಂದು ಬೆಳಗ್ಗೆ 10 ಗಂಟೆಗೆ ವಿಧಾನಸೌಧದ ಮೂರನೇ ಮಹಡಿಯಲ್ಲಿರುವ ಕೊಠಡಿ ಸಂಖ್ಯೆ: 334ರಲ್ಲಿ ಕಾರ್ಯಕ್ರಮ ನಿಗದಿಪಡಿಸಲಾಗಿತ್ತು. ಪ್ರಮಾಣವಚನ ಕಾರ್ಯಕ್ರಮವನ್ನು ಯೋಜನೆ ಮತ್ತು ಸಾಂಖ್ಯಿಕ ಸಚಿವ ಡಿ.ಸುಧಾಕರ್ ಅವರ ನಿಧನದ ಕಾರಣ ಮುಂದೂಡಲಾಗಿದೆ ಎಂದು ವಿಧಾನ ಸಭೆಯ ಕಚೇರಿ ಪ್ರಕಟಣೆ ತಿಳಿಸಿದೆ.

ಬಾಂಗ್ಲಾದವರಿಗೆ ಬಂಗಾಳ ಹೆಬ್ಬಾಗಿಲು: ಅಶೋಕ

ಬೆಂಗಳೂರು: ಪಶ್ಚಿಮ ಬಂಗಾಳವು ಬಾಂಗ್ಲಾದೇಶದ ಅಕ್ರಮ ನುಸುಳುಕೋರರಿಗೆ ಹೆಬ್ಬಾಗಿಲಾಗಿತ್ತು. ಆ ಹೆಬ್ಬಾಗಿಲನ್ನು ಒಡೆದು ದೇಶವನ್ನು ರಕ್ಷಿಸುವ ಕೆಲಸವನ್ನು ಬಿಜೆಪಿ ಮಾಡಲಿದೆ ಎಂದು ವಿಧಾನಸಭೆ ಪ್ರತಿಪಕ್ಷದ ನಾಯಕ ಆರ್.ಅಶೋಕ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಬಂಗಾಳವನ್ನು ಬಾಂಗ್ಲಾದೇಶದವರು ಗೇಟ್ ವೇ ಆಫ್ ಇಂಡಿಯಾ ರೀತಿ ಬಳಸುತ್ತಿದ್ದರು. ಪಶ್ಚಿಮ ಬಂಗಾಳಕ್ಕೆ ಬಂದು ದೇಶದ ವಿವಿಧೆಡೆ ಹರಡುತ್ತಿದ್ದರು. ಅವರಿಗೆ ಆಧಾರ್ ಕಾರ್ಡ್, ರೇಷನ್ ಕಾರ್ಡ್ ಅನ್ನು ಮಮತಾ ಬ್ಯಾನರ್ಜಿ ಅವರು ಕೊಟ್ಟು ದೇಶದಲ್ಲಿ ಎಲ್ಲಾದರೂ ಹೋಗಿ ಎಂದು ಹೇಳುತ್ತಿದ್ದರು ಎಂದರು. ಕರ್ನಾಟಕದಲ್ಲಿ ಹತ್ತು ಲಕ್ಷಕ್ಕೂ ಹೆಚ್ಚು ಬಾಂಗ್ಲಾದೇಶವರು ಇದ್ದಾರೆ. ಬೆಂಗಳೂರಿನಲ್ಲಿ ಸಾಕಷ್ಟು ಬಾಂಗ್ಲಾ ಕ್ಯಾಂಪ್‌ಗಳು ಇವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರಿಗೆ ಬಾಂಗ್ಲಾದವರು ಬೇಕು. ಅವರು ಇವರಿಗೆ ನೆಂಟರ ರೀತಿ ಆಗಿದ್ದಾರೆ. ಯಾಕೆ ಎಂದರೆ ಅವರ ಓಟು ಬೇಕು. ಈ ಸರಕಾರ ಓಟಿಗಾಗಿ ಕಣ್ಣು ಮುಚ್ಚಿಕೊಂಡು ಕೂತಿದೆ. ಓಟಿಗಾಗಿ ಬಾಂಗ್ಲಾದೇಶವರನ್ನು ಕಾಂಗ್ರೆಸ್‌ನವರು ದೇಶಕ್ಕೆ ಬಿಟ್ಟುಕೊಂಡಿದ್ದಾರೆ. ಇಂತಹ ಕೆಲಸ ಮಾಡುವ ಇವರಿಗೆ ನಾಚಿಕೆ ಆಗಬೇಕು. ಪಶ್ಚಿಮ ಬಂಗಾಳದಲ್ಲಿ ಬಾಂಗ್ಲಾದವರ ಹೆಬ್ಬಾಗಿಲು ಮುಚ್ಚಿದೆ. ಈಗ ಅವರು ಓಡು ಮಗಾ ಓಡು ಮಗಾ ಅಂತ ಓಡಬೇಕು. ಅವರು ಖದೀಮರು. ಡಕಾಯಿತಿ ಮಾಡುತ್ತಿದ್ದರು ಎಂದರು. ಬೆಂಗಳೂರಿನ ಕೋಗಿಲುವಿನಲ್ಲಿ ಹತ್ತು ಎಕರೆ ಪಾಲಿಕೆ ಜಾಗದಲ್ಲಿ ಬಾಂಗ್ಲಾದವರು ಗುಡಿಸಲು ಹಾಕಿಕೊಂಡಿದ್ದರು. ಅವರಿಗೆ ಸಿದ್ದರಾಮಯ್ಯ ಸರಕಾರ ಮನೆ ಕೊಡಲು ಹೊರಟಿತ್ತು. ಇದನ್ನು ಬಿಜೆಪಿ ವಿರೋಧಿಸಿತ್ತು. ಮಹದೇವಪುರದಲ್ಲೂ ಬಾಂಗ್ಲಾದವರು ಇದ್ದಾರೆ. ಕೊಡಗಿನಲ್ಲಿ ಕಡಿಮೆ ಕೂಲಿಗೆ ಸಿಗುತ್ತಾರೆ ಅಂತ ಬಾಂಗ್ಲಾದವರಿಗೆ ಕೆಲಸ ಕೊಡುತ್ತಿದ್ದಾರೆ. ಇದಕ್ಕೆಲ್ಲ ಮಮತಾ ಬ್ಯಾನರ್ಜಿಯೇ ಕಾರಣ. ರಾಜ್ಯದಲ್ಲಿ ಭಯೋತ್ಪಾದನಾ ಕೃತ್ಯ ಮಾಡುತ್ತಿರುವ ಬಾಂಗ್ಲಾದೇಶದವರಿಗೆ ಗೇಟ್ ಪಾಸ್ ಕೊಡಬೇಕಾಗಿದೆ ಎಂದರು.

ಕಟ್ಟಡ ಸಾಮಾಗ್ರಿಗಳು, ಜಾಹೀರಾತು ಫಲಕಗಳ ತೆರವು: ಸ್ನೇಹಲ್ ಲೋಖಂಡೆ

ಪೂರ್ವ ಪಾಲಿಕೆ: ಫುಟ್‌ಪಾತ್ ತೆರವು

ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಪಾದಚಾರಿ ಮಾರ್ಗಗಳಲ್ಲಿನ ಅಂಗಡಿಗಳನ್ನು ತೆರವು ಮಾಡಲಾಯಿತು.

> ಸಾರ್ವಜನಿಕರು ಹಾಗೂ ವ್ಯಾಪಾರಸ್ಥರು ಪಾದಚಾರಿ ಮಾರ್ಗಗಳನ್ನು ಸ್ವಯಂಪ್ರೇರಿತವಾಗಿ ಒತ್ತುವರಿಗಳನ್ನು ತೆರವುಗೊಳಿಸುವ ಮೂಲಕ ನಗರ ಪಾಲಿಕೆಗೆ ಸಹಕರಿಸುವಂತೆ ಅಪರ ಆಯುಕ್ತರು ಮನವಿ ಮಾಡಿದ್ದಾರೆ. ಇಲ್ಲದಿದ್ದಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.
> -ಲೋಖಂಡೆ ಸ್ನೇಹಲ್ ಸುಧಾಕರ್, ಪಾಲಿಕೆ ಅಪರ ಆಯುಕ್ತ

ಬೆಂಗಳೂರು: ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಪಾದಚಾರಿ ಮಾರ್ಗಗಳು, ಪ್ರಮುಖ ರಸ್ತೆ ಬದಿಗಳು ಹಾಗೂ ಸಾರ್ವಜನಿಕ ಸ್ಥಳಗಳನ್ನು ಒತ್ತುವರಿ ಮಾಡಿಕೊಂಡಿರುವ ಅಂಗಡಿಗಳು, ತಾತ್ಕಾಲಿಕ ನಿರ್ಮಾಣಗಳು, ವ್ಯಾಪಾರ ಮಳಿಗೆಗಳು, ಕಟ್ಟಡ ಸಾಮಾಗ್ರಿಗಳು, ಜಾಹೀರಾತು ಫಲಕಗಳ ತೆರವಿಗೆ ವಿಶೇಷ ಕಾರ್ಯಾಚರಣೆ ಹಮ್ಮಿಕೊಳ್ಳಲಾಗಿದೆ ಎಂದು ಪಾಲಿಕೆ ಅಪರ ಆಯುಕ್ತ ಲೋಖಂಡೆ ಸ್ನೇಹಲ್ ಸುಧಾಕರ್ ತಿಳಿಸಿದ್ದಾರೆ.

ನಗರದ ಪಾದಚಾರಿ ಮಾರ್ಗಗಳು ಸಾರ್ವಜನಿಕರ ಸುರಕ್ಷಿತ ಸಂಚಾರಕ್ಕಾಗಿ ಮೀಸಲಾಗಿದೆ. ಅವುಗಳ ಮೇಲೆ ಅಕ್ರಮ ಒತ್ತುವರಿ ಹೆಚ್ಚುತ್ತಿರುವುದರಿಂದ ಪಾದಚಾರಿಗಳು ಅನಿವಾರ್ಯವಾಗಿ ರಸ್ತೆ ಮೇಲೆ ನಡೆಯಬೇಕಾಗಿದೆ. ಇದರಿಂದ ವಾಹನ ಸಂಚಾರಕ್ಕೂ ಅಡಚಣೆ ಉಂಟಾಗಿದೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಹಂತ ಹಂತವಾಗಿ ವಿಶೇಷ ಕಾರ್ಯಾಚರಣೆ ಕೈಗೊಳ್ಳಲಾಗುತ್ತಿದೆ ಎಂದು ಸುಧಾಕರ್ ಮಾಹಿತಿ ನೀಡಿದ್ದಾರೆ.

ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯಾಚರಣೆ ಪರಿಣಾಮಕಾರಿಯಾಗಿ ನಿರ್ವಹಿಸಲು ಪ್ರತಿ ವಾರ್ಡ್ ವ್ಯಾಪ್ತಿಯ ಕಾರ್ಯಾಚರಣೆಗೆ ನಾಲ್ಕು ಮಾರ್ಷಲ್ ಸಿಬ್ಬಂದಿ, 10 ಮಂದಿ ಕಾರ್ಮಿಕರನ್ನು ನಿಯೋಜಿಸಲಾಗಿದೆ. ಈ ಸಿಬ್ಬಂದಿ 3 ಟ್ರ್ಯಾಕ್ಟರ್ ಮತ್ತು 1 ಜೆಸಿಬಿ ಯಂತ್ರದ ಸಹಾಯದೊಂದಿಗೆ ಒತ್ತುವರಿ ತೆರವುಗೊಳಿಸಲಿದ್ದಾರೆ. ಸಂಬಂಧಿತ ವಾರ್ಡ್ ಎಂಜಿನಿಯರ್‌ಗಳು ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು ಕಾರ್ಯಾಚರಣೆಯ ಮೇಲ್ವಿಚಾರಣೆ ವಹಿಸಲಿದ್ದಾರೆ.

ನಗರ ಪಾಲಿಕೆ ವ್ಯಾಪ್ತಿಯಲ್ಲಿ ಏಪ್ರಿಲ್ 27 ರಿಂದ ಮೇ 10 ರವರೆಗೆ ನಡೆಸಲಾದ ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯಾಚರಣೆಯಲ್ಲಿ ಪ್ರಮುಖವಾಗಿ ಪಾದಚಾರಿ ಮಾರ್ಗದಲ್ಲಿ ಅಡ್ಡಲಾಗಿ ಇದ್ದಂತಹ ಮಳಿಗೆಗಳು, ತಳ್ಳುವ ಗಾಡಿಗಳು, ವಾಹನ ನಿಲ್ದಾಣಗಳು, ಕಟ್ಟಡ ಸಾಮಗ್ರಿಗಳು, ಅಂಗಡಿ ಮೇಲ್ಛಾವಣಿಗಳು, ಅನಧಿಕೃತ ಜಾಹೀರಾತುಗಳು ಸೇರಿದಂತೆ ಪಾದಚಾರಿಗಳ ನಡಿಗೆಗೆ ಅನಾನುಕೂಲ ಉಂಟುಮಾಡುತ್ತಿದ್ದ ವಸ್ತುಗಳನ್ನು ತೆರವು ಮಾಡಲಾಗಿದೆ.

ರೆಂಬೆ-ಕೊಂಬೆ ತೆರವಿಗೆ ಸೂಚನೆ

ಬೆಂಗಳೂರು: ನಗರದಲ್ಲಿ ಇತ್ತೀಚೆಗೆ ಸುರಿದ ಭಾರಿ ಮಳೆಗೆ ಬಿದ್ದ ಮರಗಳು ಹಾಗೂ ರೆಂಬೆ ಕೊಂಬೆಗಳನ್ನ ತ್ವರಿತಗತಿಯಲ್ಲಿ ತೆರವು ಮಾಡುವಂತೆ ಬೆಂಗಳೂರು ಕೇಂದ್ರ ನಗರ ಪಾಲಿಕೆಯ ಅಭಿವೃದ್ಧಿ ಆಯುಕ್ತ ದಲ್ಜಿತ್ ಕುಮಾರ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಈಗಾಗಲೇ ಪಾಲಿಕೆ ವ್ಯಾಪ್ತಿಯ ಹಲವು ವಾರ್ಡ್‌ಗಳಲ್ಲಿ ಮಳೆಗೆ ಬಿದ್ದ ಮರಗಳನ್ನ ತೆರವುಗೊಳಿಸಲಾಗಿದೆ. ಏಪ್ರಿಲ್ 29 ರಿಂದ ಈವರೆಗೆ 136 ಮರಗಳು ಹಾಗೂ 269 ರೆಂಬೆ-ಕೊಂಬೆಗಳು ಬಿದ್ದಿದ್ದು, ಇದರಲ್ಲಿ ಬಿದ್ದ 136 ಮರ ಮತ್ತು 264 ರೆಂಬೆ-ಕೊಂಬೆ ತೆರವುಗೊಳಿಸಲಾಗಿದೆ. ಇನ್ನುಳಿದ ಮರ ಹಾಗೂ ರೆಂಬೆ ಕೊಂಬೆಗಳನ್ನು ತೆರವುಗೊಳಿಸುವ ಪ್ರಕ್ರಿಯೆ ನಡೆಯುತ್ತಿದೆ ಎಂದು ಬಿಬಿಎಂಪಿ ಅರಣ್ಯ ವಿಭಾಗದ ಅಧಿಕಾರಿಗಳು ತಿಳಿಸಿದ್ದಾರೆ.

ಮಳೆಗಾಲ ಮುಂಜಾಗೃತ ಕ್ರಮವಾಗಿ ಬೆಂಗಳೂರು ಕೇಂದ್ರ ನಗರ ಪಾಲಿಕೆ ವ್ಯಾಪ್ತಿ ಅಪಾ ಯಕಾರಿ ಹಾಗೂ ಒಣಗಿದ ಮರಗಳು ಹಾಗೂ ರೆಂಬೆ-ಕೊಂಬೆಗಳು ಕಂಡುಬ ಂದಲ್ಲಿ ಅವುಗಳನ್ನು ತೆರವು ಗೊಳಿಸಲು ಸಹಕರಿಸಲು ಕೋರಲಾಗಿದೆ. ಅಂತಹ ಮರಗಳು ಕಂಡುಬಂದರೆ ಅರಣ್ಯ ವಿಭಾಗದ ಅಧಿಕಾರಿಗಳ ಹಾಗೂ ನಿಯಂತ್ರಣ ಕೊಠಡಿ ದೂರವಾಣಿ ಸಂಖ್ಯೆಗಳಿಗೆ ಸಂಪರ್ಕಿಸಿ ದೂರು ಸಲ್ಲಿಸಲು ಕೋರಲಾಗಿದೆ.

> **ಯಾರನ್ನು ಸಂಪರ್ಕಿಸಬೇಕು?**
> **ಸಂತೋಷ್ ಕುಮಾರ್, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ 7019464699, ನರೇಂದ್ರ ಬಾಬು, ವಲಯ ಅರಣ್ಯಾಧಿಕಾರಿ 980685399, ವಿನಯ್ ಕುಮಾರ್.ಸಿ, ಉಪ ವಲಯ ಅರಣ್ಯಾಧಿಕಾರಿ 7760933913, ಶಿವಣ್ಣ, ಉಪ ವಲಯ ಅಣ್ಯಾಧಿಕಾರಿ 9164597895, ನಿಯಂತ್ರಣ ಕೊಠಡಿ ದೂರವಾಣಿ ಸಂಖ್ಯೆ 080-22975803 / 9480685702.**

ಬಿದ್ದ ಮರಗಳನ್ನು ತೆರವುಗೊಳಿಸುತ್ತಿರುವುದು.

ದ ವಾಂಡರರ್ ಹೂ ಓನ್ಸ್ ದ ವರ್ಲ್ಡ್ ಕೃತಿ ಅನಾವರಣ



ದ ವಾಂಡರರ್ ಹೂ ಓನ್ಸ್ ದ ವರ್ಲ್ಡ್ ಕೃತಿಯನ್ನು ಪರಮಹಂಸ ಪರಿವ್ರಾಜಕಾಚಾರ್ಯ ಯೋಗೀಶ್ವರ ಸ್ವಾಮೀಜಿ ಲೋಕಾರ್ಪಣೆಗೊಳಿಸಿದರು. ಈ ವೇಳೆ ವಿಶ್ವೇಶ್ವರ ಹೆಗಡೆ ಕಾಗೇರಿ, ಇಸ್ರೋ ಮಾಜಿ ಅಧ್ಯಕ್ಷ ಎ. ಎಸ್. ಕಿರಣ್ ಕುಮಾರ್ ಸೇರಿ ಹವಲರಿದದ್ದರು.

ಬೆಂಗಳೂರು: ನಗರದ ಸಾಂಸ್ಕೃತಿಕ ಕೇಂದ್ರ, ಆಟ ಗಲಾಟದಲ್ಲಿ ಪರಮಹಂಸ ಪರಿವ್ರಾಜಕಾಚಾರ್ಯ ಯೋಗೀಶ್ವರ ಸ್ವಾಮೀಜಿಯವರು ರಚಿಸಿರುವ ದ ವಾಂಡರರ್ ಹೂ ಓನ್ಸ್ ದ ವರ್ಲ್ಡ್ ಕೃತಿಯ ಲೋಕಾರ್ಪಣೆ ಸಮಾರಂಭವು ಜರುಗಿತು. ಪೆಂಗ್ವಿನ್ ರಾಂಡಮ್ ಹೌಸ್ ಇಂಡಿಯಾ ಪ್ರಕಟಿಸಿರುವ ಈ ಕೃತಿಯನ್ನು ಯೋಗೀಶ್ವರ್ ಸ್ವಾಮೀಜಿ ಅನಾವರಣಗೊಳಿಸಿದರು.

ಈ ಸಂದರ್ಭದಲ್ಲಿ ಪರಮಹಂಸ ಪರಿವ್ರಾಜಕಾಚಾರ್ಯ ಯೋಗೀಶ್ವರ ಸ್ವಾಮೀಜಿ ಮಾತನಾಡಿ, ಏನೂ ಇಲ್ಲದವನಿಗೆ ಜಗತ್ತೇ ಇದೆ ಎನ್ನುವ ಗಹನವಾದ ತತ್ವ ಪ್ರತಿಪಾದಿಸಿದರು. ಬಾಹ್ಯ ವ್ಯಾಮೋಹಗಳಿಂದ ಮುಕ್ತನಾದವನು ಮಾತ್ರ ಇಡೀ ಜಗತ್ತನ್ನೇ ತನ್ನದಾಗಿಸಿಕೊಳ್ಳಬಲ್ಲದು ಎಂದರು.

ವಿಶ್ವೇಶ್ವರ ಹೆಗಡೆ ಕಾಗೇರಿ ಮಾತನಾಡಿ, ಇಂದಿನ ಆಧುನಿಕ ಬದುಕಿನ ಅನಿಶ್ಚಿತತೆಯ ನಡುವೆ ಅಂತರಾತ್ಮದ ನೆಮ್ಮದಿ ಕಂಡುಕೊಳ್ಳಲು ಈ ಪುಸ್ತಕ ದಾರಿದೀಪವಾಗಿದೆ. ವೈರಾಗ್ಯ ಮತ್ತು ಆಂತರಿಕ ಸ್ವಾತಂತ್ರ್ಯವೇ ನಿಜವಾದ ಸುಖದ ತಳಹದಿ ಎಂಬ ಸ್ವಾಮೀಜಿಯವರ ಸಂದೇಶವು ಓದುಗರಲ್ಲಿ ಹೊಸ ಭರವಸೆ ಮೂಡಿಸುವಂತಿದೆ ಎಂದರು. ಇಸ್ರೋ ಮಾಜಿ ಅಧ್ಯಕ್ಷ ಎ. ಎಸ್. ಕಿರಣ್ ಕುಮಾರ್, ಮಾಜಿ ಸಚಿವ ಎಸ್. ಎ. ರಾಮದಾಸ್, ಡಿವೈಎಸ್‌ಪಿ ಸುಧೀರ್ ಎಂ. ಹೆಗ್ಡೆ, ಖ್ಯಾತ ವೈದ್ಯರಾದ ಡಾ. ಪದ್ಮನಾಭನ್, ಡಾ.ಸಂಜಯ್ ನೀರಲಗಿ ಸೇರಿ ಇತರರಿದ್ದರು.

ಮೆಡಿಕವರ್ ಮಹಿಳಾ-ಮಕ್ಕಳ ಆಸ್ಪತ್ರೆಗೆ ಚಾಲನೆ

ಮೆಡಿಕವರ್ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಗೆ ನಟಿ ರುಕ್ಮಿಣಿ ವಸಂತ ಚಾಲನೆ ನೀಡಿದರು. ಈ ವೇಳೆ ಸಂಸ್ಥೆಯ ಚೇರ್‌ಮನ್ ಡಾ.ಜಿ ಅನಿಲ್ ಕೃಷ್ಣ, ಸಿಇಒ ಹರಿಕೃಷ್ಣ, ಅಧಿಕಾರಿಗಳು, ವೈದ್ಯಕೀಯ ತಜ್ಞರು ಹಾಗೂ ಆಹ್ವಾನಿತ ಗಣ್ಯರು ಉಪಸ್ಥಿತರಿದ್ದರು.

> ತಾಯಿಯ ಪ್ರೀತಿ ಪ್ರತಿಯೊಂದು ಮನೆಯ ಹೃದಯ ಬಡಿತದಂತಿದೆ. ಆ ಹೃದಯ ಕಾಪಾಡುವ ಈ ರೀತಿಯ ಆಸ್ಪತ್ರೆ, ತಾಯಂದಿರ ದಿನದಂದು ನಮ್ಮ ನಗರದಲ್ಲಿ ಉದ್ಘಾಟಿಸುವ ಅವಕಾಶ ಸಿಕ್ಕಿರುವುದು ಸಂತೋಷದ ಸಂಗತಿ.
> -ರುಕ್ಮಿಣಿ ವಸಂತ, ನಟಿ

ಬೆಂಗಳೂರು: ತಾಯಂದಿರ ದಿನಾಚರಣೆಯಂದು ಭಾನುವಾರ ಬೆಂಗಳೂರಿನಲ್ಲಿ ಮೆಡಿಕವರ್ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ ಚಾಲನೆ ನೀಡಲಾಯಿತು. ಮೆಡಿಕವರ್ ಆಸ್ಪತ್ರೆ ಭಾನುವಾರ ವೈಟ್‌ಫೀಲ್ಡ್ ಹೂಡಿ ಜಂಕ್ಷನ್‌ನಲ್ಲಿ ಮಹಿಳೆಯರು ಮತ್ತು ಮಕ್ಕಳಿಗಾಗಿ ವಿಶೇಷವಾಗಿ ರೂಪಿಸಲಾದ 100 ಹಾಸಿಗೆಗಳ ಅತ್ಯಾಧುನಿಕ ಆಸ್ಪತ್ರೆಯನ್ನು ನಟಿ ರುಕ್ಮಿಣಿ ವಸಂತ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಚೇರ್‌ಮನ್ ಡಾ.ಜಿ ಅನಿಲ್ ಕೃಷ್ಣ, ಬೆಂಗಳೂರು ಭಾರತದ ಪ್ರಮುಖ ಆರೋಗ್ಯ ಮಾರುಕಟ್ಟೆಗಳಲ್ಲಿ ಒಂದಾಗಿದೆ. ತಾಯಂದಿರು ಮತ್ತು ಮಕ್ಕಳ ಅಗತ್ಯ ಗಮನದಲ್ಲಿಟ್ಟುಕೊಂಡು ವಿಶೇಷವಾಗಿ ರೂಪುಗೊಂಡ ಆಸ್ಪತ್ರೆ ನಗರಕ್ಕೆ ನೀಡುತ್ತಿರುವುದು ಸಂತೋಷದ ವಿಷಯ. ಗುಣಮಟ್ಟ, ಸುಲಭ ಲಭ್ಯತೆ ಮತ್ತು ವಿಶ್ವಾಸಾರ್ಹ ಚಿಕಿತ್ಸಾ ಫಲಿತಾಂಶಗಳಿಗೆ ನಾವು ಆದ್ಯತೆ ನೀಡುತ್ತೇವೆ. ಪೂರ್ವ ಬೆಂಗಳೂರಿನ ತಾಯಿ-ಮಗು ಆರೋಗ್ಯ ಸೇವೆಗಳಿಗೆ ಸಮಗ್ರ ಮತ್ತು ಉನ್ನತ ಮಟ್ಟದ ಚಿಕಿತ್ಸಾ ವೇದಿಕೆ ಒದಗಿಸುವ ಉದ್ದೇಶದಿಂದ ಈ ಆಸ್ಪತ್ರೆ ಆರಂಭಿಸಲಾಗಿದೆ. ಮೆಡಿಕವರ್ ಆಸ್ಪತ್ರೆಗಳು ನಿರೀಕ್ಷಿತ ತಾಯಂದಿರಿಗಾಗಿ ವಿಶೇಷ ಪ್ಯಾಕೇಜ್ ಪರಿಚಯಿಸಿದೆ. ಈ ಸೀಮಿತ ಉದ್ಘಾಟನಾ ಕೊಡುಗೆಯ ಭಾಗವಾಗಿ, ಮೊದಲ 100 ನೋಂದಣಿದಾರರು ಸಾಮಾನ್ಯ ಹೆರಿಗೆಗೆ 45,000 ರು. ಮತ್ತು ಸಿ-ಸೆಕ್ಷನ್‌ಗೆ 65,000 ರು. ಪ್ಯಾಕೇಜ್ ಪಡೆಯಬಹುದು. ತಜ್ಞ ಪ್ರಸೂತಿ ಆರೈಕೆ, ಸುಧಾರಿತ ಸೌಲಭ್ಯಗಳು, ನವಜಾತ ಶಿಶುಗಳ ಬೆಂಬಲ ಮತ್ತು ಸಹಾನುಭೂತಿಯ ಆರೈಕೆ ಸೇವೆಗಳೊಂದಿಗೆ, ಆಸ್ಪತ್ರೆಯು ಬೆಂಗಳೂರಿನ ಕುಟುಂಬಗಳಿಗೆ ಗುಣಮಟ್ಟದ ತಾಯಿ ಮತ್ತು ಮಕ್ಕಳ ಆರೋಗ್ಯದ ಕಾಳಜಿವಹಿಸಿದೆ ಎಂದರು.

ಶೂದ್ರ ಬಂಡಾಯ ಕೃತಿ ಲೋಕಾರ್ಪಣೆ | ಸಮಾನತೆ ತರಲು ಶಿಕ್ಷಣವೇ ಪ್ರಬಲ ಅಸ್ತ್ರ: ಮಧು ಬಂಗಾರಪ್ಪ

ಬಂಡಾಯ ಕೃತಿಗಳಿಂದ ವೈಚಾರಿಕ ವಿಚಾರ ಕ್ರಾಂತಿ

ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ, ರಾಜಕೀಯ ವಿಶ್ಲೇಷಕ ಎ.ನಾರಾಯಣ್, ಕವಯಿತ್ರಿ ಭಾರತಿ ದೇವಿ, ಕನ್ನಡ ಕೃತಿ ಅನುವಾದಕಿ ಜಯಲಕ್ಷ್ಮಿ, ಪ್ರಕಾಶಕ ಧನಂಜಯ ಎನ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಬೆಂಗಳೂರು: ಸಮಾಜದಲ್ಲಿ ಸಮಾನತೆ ತರಲು ಶಿಕ್ಷಣವೇ ಪ್ರಬಲ ಅಸ್ತ್ರ. ಶಿಕ್ಷಣದಿಂದ ಮಾತ್ರ ಸಾಮಾಜಿಕ ನ್ಯಾಯ ಸಾಧ್ಯ. ಶೂದ್ರ ಬಂಡಾಯದಂತಹ ಕೃತಿಗಳು ಓದುಗರಲ್ಲಿ ವೈಚಾರಿಕ ಕ್ರಾಂತಿ ಉಂಟು ಮಾಡುತ್ತವೆ. ಸರಕಾರವು ಸರ್ವರಿಗೂ ಸಮಾನ ಶಿಕ್ಷಣ ನೀಡುವ ನಿಟ್ಟಿನಲ್ಲಿ ಶ್ರಮಿಸುತ್ತಿದ್ದು, ಇಂತಹ ಸಾಮಾಜಿಕ ಕಳಕಳಿಯ ಕೃತಿಗಳು ನಮ್ಮ ಆಲೋಚನೆಗಳಿಗೆ ಬಲ ತುಂಬುತ್ತವೆ ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ತಿಳಿಸಿದರು.

ನಗರದ ಚಾಮರಾಜಪೇಟೆಯಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೀ ಕೃಷ್ಣರಾಜ ಪರಿಷತ್ತಿನ ಮಂದಿರದಲ್ಲಿ ಜೀರುಂಡೆ ಪುಸ್ತಕ ಪ್ರಕಾಶನದ ವತಿಯಿಂದ ಭಾನುವಾರ ಆಯೋಜಿಸಲಾಗಿದ್ದ ಶೂದ್ರ ಬಂಡಾಯ ಕೃತಿಯ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಭಾರತದ ಚಿಂತಕ ಕಂಚ ಐಲಯ್ಯ ಶೆಫರ್ಡ್ ಭಾರತೀಯ ಸಮಾಜದಲ್ಲಿ ಶೂದ್ರ ಸಮುದಾಯಗಳ ಐತಿಹಾಸಿಕ ಹಿನ್ನೆಲೆ, ಶ್ರಮ, ಸಂಸ್ಕೃತಿ ಮತ್ತು ಅವರು ಎದುರಿಸುತ್ತಿರುವ ಸಾಮಾಜಿಕ ಸವಾಲುಗಳ ಕುರಿತು ಈ ಕೃತಿಯಲ್ಲಿ ಆಳವಾಗಿ ವಿಶ್ಲೇಷಿಸಿದ್ದಾರೆ. ಜತೆಗೆ ಜಾತಿ ಪದ್ಧತಿಯ ಬೇರುಗಳನ್ನು ಗುರುತಿಸುತ್ತಾ, ಸಾಮಾಜಿಕ ಸಮಾನತೆ ಸಾಧಿಸಲು ಶೂದ್ರ ಸಮುದಾಯ ಒಗ್ಗೂಡಿ ನಡೆಸಬೇಕಾದ ಬೌದ್ಧಿಕ ಮತ್ತು ಸಾಂಸ್ಕೃತಿಕ ಹೋರಾಟದ ಅಗತ್ಯ ಇಲ್ಲಿ ಒತ್ತಿಹೇಳಿದ್ದಾರೆ ಎಂದರು.

ಪುಸ್ತಕದ ಕುರಿತು ರಾಜಕೀಯ ವಿಶ್ಲೇಷಕ ಎ.ನಾರಾಯಣ್ ಮಾತನಾಡಿ, ದೇಶದ ಸಾಮಾಜಿಕ ವಾಸ್ತವತೆ, ಧರ್ಮ, ಜಾತಿ ಹಾಗೂ ರಾಜಕೀಯ ಅರ್ಥಮಾಡಿಕೊಳ್ಳಲು ಬರಹಗಾರ ಕಂಚ ಐಲಯ್ಯ ಅವರ ಕೃತಿಗಳು ಕನ್ನಡಕ್ಕೆ ಅನುವಾದವಾಗಬೇಕು. ಶೂದ್ರ ಬಂಡಾಯ ಕೃತಿ ಮಾತೃಭಾಷೆಯ ಜತೆಗೆ ಇಂಗ್ಲಿಷ್ ಜ್ಞಾನವೂ ಅಗತ್ಯವಾಗಿದ್ದು, ಕಂಚ ಐಲಯ್ಯ ಅವರು ತೆಲುಗು ಮಾಧ್ಯಮದಲ್ಲಿ ಶಿಕ್ಷಣ ಪಡೆದಿದ್ದರೂ ಇಂಗ್ಲಿಷ್‌ನಲ್ಲಿ ಹಲವು ಮಹತ್ವದ ಪುಸ್ತಕ ರಚಿಸಿದ್ದಾರೆ. ಸರಕಾರಿ ಶಾಲಾ ಮಕ್ಕಳಿಗೆ ಇಂಗ್ಲಿಷ್ ಶಿಕ್ಷಣ ಕಲಿಸುವ ಸರಕಾರದ ಪ್ರಯತ್ನ ಒಳ್ಳೆಯ ಬೆಳವಣಿಗೆ. ಶೂದ್ರ ಪ್ರಜ್ಞೆ ಜಾಗ್ರತಗೊಳ್ಳುವ ಮೊದಲು ಈ ವರ್ಗ ಅನುಭವಿಸಿದ ಚಾರಿತ್ರಿಕ ಕಷ್ಟ ಅರಿಯುವ ಅಗತ್ಯವಿದೆ ಎಂದರು.

ಕಾರ್ಯಕ್ರಮದಲ್ಲಿ ಕವಯಿತ್ರಿ ಭಾರತಿ ದೇವಿ, ಕನ್ನಡ ಕೃತಿ ಅನುವಾದಕಿ ಜಯಲಕ್ಷ್ಮಿ, ಪ್ರಕಾಶಕ ಧನಂಜಯ.ಎನ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

> **10 ಅಧ್ಯಾಯ**
> **250 ಪುಟಗಳು ಹಾಗೂ 10 ಅಧ್ಯಾಯ ಒಳಗೊಂಡಿರುವ ಶೂದ್ರ ಬಂಡಾಯ ಪುಸ್ತಕ ಒಂದೇ ಬಾರಿ ಓದಿ ಅರ್ಥೈಸಲು ಸಾಧ್ಯವಿಲ್ಲ. ನಾಲ್ಕೈದು ಬಾರಿ ಓದಿದ ಬಳಿಕವೇ ಅದರ ಆಳ ತಿಳಿಯಬಹುದು. ದೇಶದ ಜನರ ಮೂಲಭೂತ ಅಗತ್ಯತೆ ಶತಮಾನಗಳಿಂದ ಪೂರೈಸಿದವರು ಶೂದ್ರ ವರ್ಗದವರು. ಆಹಾರ ಉತ್ಪಾದನೆ, ಬಟ್ಟೆ ನೇಯ್ಗೆ, ವಸತಿ ನಿರ್ಮಾಣ ಹಾಗೂ ದೇಶದ ಸಂಸ್ಕೃತಿ ನಿರ್ಮಾಣದಲ್ಲಿ ಶೂದ್ರ ಸಮುದಾಯದ ಪಾತ್ರ ಮಹತ್ವದ್ದಾಗಿದೆ. ಚರಿತ್ರೆ ಮತ್ತು ಪುರಾಣಗಳಲ್ಲಿ ಈ ವರ್ಗ ಕಡೆಗಣಿಸಲಾಗಿದೆ. ಈಗ ಮತ್ತೆ ಈ ವರ್ಗ ಚರಿತ್ರೆ ಕೇಂದ್ರಕ್ಕೆ ತರುವ ಕೆಲಸ ನಡೆಯಬೇಕಿದೆ ಎಂದು ವಿಶ್ಲೇಷಕ ಎ.ನಾರಾಯಣ್ ಹೇಳಿದರು.**

ದೇಶ ಒಗ್ಗೂಡಿಸುತ್ತಿರುವ ಮೋದಿ: ನಾರಾಯಣಸ್ವಾಮಿ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಜೀ ಅವರು ಇಡೀ ದೇಶವನ್ನು ಒಗ್ಗೂಡಿಸಲು ಶ್ರಮಿಸುತ್ತಿದ್ದಾರೆ. ದೇಶ ಕೇಸರಿಮಯವಾಗಲು ಕೆಲಸ ಮಾಡುತ್ತಿದ್ದಾರೆ ಎಂದು ವಿಧಾನ ಪರಿಷತ್ತಿನ ವಿರೋಧಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದರು.

ಎಚ್‌ಎಎಲ್ ವಿಮಾನ ನಿಲ್ದಾಣದ ಸಮೀಪ ಹಮ್ಮಿಕೊಂಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ಪ್ರಧಾನಿಯವರು ದೇಶದಲ್ಲಿನ ಎಲ್ಲರನ್ನೂ ಒಟ್ಟಿಗೆ ತೆಗೆದುಕೊಂಡು ಹೋಗುತ್ತಿದ್ದಾರೆ.

ಇಲ್ಲಿಗೆ ಆಗಮಿಸಿರುವುದು ಅತೀವ ಖುಷಿ ತಂದಿದೆ. ದೇಶದಲ್ಲಿ ಹಲವು ಪಕ್ಷಗಳು ಓಲೈಕೆ ರಾಜಕಾರಣ ಮಾಡುತ್ತಿವೆ. ಧರ್ಮದ ಹೆಸರಿನಲ್ಲಿ ರಾಜಕಾರಣ ಮಾಡುತ್ತಿವೆ. ಅವುಗಳನ್ನು ಅಧಿಕಾರದಿಂದ ದೂರ ಇಡಲು ಮೋದಿ ಅವರು ಶ್ರಮಿಸುತ್ತಿದ್ದಾರೆ. ಸಬ್ ಕಾ ಸಾಥ್ ಸಬ್ ಕಾ ವಿಕಾಸ್ ಸಬ್ ಕಾ ವಿಶ್ವಾಸ್ ನುಡಿಯಂತೆ ದೇಶವನ್ನು ಒಂದು ಮಾಡುತ್ತಿದ್ದಾರೆ ಎಂದರು.

ಮೋದಿ ಅವರ ಆಡಳಿತದಲ್ಲಿ ಹಿಂದೂತ್ವಕ್ಕೆ ಹೆಚ್ಚಿನ ಬೆಲೆ ಬಂದಿದೆ. ಅವರ ಪರಿಶ್ರಮಕ್ಕೆ ನಾವೆಲ್ಲ ಋಣಿಯಾಗಿರಬೇಕು. ದೇಶ ಎಂದೂ ಕಾಣದ ಬಿಕ್ಕಟ್ಟನ್ನು ಇಂದು ಕಾಣ್ತ ಇದ್ದೇವೆ. ಇಂತಹುದರಲ್ಲಿ ದೇಶವನ್ನು ಸಮರ್ಥವಾಗಿ ಮುನ್ನಡೆಸುತ್ತಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಅಭೂತಪೂರ್ವ ಜಯ ಸಾಧಿಸಿದೆ. ಪಶ್ಚಿಮ ಬಂಗಾಳವನ್ನು ಎಲ್ಲಿ ಕಳೆದುಕೊಳ್ಳುತ್ತೇವೊ ಎಂಬ ಆತಂಕ ನಮಗೆಲ್ಲ ಇತ್ತು. ಆದರೆ ಆ ರಾಜ್ಯದಲ್ಲಿ ಬಿಜೆಪಿ ಗೆದ್ದು ಆ ಆತಂಕವನ್ನು ದೂರ ಮಾಡಿದ್ದಾರೆ ಎಂದು ನುಡಿದರು.

ವರ್ಚುವಲ್‌ನಲ್ಲಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಪುತ್ತಿಗೆ ಮಠದ ಸುಗುಣೇಂದ್ರ ತೀರ್ಥ ಸ್ವಾಮೀಜಿ

ಅಮೆರಿಕದ ನ್ಯೂ ಜೆರ್ಸಿಯಲ್ಲಿ ಬನ್ನಂಜೆ-90 ವಿಶ್ವನಮನ

ಬೆಂಗಳೂರು: ಅಮೆರಿಕದ ನ್ಯೂ ಜೆರ್ಸಿಯಲ್ಲಿ ಮೇ 9ರಂದು ನಡೆದ ಬನ್ನಂಜೆ-90 ವಿಶ್ವನಮನ ಕಾರ್ಯಕ್ರಮಕ್ಕೆ ಪುತ್ತಿಗೆ ಮಠದ ಸುಗುಣೇಂದ್ರ ತೀರ್ಥ ಸ್ವಾಮೀಜಿಯವರು ವಿಡಿಯೊ ಸಂದೇಶದ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ನ್ಯೂ ಜೆರ್ಸಿಯಲ್ಲಿರುವ ಪುತ್ತಿಗೆಮಠ ಕೃಷ್ಣವೃಂದಾವನದ ಆನಂದತೀರ್ಥ ಮಂಡಪಂ ಸಭಾಂಗಣದಲ್ಲಿ ದಿನವಿಡೀ ನಡೆದ ಕಾರ್ಯಕ್ರಮ ಒಂದು ಜ್ಞಾನಪ್ರಸರಣಯಜ್ಞ ಎಂಬಂತೆ ಹಮ್ಮಿಕೊಳ್ಳಲಾಗಿತ್ತು.

ಈ ಕುರಿತು ಆಶಯಭಾಷಣದಲ್ಲಿ ಡಾ.ಗುರುರಾಜ ಕರ್ಜಗಿ ಮಾತನಾಡಿ, ವಿದ್ಯಾವಾಚಸ್ಪತಿ ಬನ್ನಂಜೆ ಗೋವಿಂದಾಚಾರ್ಯರು ಮಾಧ್ವಸಂಪ್ರದಾಯದವರಾಗಿದ್ದರೂ ಪ್ರಖರ ಪಾಂಡಿತ್ಯ, ಆಳವಾದ ಅಧ್ಯಯನ, ಮತ್ತು ಜ್ಞಾನಪ್ರಸರಣಗಳಿಂದ ತ್ರಿಮತಸ್ಥರಿಗೂ ಮಾನ್ಯರಾಗಿದ್ದವರು. ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಈ ಮೂರೂ ಚಿಂತನೆಗಳನ್ನು ಅವರು ವಸ್ತುನಿಷ್ಠವಾಗಿ ಮತ್ತು ಸಹಿಷ್ಣುತೆಯಿಂದ ಅರಿತುಕೊಂಡು ಇತರರಿಗೂ ಬೋಧಿಸಿದವರು. ಭಗವಂತನ ನಲ್ನುಡಿ ಎಂದು ಭಗವದ್ಗೀತೆಗೆ ಅವರು ಬರೆದ ವ್ಯಾಖ್ಯಾನ ಅನನ್ಯವಾದುದು. ಗೋವಿಂದಾಚಾರ್ಯರು ಹಾಕಿಕೊಟ್ಟ ಜೀವನಾದರ್ಶ ಮತ್ತು ಜ್ಞಾನಪಿಪಾಸುತನ ನಮಗೆಲ್ಲರಿಗೂ ಅನುಕರಣೀಯ ಎಂದರು. ಬನ್ನಂಜೆಯವರು ಬರೆದ ಕೆಲವು ಭಾವಗೀತೆಗಳ ಗಾಯನದ ಹಾಡುಗಬ್ಬ ಕವಿತಾ ಉಡುಪ ನಡೆಸಿಕೊಟ್ಟರು. ರಮೇಶ್ ಲಕ್ಷ್ಮೀಶನ್ ನಿರ್ದೇಶನದಲ್ಲಿ ದ್ವಾದಶಸ್ತೋತ್ರದ ಕನ್ನಡ ಅವತರಣಿಕೆಯ ವೃಂದಗಾನ, ದೀಪ್ತಿ ಗಡ್ ನಿರ್ದೇಶನದಲ್ಲಿ ಮಕ್ಕಳು ಪ್ರಸ್ತುತಪಡಿಸಿದ ಉಡುಪಿಯ ಕಂಡೀರಾ ಕೃಷ್ಣನ ಕಂಡೀರಾ ಗಾಯನ, ಇಂಗ್ಲಿಷ್ ವ್ಯಾಖ್ಯಾನ, ಮತ್ತು ಭಗವದ್ಗೀತೆಯ ಶ್ಲೋಕ ಒಳಗೊಂಡಿದ್ದ ಪ್ರಸ್ತುತಿಯು ಅತ್ಯಾಕರ್ಷಕವಾಗಿ ಮೂಡಿಬಂದು ಎಲ್ಲರ ಮೆಚ್ಚುಗೆ ಗಳಿಸಿತು. ದಿ.ಬನ್ನಂಜೆ ಗೋವಿಂದಾಚಾರ್ಯರ 90ನೆಯ ಜಯಂತಿ ಸಂದರ್ಭದಲ್ಲಿ ವರ್ಷದುದ್ದಕ್ಕೂ ಕರ್ನಾಟಕದ ವಿವಿದೆಡೆಗಳಲ್ಲಿ ನಡೆದಿರುವ ಬನ್ನಂಜೆ ವಿಶ್ವನಮನ ಕಾರ್ಯಕ್ರಮ ಸರಣಿ ಇದೀಗ ಅಮೆರಿಕಕ್ಕೂ ವಿಸ್ತರಿಸಿದಂತಾಗಿದೆ. ನ್ಯೂಜೆರ್ಸಿಯ ನಂತರ ಮೇ. 16ರಂದು ಹ್ಯೂಸ್ಟನ್, 17ರಂದು ಫೀನಿಕ್ಸ್, 26ರಂದು ಸ್ಯಾನ್ ಹೋಸೆಯಲ್ಲಿಯೂ ಬನ್ನಂಜೆ ವಿಶ್ವನಮನ ಏರ್ಪಾಡಾಗಿದೆ. ಕಾರ್ಯಕ್ರಮದಲ್ಲಿ ಬನ್ನಂಜೆಯವರ ಪುತ್ರಿಯರಾದ ವೀಣಾ ಬನ್ನಂಜೆ, ಕವಿತಾ ಉಡುಪ, ಹಾಗೂ ಪುತ್ತಿಗೆ ಮಠದ ಆಡಳಿತಾಧಿಕಾರಿ ಪ್ರಸನ್ನ ಆಚಾರ್ಯ ಉಪಸ್ಥಿತರಿದ್ದರು.

ಅಮೆರಿಕದ ನ್ಯೂ ಜೆರ್ಸಿಯಲ್ಲಿ ನಡೆದ ಬನ್ನಂಜೆ-90 ವಿಶ್ವನಮನ ಕಾರ್ಯಕ್ರಮವನ್ನು ಡಾ. ಗುರುರಾಜ ಕರ್ಜಗಿ ಉದ್ಘಾಟಿಸಿದರು. ಈ ವೇಳೆ ನ್ಯೂಯಾರ್ಕ್‌ನ ಪ್ರೊ.ಪಿ.ಆರ್.ಮುಕುಂದ್, ನ್ಯೂಜೆರ್ಸಿಯ ದೀಪಕ್ ಶರ್ಮ, ಕೆನಡಾದ ಬಿ.ಎಂ.ರಮೇಶ್, ವಾಷಿಂಗ್ಟನ್ ಡಿಸಿಯ ಜಯಕೃಷ್ಣ ನೆಲಮಂಗಲ, ಅಟ್ಲಾಂಟಾದ ಸುಪರ್ಣಾ ಪೊಯಪಾಕ್ಕಂ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

> **ವಿದ್ವಾಂಸರಿಗೆ ಸನ್ಮಾನ**
> ಬನ್ನಂಜೆಯವರ ನಿಕಟವರ್ತಿಗಳಾಗಿದ್ದ ನ್ಯೂಯಾರ್ಕ್‌ನ ಡಾ.ಪೂರ್ಣಪ್ರಸಾದ್ -ವೀಣಾ ದಂಪತಿಯ ಮಾರ್ಗದರ್ಶನದೊಂದಿಗೆ ಫಿಲಿಡೆಲ್ಫಿಯಾದ ಶ್ರೀವತ್ಸ ಬಲ್ಲಾಳ ಅವರ ಮುಂದಾಳತ್ವದಲ್ಲಿ ಕಾರ್ಯಕ್ರಮ ನಡೆಯಿತು. ನ್ಯೂಯಾರ್ಕ್‌ನ ಪ್ರೊ.ಪಿ.ಆರ್.ಮುಕುಂದ್, ನ್ಯೂಜೆರ್ಸಿಯ ದೀಪಕ್ ಶರ್ಮ, ಕೆನಡಾದ ಬಿ.ಎಂ. ರಮೇಶ್, ವಾಷಿಂಗ್ಟನ್ ಡಿಸಿಯ ಜಯಕೃಷ್ಣ ನೆಲಮಂಗಲ, ಅಟ್ಲಾಂಟಾದ ಸುಪರ್ಣಾ ಪೊಯಪಾಕ್ಕಂ ಮುಂತಾದವರಿಂದ ಉಪನ್ಯಾಸಗಳು, ಬನ್ನಂಜೆಯವರೊಡನೆ ಒಡನಾಟವಿದ್ದ ಎಸ್.ವಿ.ಆಚಾರ್ಯ ಮತ್ತು ಡಾ.ಸುಧೀಂದ್ರ ಅವರಿಂದ ನೆನಪುಗಳು ವಿಶ್ವನಮನ ಅರ್ಥಪೂರ್ಣವಾಗಿಸಿದವು. ಕೃಷ್ಣವೃಂದಾವನದ ಪ್ರಧಾನ ಅರ್ಚಕ ಯೋಗೀಂದ್ರ ಭಟ್ ಉಳಿ, ಶುಭಾಶೀರ್ವಚನ ಮಾಡಿ ವಿದ್ವಾಂಸರಿಗೆ ಸನ್ಮಾನಿಸಿದರು.

ರೆಡ್ ಎಫ್‌ಎಂ ವಾಕಥಾನ್‌ಗೆ ಸೈನಾ ಚಾಲನೆ

ವಾಕಥಾನ್‌ನಲ್ಲಿ ಬ್ಯಾಡ್ಮಿಂಟನ್ ಆಟಗಾರ್ತಿ ಸೈನಾ ನೆಹ್ವಾಲ್ ಸೇರಿದಂತೆ ಅಸೆಟ್ಜ್ ಕಂಪನಿಯ ಉದ್ಯೋಗಿಗಳು ಭಾಗವಹಿಸಿದ್ದರು.

> ಆರೋಗ್ಯ ಪಾಲನೆ ಮತ್ತು ಸಮಾಜದ ಒಳಿತಿಗಾಗಿ ನಡೆದ ಈ ನಡಿಗೆಯಲ್ಲಿ ನಗರದ 5,000ಕ್ಕೂ ಹೆಚ್ಚು ಮಂದಿ ಪಾಲ್ಗೊಂಡಿದ್ದರು. ವೇಗವಾಗಿ ಬೆಳೆಯುತ್ತಿರುವ ನಗರ ಜೀವನದಲ್ಲಿ ಆರೋಗ್ಯದ ಮಹತ್ವ ಸಾರಲು 3 ಕಿ.ಮೀ, 5 ಕಿ.ಮೀ ಮತ್ತು 10 ಕಿ.ಮೀ ವಿಭಾಗಗಳಲ್ಲಿ ಈ ವಾಕಥಾನ್ ಆಯೋಜಿಸಿದ್ದೇವೆ. ಅದ್ಭುತ ಸ್ಪಂದನೆ ಸಿಕ್ಕಿದೆ.
> -ಸುನಿಲ್ ಪಾರೀಕ್, ಅಸೆಟ್ಜ್ ನ ಕಾರ್ಯನಿರ್ವಾಹಕ ನಿರ್ದೇಶಕ

ಬೆಂಗಳೂರು: ರೆಡ್ ಎಫ್‌ಎಂ ವಾಕಥಾನ್‌ಗೆ ಒಲಿಂಪಿಕ್ ಪದಕ ವಿಜೇತೆ ಸೈನಾ ನೆಹ್ವಾಲ್ ಚಾಲನೆ ನೀಡಿದರು. ಅಸೆಟ್ಜ್ ಸಂಸ್ಥೆಯ ಸಹಯೋಗದೊಂದಿಗೆ ಆಯೋಜಿಸಲಾಗಿದ್ದ ರೆಡ್ ಎಫ್‌ಎಂ ವಾಕಥಾನ್ ಭಾನುವಾರ ನಗರದ ಸೇಂಟ್ ಜೋಸೆಫ್ ಬಾಯ್ಸ್ ಹೈಸ್ಕೂಲ್‌ನಲ್ಲಿ ಆಯೋಜಿಸಲಾಗಿತ್ತು.

ಈ ಕುರಿತು ಬ್ಯಾಡ್ಮಿಂಟನ್ ಆಟಗಾರ್ತಿ ಸೈನಾ ನೆಹ್ವಾಲ್ ಮಾತನಾಡಿ, ದೈಹಿಕ ಸಾಮರ್ಥ್ಯ ಯಾವಾಗಲೂ ನನ್ನ ಜೀವನದ ಪ್ರಮುಖ ಭಾಗವಾಗಿದೆ. ಪ್ರತಿಯೊಂದು ಸಣ್ಣ ಹೆಜ್ಜೆಯೂ ನಮ್ಮನ್ನು ದೊಡ್ಡ ಗುರಿಯತ್ತ ಕೊಂಡೊಯ್ಯುತ್ತದೆ ಎಂಬುದನ್ನು ಬ್ಯಾಡ್ಮಿಂಟನ್ ಕೋರ್ಟ್ ನನಗೆ ಕಲಿಸಿದೆ. ಇಂದು ರೆಡ್ ಎಫ್‌ಎಂ ವಾಕಥಾನ್ ನಲ್ಲಿ ಸಾವಿರಾರು ಬೆಂಗಳೂರಿಗರು ಉದ್ದೇಶಪೂರ್ವಕವಾಗಿ ಹೆಜ್ಜೆ ಹಾಕುತ್ತಿರುವುದನ್ನು ನೋಡುವುದು ಸ್ಫೂರ್ತಿದಾಯಕವಾಗಿದೆ. ಇಲ್ಲಿ ಹಾಕುವ ಪ್ರತಿಯೊಂದು ಹೆಜ್ಜೆಯೂ ಹಿಂದುಳಿದ ಮಕ್ಕಳಿಗೆ ಎಐ ಚಾಲಿತ ಶಿಕ್ಷಣ ಸೌಲಭ್ಯವನ್ನು ಒದಗಿಸಲು ಸಹಾಯ ಮಾಡುತ್ತದೆ. ಈ ಆಂದೋಲನದ ಭಾಗವಾಗಲು ನನಗೆ ಹೆಮ್ಮೆ ಎನಿಸುತ್ತದೆ ಎಂದರು.

ಅಸೆಟ್ಜ್ ನ ಕಾರ್ಯನಿರ್ವಾಹಕ ನಿರ್ದೇಶಕ ಸುನಿಲ್ ಪಾರೀಕ್ ಮಾತನಾಡಿ, ಯೋಗಕ್ಷೇಮ ಎಂಬುದು ಈಗ ಕೇವಲ ಐಷಾರಾಮಿ ಜೀವನಶೈಲಿ ಅಲ್ಲ, ಬದಲಿಗೆ ಯೋಗಕ್ಷೇಮ ಪ್ರಜ್ಞೆಯು ನಗರ ಮೂಲಸೌಕರ್ಯದ ಅವಿಭಾಜ್ಯ ಅಂಗವಾಗುತ್ತಿದೆ ಎಂದರು.

ಸಮಾಚಾರ ಸಣ್ಣದಲ್ಲ

ಬೋಟ್ ಮಗುಚಿ ಮೀನುಗಾರ ಸಾವು

ಕಾರವಾರ: ಮೀನುಗಾರಿಕೆಗೆ ತೆರಳಿದ್ದ ಬೋಟ್ ಅಲೆಗಳ ಹೊಡೆತಕ್ಕೆ ಸಿಕ್ಕು ಮುಳುಗಡೆಯಾಗಿ ಒಬ್ಬ ಸಾವನ್ನಪ್ಪಿರುವ ಘಟನೆ ಉತ್ತರ ಕನ್ನಡ ಜಿಲ್ಲೆಯ

ಹೊನ್ನಾವರ ತಾಲೂಕಿನ ಅಪ್ಸರಕೊಂಡ ಕಡಲತೀರದಲ್ಲಿ ನಡೆದಿದೆ. ಹೊನ್ನಾವರದ ಚಂದ್ರಕಾಂತ ಖಾವಿರ್ (38) ಸಮುದ್ರ ಪಾಲಾದ ಮೀನುಗಾರ. ಭಾನುವಾರ ಬೆಳಗ್ಗೆ ಮೀನುಗಾರಿಕೆಗೆ ಬೋಟ್ ತೆಗೆದುಕೊಂಡು ಸಮುದ್ರಕ್ಕಿಳಿದಿದ್ದ ಇಬ್ಬರು ಮೀನುಗಾರರು ಮತ್ಸ್ಯ ಬೇಟೆಯಲ್ಲಿ ತೊಡಗಿದ್ದಾಗ ಏಕಾಏಕಿ ಸಮುದ್ರದ ಬೃಹತ್ ಅಲೆ ಬೋಟ್‌ಗೆ ಅಪ್ಪಳಿಸಿದೆ. ಈ ವೇಳೆ ಬೋಟ್‌ನಲ್ಲಿದ್ದ ಇಬ್ಬರು ಮೀನುಗಾರರು ನೀರುಪಾಲಾಗಿದ್ದಾರೆ. ಈ ವೇಳೆ ಚಂದ್ರಕಾಂತ ಖಾವಿರ್ ಸಮುದ್ರದಲ್ಲಿ ಮುಳಗಿ ಸಾವು ಕಂಡರೆ, ಅದೃಷ್ಟವಶಾತ್ ಇನ್ನೋರ್ವ ಮೀನುಗಾರ ಕೇಶವ ಖಾರ್ವಿ ಪ್ರಾಣಾಪಾಯದಿಂದ ಪಾರಾಗಿದ್ದು, ಈಜಿ ದಡ ಸೇರಿದ್ದಾರೆ. ಘಟನೆ ಸಂಬಂಧ ಹೊನ್ನಾವರ ತಾಲೂಕಿನ ಮಂಕಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಖಾತೆಯಿಂದ ₹18 ಲಕ್ಷ ವರ್ಗಾವಣೆ

ಚಿಕ್ಕಮಗಳೂರು: ಜಿಲ್ಲೆಯಲ್ಲಿ ಸೈಬರ್ ಕ್ರೈಂ ದಿನದಿಂದ ದಿನಕ್ಕೆ ಹೆಚ್ಚಳ ಆಗುತ್ತಿದ್ದು, ಜನವರಿಯಿಂದ ಇಲ್ಲಿಯತನಕ 29 ಪ್ರಕರಣಗಳು ದಾಖಲಾಗಿವೆ. ಇದರಲ್ಲಿ ಮಹಿಳೆಯೊಬ್ಬರ ಬ್ಯಾಂಕ್ ಖಾತೆಯಿಂದ 18.24 ಲಕ್ಷ ರುಪಾಯಿಯನ್ನು ಸೈಬರ್ ಖದೀಮರು ಎಗರಿಸಿದ್ದಾರೆ. ಮಹಿಳೆಗೆ ಯಾವುದೇ ಆ್ಯಪ್‌ನ ಲಿಂಕ್ ಬಂದಿಲ್ಲ, ಒಟಿಪಿಯೂ ಬಂದಿಲ್ಲ. ಆದರೂ ಹಂತ ಹಂತವಾಗಿ 18 ಲಕ್ಷ ರು.ಬ್ಯಾಂಕ್ ಖಾತೆಯಿಂದ ಮಾಯವಾಗಿದೆ. ಇದು ಸೈಬರ್ ವಂಚಕರ ಹೊಸ ವರಸೆಯಾಗಿದೆ. ಖಾಸಗಿ ಬ್ಯಾಂಕ್‌ವೊಂದರ ಖಾತೆಯಿಂದ ಹಂತ ಹಂತವಾಗಿ ಒಟ್ಟು 18.24 ಲಕ್ಷ ರೂಪಾಯಿ ಹಣವನ್ನು ವಂಚಕರು ವರ್ಗಾವಣೆ ಮಾಡಿಕೊಂಡಿರುವುದು ಬ್ಯಾಂಕ್ ಪರಿಶೀಲನೆ ವೇಳೆ ಪತ್ತೆಯಾಗಿದೆ. ಮಹಿಳೆಯ ಖಾತೆಯಿಂದ ಮಾರ್ಚ್ 4 ರಿಂದ ಎಪ್ರಿಲ್ 21ರ ವರೆಗೆ ವಿವಿಧ ದಿನಾಂಕಗಳಲ್ಲಿ ಹಣ ಕಡಿತವಾಗಿದೆ. ಈ ಮಹಿಳೆಯ ಖಾತೆಯಿಂದ ಹಲವು ಅಪರಿಚಿತ ಖಾತೆಗಳಿಗೆ ಹಣ ವರ್ಗಾವಣೆಯಾಗಿದೆ ಎಂದು ಪೊಲೀಸರು ಶಂಕಿಸಿದ್ದಾರೆ. ಈ ಸಂಬಂಧ ತನಿಖೆ ಮುಂದುವರಿದಿದೆ.

ದುಷ್ಕರ್ಮಿಗಳ ಪತ್ತೆಗೆ ವಿಜಯೇಂದ್ರ ಆಗ್ರಹ

ಬೆಂಗಳೂರು: ದೇಶದ ಪ್ರಧಾನಮಂತ್ರಿಗಳ ನಿಗದಿತ ಸಂಚಾರದ ರಸ್ತೆಯಲ್ಲೇ ಜಿಲೆಟಿನ್ ಕಡ್ಡಿಗಳು ಪತ್ತೆಯಾಗಿರುವುದು ಗಂಭೀರ ಭದ್ರತಾ ಲೋಪ ಮಾತ್ರವಲ್ಲ. ಇದು ಕಾನೂನು ಸುವ್ಯವಸ್ಥೆ ಹೊಣೆ ಹೊತ್ತಿರುವ ರಾಜ್ಯದ ಕಾಂಗ್ರೆಸ್ ಸರಕಾರದ ಅಕ್ಷಮ್ಯ ಮತ್ತು ಗಂಭೀರ ವೈಫಲ್ಯ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಆರೋಪಿಸಿದ್ದಾರೆ. ಕಾಂಗ್ರೆಸ್ ಸರಕಾರದ ಆಳ್ವಿಕೆಯಲ್ಲಿ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ, ಭದ್ರತೆ ಸಂಪೂರ್ಣ ಕುಸಿದಿದೆ. ಅದೂ ಕೂಡ ರಾಜಧಾನಿ ಬೆಂಗಳೂರಿನಲ್ಲಿ ಎಂದು ಅವರು ಸಾಮಾಜಿಕ ಜಾಲತಾಣದಲ್ಲಿ ಖಂಡಿಸಿದ್ದಾರೆ. ಗರಿಷ್ಠ ಭದ್ರತೆ ನೀಡಬೇಕಾದ ದೇಶದ ಆದರಣೀಯ ಪ್ರಧಾನಮಂತ್ರಿಗಳ ಸುರಕ್ಷತೆ ವಿಷಯದಲ್ಲಿ ಕಿಂಚಿತ್ ಲೋಪಕ್ಕೂ ಅವಕಾಶ ಇರಕೂಡದು. ಇಂತಹ ಸೂಕ್ಷ್ಮ, ಗಂಭೀರ ವಿಷಯವನ್ನು ರಾಜ್ಯ ಸರಕಾರ ಗಂಭೀರವಾಗಿ ಪರಿಗಣಿಸಿ, ಶೀಘ್ರದಲ್ಲಿ ಕೂಲಂಕುಶ ತನಿಖೆ ನಡೆಸಿ, ಕೃತ್ಯದ ಹಿಂದಿನ ದುಷ್ಕರ್ಮಿಗಳನ್ನು ಪತ್ತೆ ಮಾಡಿ ಶಿಕ್ಷಿಸುವುದು ಮಾತ್ರವಲ್ಲ, ನಿರ್ಲಕ್ಷ್ಯ ವಹಿಸಿದ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಎಲ್ಲ ಶಾಲೆಗಳಲ್ಲಿ ದ್ವಿಭಾಷಾ ಮಾಧ್ಯಮ

ಬೆಂಗಳೂರು: ಸರಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ನೀಡಲು ಮಹತ್ವದ ಕ್ರಮ ಕೈಗೊಂಡಿದ್ದು, ಮುಂದಿನ ವರ್ಷದೊಳಗೆ ಎಲ್ಲ ಶಾಲೆಗಳಲ್ಲಿ ದ್ವಿಭಾಷಾ ಮಾಧ್ಯಮ ಜಾರಿಗೆ ತರಲಾಗುವುದು ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು. ನಗರದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜಯಲಕ್ಷ್ಮಿ ಬಿ.ಅವರು ಕನ್ನಡಕ್ಕೆ ಅನುವಾದಿಸಿರುವ ಕಂಚ ಐಲಯ್ಯ ಅವರ ಶೂದ್ರ ಬಂಡಾಯ ಪುಸ್ತಕ ಜನಾರ್ಪಣೆಗೊಳಿಸಿ ಮಾತನಾಡಿದರು. ಈಗಾಗಲೇ ಹಲವು ಶಾಲೆಗಳಲ್ಲಿ ದ್ವಿಭಾಷಾ ಮಾಧ್ಯಮ ಅನುಷ್ಠಾನಗೊಳಿಸಲಾಗಿದೆ. ಸರಕಾರಿ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮ ಆರಂಭಿಸುವುದಾಗಿ ಘೋಷಿಸಿದಾಗ ಕನ್ನಡ ವಿರೋಧಿ ಎಂದು ಟೀಕಿಸಿದರು. ಅದಕ್ಕೆ ತಲೆಕೆಡಿಸಿಕೊಳ್ಳಲಿಲ್ಲ. ನಾನು ಕನ್ನಡ ವಿರೋಧಿ ಅಲ್ಲ. ಕನ್ನಡಕ್ಕೆ ಆದ್ಯತೆ ನೀಡಲಾಗುವುದು ಎಂದರು.

ರಷ್ಯಾ-ಉಕ್ರೇನ್ ರಕ್ತಪಾತ ಅಂತ್ಯದತ್ತ

← ಮೊದಲ ಪುಟದಿಂದ

ಆದರೆ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಜೊತೆ ನೇರ ಮಾತುಕತೆ ನಡೆಸುವ ಮೊದಲು ಶಾಂತಿ ಒಪ್ಪಂದದ ಬಗ್ಗೆ ಸಾಮಾನ್ಯ ತಿಳಿವಳಿಕೆ ಬೇಕು ಎಂದು ಷರತ್ತು ಹಾಕಿದ್ದಾರೆ. ಇನ್ನೊಂದೆಡೆ, ಟ್ರಂಪ್ ಯುದ್ಧವನ್ನು ಶಾಶ್ವತವಾಗಿ ನಿಲ್ಲಿಸಲು ಎರಡೂ ದೇಶಗಳು ಮುಂದಾಗಬೇಕು ಎಂದು ಕರೆ ನೀಡಿದ್ದಾರೆ. ಈ ಯುದ್ಧವು ಎರಡನೇ ಮಹಾಯುದ್ಧದ ನಂತರ ಮಾನವ ಜೀವಹಾನಿಯ ದೃಷ್ಟಿಯಿಂದ ಅತ್ಯಂತ ಭೀಕರವಾಗಿದೆ ಎಂದು ಅವರು ಹೇಳಿದ್ದಾರೆ. ಈ ಯುದ್ಧದ ಪರಿಣಾಮ ಎರಡೂ ದೇಶಗಳು ಭಾರೀ ಹಾನಿ ಅನುಭವಿಸಿವೆ. ರಷ್ಯಾದ ಮೇಲೆ ಜಗತ್ತಿನ ಹಲವು ದೇಶಗಳು ಆರ್ಥಿಕ ದಿಗ್ಬಂಧನ ವಿಧಿಸಿದ್ದರಿಂದ ವಿದೇಶಿ ನೆಲದಲ್ಲಿದ್ದ ಅದರ ಕಂಪನಿಗಳು, ಬ್ಯಾಂಕ್‌ಗಳು ಬಹುತೇಕ ಬಾಗಿಲು ಹಾಕಿವೆ. ರಷ್ಯಾ ಕರೆನ್ಸಿ ರೂಬೆಲ್ ಮೌಲ್ಯ ಕಳೆದುಕೊಂಡಿದೆ. ಉಕ್ರೇನ್ ಸಂಪೂರ್ಣ ಆರ್ಥಿಕ ದುಸ್ಥಿತಿಗೆ ತಲುಪಿದೆ.

ಯೋಗೀಶಗೌಡ ಗೌಡರ ಕೊಲೆ ಪ್ರಕರಣ | ಜೈಲು ಸೇರಿದ ವಿನಯ್ ಕುಲಕರ್ಣಿ ಶಾಸಕತ್ವ ಅನರ್ಹ

ಧಾರವಾಡ ಕ್ಷೇತ್ರದಲ್ಲಿ ಇನ್ನೂ ಶಾಸಕ ವಿನಯ್ ಆಡಳಿತ

ಶ್ರೀಕಾಂತ ಬೆಟಗೇರಿ ಧಾರವಾಡ

ಕೊಲೆ ಪ್ರಕರಣದಲ್ಲಿ ದೋಷಿಯಾಗಿ, ಶಾಸಕಸ್ಥಾನ ಅನರ್ಹಗೊಂಡು ವಿನಯ್ ಕುಲಕರ್ಣಿ ಅವರು ಜೈಲು ಸೇರಿದರೂ, ಧಾರವಾಡ ಪಾಲಿಕೆ ಹಾಗೂ ಜಿಲ್ಲಾ ಪಂಚಾಯಿತಿ ಕಚೇರಿಯಲ್ಲಿ ವಿನಯ್ ಕುಲಕರ್ಣಿ ಹೆಸರಿನ ನಾಮಫಲಕಗಳು ಇವೆ.

ಶಾಸಕ ಸ್ಥಾನ ಅನರ್ಹಗೊಂಡರು ಇನ್ನು ಜೈಲಿನಿಂದಲೇ ವಿನಯ್ ಕುಲಕರ್ಣಿ ಅವರು ಕ್ಷೇತ್ರದ ಆಡಳಿತ ನಡೆಸುತ್ತಿದ್ದಾರೆ ಎಂಬ ಗುಮಾನಿ ಸಾರ್ವಜನಿಕ ವಲಯದಲ್ಲಿ ಕೇಳಿ ಬರುತ್ತಿದೆ. ಜಿಲ್ಲಾ ಪಂಚಾಯತ್ ಸದಸ್ಯ ಯೋಗೀಶಗೌಡ ಗೌಡರ ಕೊಲೆ ಪ್ರಕರಣ ಇಡೀ ರಾಜ್ಯಾದ್ಯಂತ ಸುದ್ದಿ ಮಾಡಿತ್ತು. ಈಗ ಆ ಪ್ರಕರಣ ವಿಚಾರಣೆ ಮುಗಿದು ಆರೋಪಿಗಳು ಜೈಲು ಸೇರಿದ್ದಾರೆ.

ಈ ಪ್ರಕರಣದಲ್ಲಿ ಮಾಜಿ ಸಚಿವ, ಹಾಲಿ ಶಾಸಕರಾಗಿದ್ದ ವಿನಯ ಕುಲಕರ್ಣಿ ಅವರು ಕೂಡಾ ಜೀವಾವಧಿ ಶಿಕ್ಷೆಗೆ ಒಳಗಾಗಿ ಜೈಲು ಸೇರವಾಸ ಅನುಭವಿಸುತ್ತಿದ್ದಾರೆ. ನಂತರ ವಿನಯ ಕುಲಕರ್ಣಿ ಅವರ ಶಾಸಕತ್ವ ಅನರ್ಹಗೊಳ್ಳುವ ವಿಷಯವು ಕೂಡಾ ರಾಜ್ಯಾದ್ಯಂತ ತೀವ್ರ ಚರ್ಚೆಗೆ ಒಳಗಾಗಿತ್ತು. ಜೈಲಿನಲ್ಲಿಯೇ ಇದ್ದುಕೊಂಡು ಧಾರವಾಡ ಗ್ರಾಮೀಣ ವಿಧಾನಸಭಾ ಕ್ಷೇತ್ರದ ಶಾಸಕರಾಗಿ ವಿನಯ ಕುಲಕರ್ಣಿ ಆಯ್ಕೆಗೊಳ್ಳುವ ಮೂಲಕ ಇತಿಹಾಸ ಬರೆದಿದ್ದರು. ಈಗ ವಿನಯ ಕುಲಕರ್ಣಿ ಅವರ ಶಾಸಕತ್ವ ಅನರ್ಹಗೊಂಡರು ಜೈಲಿನಿಂದಲೇ ಧಾರವಾಡ ಗ್ರಾಮೀಣ ಕ್ಷೇತ್ರದ ಶಾಸಕರಾಗಿ ಆಡಳಿತ ಮುಂದೂವರೆದಿದೆ ಎನ್ನುವ ಪ್ರಶ್ನೆ ಜನರನ್ನು ಕಾಡುತ್ತಿದೆ.

ಹೌದು...! ಇದಕ್ಕೆ ಸಾಕ್ಷಿ ಎನ್ನುವಂತೆ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಧಾರವಾಡ ಕಚೇರಿಯಲ್ಲಿ ಹಾಗೂ ತಾಲೂಕ ಪಂಚಾಯತ್‌ನಲ್ಲಿ ಶಾಸಕ ವಿನಯ ಕುಲಕರ್ಣಿ ಅವರ ಪ್ರತ್ಯೇಕ ಕಚೇರಿಗಳು ಇವೆ. ಆದರೆ, ಎರಡು ಕಡೆ ಅವರ ಹೆಸರಿನ ಬೋರ್ಡ್‌ಗಳು ರಾರಾಜಿಸುತ್ತಿರುವುದು ಕಂಡು ಬರುತ್ತಿವೆ. ಹೀಗಾಗಿ ಶಾಸಕರ ಆಡಳಿತ ಕ್ಷೇತ್ರದಲ್ಲಿ ಮುಂದೂವರೆದಿದೆಯಾ ಹೇಗೆ ಎನ್ನುವ ಗೊಂದಲ ಜನರಲ್ಲಿ ಮೂಡಿದೆ.

ಹೈಕೋರ್ಟ್‌ನಲ್ಲಿ ವಿಚಾರಣೆ

ತಮಗೆ ವಿಧಿಸಿರುವ ಜೀವಾವಧಿ ಶಿಕ್ಷೆಯನ್ನು ರದ್ದುಪಡಿಸಲು ಕೋರಿ ವಿನಯ ಕುಲಕರ್ಣಿ ಹೈಕೋರ್ಟ್ ಮೆಟ್ಟಿಲೇರಿದ್ದು, ಆ ಅರ್ಜಿ ವಿಚಾರಣೆಯನ್ನು ಹೈಕೋರ್ಟ್ ಸಧ್ಯ ಮುಂದೂಡಿದೆ. ಒಂದು ವೇಳೆ ನ್ಯಾಯಾಲಯ ವಿನಯ ಕುಲಕರ್ಣಿ ಅವರಿಗೆ ನಿರ್ದೋಶಿ ಎಂದು ತೀರ್ಪು ನೀಡಿದಲ್ಲಿ ಅವರ ಶಾಸಕತ್ವಸ್ಥಾನ ಮರುಸ್ಥಾಪನೆಯಾಗಲಿದೆ ಎಂದು ಸ್ಪೀಕರ್ ಯು.ಟಿ. ಖಾದರ ತಿಳಿಸಿದ್ದಾರೆ.

ಕಚೇರಿ ಮುಂಭಾಗ ಬೋರ್ಡ್

ಧಾರವಾಡ ಮಹಾನಗರ ಪಾಲಿಕೆ ಕಚೇರಿ ಮುಂಭಾಗದಲ್ಲಿಯೇ ಮಾನ್ಯ ವಿನಯ ಕುಲಕರ್ಣಿ, ಶಾಸಕರು ಎಂಬ ಬೋರ್ಡ್ ಎದ್ದು ಕಾಣುವಂತೆ ಇದೆ. ಆದರೆ, ಪ್ರತಿ ದಿನ ಪಾಲಿಕೆ ಅಧಿಕಾರಿಗಳು ಓಡಾಡುತ್ತಿರುತ್ತಾರೆ. ಅವರ ಗಮನಕ್ಕೂ ಬಂದಿಲ್ಲ ಎಂದರೆ ಹೇಗೆ ಎನ್ನುವ ಯಕ್ಷ ಪ್ರಶ್ನೆ ಜನರನ್ನು ಕಾಡುತ್ತಿದೆ.

ವಿನಯ ಶಾಸಕತ್ವ ಅನರ್ಹ...
ಯೋಗೀಶಗೌಡ ಗೌಡರ ಕೊಲೆ ಪ್ರಕಣವನ್ನು ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಸುಧೀರ್ಘ ವಿಚಾರಣೆ ನಡೆಸಿದ ಬಳಿಕ ಧಾರವಾಡ ಗ್ರಾಮೀಣ ವಿಧಾನಸಭಾ ಕ್ಷೇತ್ರದ ಪ್ರತಿನಿಧಿಯಾಗಿ ಪ್ರತಿನಿಧಿಸುತ್ತಿದ್ದ ವಿನಯ ಕುಲಕರ್ಣಿ ಅವರು ಆರೋಪಿ ಎಂದು ಸಾಭಿತಾದ ಮೇಲೆ ಅವರ ಶಾಸಕತ್ವ ಅನರ್ಹಗೊಂಡ ವಿಷಯ ಇಡೀ ರಾಜ್ಯಾದ್ಯಂತ ತಿಳಿದಿರುವ ವಿಷಯ.

ಇನ್ನೂ ಶಾಸಕರ ಆಡಳಿತ: ಎರಡನೇ ಶನಿವಾರ ರಜಾ ದಿನವಾಗಿದ್ದರೂ ಕೂಡಾ ಮಧ್ಯಾಹ್ನದ ವೇಳೆಯಲ್ಲಿ ಧಾರವಾಡ ಪಾಲಿಕೆ ಕಚೇರಿಯಲ್ಲಿರುವ ವಿನಯ ಕುಲಕರ್ಣಿ ಕಚೇರಿ ತೆರೆದಿತ್ತು. ಅಗತ್ಯ ಕೆಲಸ ಕಾರ್ಯಗಳನ್ನು ಮಾಡಿಸಿಕೊಳ್ಳಲು ಕ್ಷೇತ್ರದ ನಾಲ್ಕೈದು ಜನರು ಆಗಮಿಸಿದ್ದು ಕಂಡು ಬಂದಿತು. ಕಚೇರಿಯಲ್ಲಿರುವ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿರುವುದು ಕಂಡುಬಂದಿತು. ಆದರೆ, ಪಾಲಿಕೆಯ ಯಾವುದೇ ಕಚೇರಿಗಳು ಕಾರ್ಯಾರಂಭ ಮಾಡುತ್ತಿರಲಿಲ್ಲ.

ವಿನಯ್ ಛಾಯಾಚಿತ್ರಗಳು: ಪಾಲಿಕೆ ಆವರಣದಲ್ಲಿರುವ ಶಾಸಕರ ಕಚೇರಿಯಲ್ಲಿ ಮಾನ್ಯ ವಿನಯ ಕುಲಕರ್ಣಿ ಶಾಸಕರು ಎಂಬ ಬೋರ್ಡ್ ಹಾಗೇ ಇದೆ. ಅಷ್ಟೇ ಅಲ್ಲ ಕಚೇರಿ ಒಳಗೆ ವಿನಯ ಕುಲಕರ್ಣಿಯವರು ಇರುವಂತಹ ಸಾಕಷ್ಟು ಛಾಯಾಚಿತ್ರಗಳು ಗೋಡೆ ಮೇಲೆ ರಾರಾಜಿಸುತ್ತಿವೆ. ಅವುಗಳನ್ನು ಸಹ ಜಿಲ್ಲಾಡಳಿತವಾಗಲಿ ಹಾಗೂ ಮಹಾನಗರ ಪಾಲಿಕೆಯಾಗಲಿ ತೆರವುಗೊಳಿಸಿಲ್ಲ ಯಾಕೆ ಎಂಬ ಅನುಮಾನ ಜನರನ್ನು ಕಾಡುತ್ತಿದೆ.

ತೆಗೆಯುವುದು ಸಾಮಾನ್ಯ: ಇಂತಹ ಪ್ರಕರಣಗಳು ಆದಾಗ ಸಹಜವಾಗಿ ಅವರ ಹೆಸರು ಇರುವಂತಹ ಬೋರ್ಡ್‌ಗಳಾಗಲಿ ಹಾಗೂ ಛಾಯಾಚಿತ್ರಗಳನ್ನು ತೆಗೆಯುವುದು ಸಾಮಾನ್ಯ. ಆದರೆ, ವಿನಯ ಕುಲಕರ್ಣಿ ಅವರ ಶಾಸಕತ್ವ ಅನರ್ಹವಾದರೂ ಕೂಡಾ ಹಾಗೇ ಇರುವುದು ಧಾರವಾಡ ಜಿಲ್ಲೆಯ ಆಡಳಿತ ವ್ಯವಸ್ಥೆ ಎಷ್ಟು ಗಟ್ಟಿಯಾಗಿದೆ ಎನ್ನುವುದಕ್ಕೆ ಇದೇ ಸಾಕ್ಷಿ. ಅಧಿಕಾರಿಗಳ ಬೇಜವಾಬ್ದಾರಿ ಕೂಡಾ ಎದ್ದು ಕಾಣುತ್ತದೆ. ಮತ್ತೆ ಇದಕ್ಕೆ ಯಾರು ಹೊಣೆ ಎನ್ನುವ ಸಹಜ ಪ್ರಶ್ನೆಯೂ ಹುಟ್ಟಿಹಾಕಿದೆ.

---

293 ಇನ್‌ಸ್ಪೆಕ್ಟರ್‌ಗಳ ವರ್ಗಾವಣೆ

ಬೆಂಗಳೂರು: ರಾಜ್ಯ ಸರಕಾರ ಪೊಲೀಸ್ ಇಲಾಖೆಯಲ್ಲಿ ಭಾರಿ ಮಟ್ಟದ ವರ್ಗಾವಣೆ ಪ್ರಕ್ರಿಯೆ ಕೈಗೊಂಡಿದೆ. ದೀರ್ಘ ಕಾಲದಿಂದ ಬಾಕಿ ಉಳಿದಿದ್ದ ಪೊಲೀಸ್ ಇನ್‌ಸ್ಪೆಕ್ಟರ್ ಹಾಗೂ



ಡಿವೈಎಸ್‌ಪಿ ದರ್ಜೆಯ ಅಧಿಕಾರಿಗಳ ವರ್ಗಾವಣೆಗೆ ಕೊನೆಗೂ ಚಾಲನೆ ನೀಡಲಾಗಿದ್ದು, ಒಟ್ಟು 293 ಪೊಲೀಸ್ ಇನ್‌ಸ್ಪೆಕ್ಟರ್ (ಸಿವಿಲ್) ಹಾಗೂ 74 ಡಿವೈಎಸ್‌ಪಿ (ಸಿವಿಲ್) ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಸರಕಾರ ಆದೇಶ ಹೊರಡಿಸಿದೆ. ಮೇ 10, 2026ರಂದು ನಡೆದ ಪೊಲೀಸ್ ಸಿಬ್ಬಂದಿ ಮಂಡಳಿಯ ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ ಈ ವರ್ಗಾವಣೆ ಆದೇಶಗಳನ್ನು ಹೊರಡಿಸಲಾಗಿದೆ. ಆಡಳಿತಾತ್ಮಕ ಹಿತದೃಷ್ಟಿಯಿಂದ ಹಾಗೂ ಸಾರ್ವಜನಿಕ ಸೇವೆಯ ದಕ್ಷತೆಯನ್ನು ಹೆಚ್ಚಿಸುವ ಉದ್ದೇಶದಿಂದ ಈ ಪ್ರಮುಖ ಬದಲಾವಣೆ ಮಾಡಲಾಗಿದೆ ಎಂದು ಡಿಜಿ ಮತ್ತು ಐಜಿಪಿ ಕಚೇರಿಯ ಮೂಲಗಳು ತಿಳಿಸಿವೆ.

74 ಡಿವೈಎಸ್‌ಪಿಗಳ ವರ್ಗಾವಣೆ: ಇನ್‌ಸ್ಪೆಕ್ಟರ್‌ಗಳ ಜತೆಗೆ 74 ಡಿವೈಎಸ್‌ಪಿ ದರ್ಜೆಯ ಅಧಿಕಾರಿಗಳಿಗೂ ಹೊಸ ಸ್ಥಳಗಳನ್ನು ನಿಯುಕ್ತಿಗೊಳಿಸಲಾಗಿದೆ. ಉಪವಿಭಾಗಗಳ ಎಸಿಪಿ ಮತ್ತು ಡಿವೈಎಸ್‌ಪಿ ಹುದ್ದೆಗಳಲ್ಲಿ ಮಹತ್ತರ ಬದಲಾವಣೆಗಳಾಗಿವೆ. ಬೆಂಗಳೂರು ನಗರದ ಸಂಚಾರ ವಿಭಾಗ, ವಿಶೇಷ ಜಾರಿ ಕೋಶ ಮತ್ತು ಜಿಲ್ಲಾ ಪೊಲೀಸ್ ಉಪವಿಭಾಗಗಳಲ್ಲಿ ಹೊಸ ಅಧಿಕಾರಿಗಳು ಅಧಿಕಾರ ಸ್ವೀಕರಿಸಲಿದ್ದಾರೆ.

ವಿವಿಧ ಸ್ಥಳಗಳಿಗೆ ನಿಯೋಜನೆ

ವರ್ಗಾವಣೆಗೊಂಡ 293 ಇನ್‌ಸ್ಪೆಕ್ಟರ್‌ಗಳಲ್ಲಿ ಹೆಚ್ಚಿನವರು ಬೆಂಗಳೂರು ನಗರ, ಮೈಸೂರು, ಮಂಗಳೂರು ಮತ್ತು ಹುಬ್ಬಳ್ಳಿ-ಧಾರವಾಡದಂತಹ ಪ್ರಮುಖ ನಗರ ಪ್ರದೇಶಗಳ ವಿವಿಧ ಠಾಣೆಗಳಿಗೆ ನಿಯುಕ್ತಿಗೊಂಡಿದ್ದಾರೆ. ಲೋಕಾಯುಕ್ತ, ಭ್ರಷ್ಟಾಚಾರ ನಿಗ್ರಹ ದಳ ಮತ್ತು ವಿಶೇಷ ತನಿಖಾ ತಂಡಗಳಿಂದ ಹಲವು ಅಧಿಕಾರಿಗಳನ್ನು ಕಾನೂನು ಮತ್ತು ಸುವ್ಯವಸ್ಥೆ ವಿಭಾಗಕ್ಕೆ ತರಲಾಗಿದ್ದರೆ, ಕೆಲವು ಅನುಭವಿ ಅಧಿಕಾರಿಗಳನ್ನು ಕ್ರೈಂ ಬ್ರ್ಯಾಂಚ್ ಮತ್ತು ಗುಪ್ತಚರ ವಿಭಾಗಗಳಿಗೆ ನಿಯೋಜಿಸಲಾಗಿದೆ. ಪ್ರಮುಖವಾಗಿ ಸೂರ್ಯನಗರ, ಮಡಿವಾಳ, ಚಂದ್ರಾ ಲೇಔಟ್‌ನಂತಹ ಪ್ರಮುಖ ಠಾಣೆಗಳ ಇನ್‌ಸ್ಪೆಕ್ಟರ್‌ಗಳನ್ನು ಬದಲಾಯಿಸಲಾಗಿದೆ.

ಆರೋಪಿಗಳಿಗೆ ಗಲ್ಲು ಶಿಕ್ಷೆ ಪ್ರಕಟಿಸಿದ ಭದ್ರಾವತಿಯ 4ನೇ ಹೆಚ್ಚುವರಿ ಕೋರ್ಟ್

ಪ್ರಿಯಕರನ ಜತೆ ಸೇರಿ ಗಂಡನ ಹತ್ಯೆ ಪ್ರಕರಣ

ಶಿವಮೊಗ್ಗ: ಅಕ್ರಮ ಸಂಬಂಧಕ್ಕೆ ಅಡ್ಡಿಯಾಗಿದ್ದ ಗಂಡನನ್ನು ಕೊಲೆ ಮಾಡಿದ್ದ ಪತ್ನಿ ಮತ್ತು ಆಕೆಯ ಪ್ರಿಯಕರನಿಗೆ ಭದ್ರಾವತಿಯ 4ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಗಲ್ಲು ಶಿಕ್ಷೆ ವಿಧಿಸಿದೆ.

ಫ್ಲೋರಾ ನ್ಯಾನ್ಸಿ ಮತ್ತು ರಾಜಶೇಖರಯ್ಯ ಗಲ್ಲು ಶಿಕ್ಷೆಗೆ ಗುರಿಯಾದ ಅಪರಾಧಿಗಳು. ಇಬ್ಬರಿಗೂ 14 ಲಕ್ಷ ರು.ದಂಡ ಹಾಗೂ ದೂರುದಾರರಿಗೆ ಪರಿಹಾರವಾಗಿ 5 ಲಕ್ಷ ರು. ನೀಡುವಂತೆ ನ್ಯಾಯಾಧೀಶರಾದ ಇಂದಿರಾ ಮೈಲಸ್ವಾಮಿ ಚೆಟ್ಟಿಯಾರ್ ತೀರ್ಪು ನೀಡಿದ್ದಾರೆ. ಭದ್ರಾವತಿಯ ಖಾಸಗಿ ನರ್ಸಿಂಗ್ ಹೋಮ್‌ನಲ್ಲಿ ನರ್ಸ್ ಆಗಿ ಕೆಲಸ ಮಾಡುತ್ತಿದ್ದ ಸುರಗಿತೋಪಿನ ಗ್ರಾಮದ ಫ್ಲೋರಾ ನ್ಯಾನ್ಸಿಯ ವಿವಾಹ 2014 ರಲ್ಲಿ ಹತ್ತಿರದ ಸಂಬಂಧಿ ಪ್ರಕಾಶ್ ಬಾಬು ಜತೆ ಆಗಿತ್ತು. ಟ್ಯಾಕ್ಸಿ ಚಾಲಕನಾಗಿ ಪ್ರಕಾಶ್ ಬಾಬು ಕೆಲಸ ಮಾಡಿಕೊಂಡಿದ್ದರು. ಈ ದಂಪತಿಗೆ ಮಕ್ಕಳಿರಲಿಲ್ಲ. ಮದುವೆಯ ಕೆಲ ವರ್ಷಗಳ ನಂತರ ಫ್ಲೋರಾ ನಾನ್ಸಿಗೆ ರಾಜಶೇಖರಯ್ಯ ಜತೆ ಸಂಬಂಧ ಬೆಳೆದಿತ್ತು. ಇದಕ್ಕೆ ಪತಿ ಪ್ರಕಾಶ್ ಬಾಬು ಆಕ್ಷೇಪ ವ್ಯಕ್ತಪಡಿಸಿದ್ದ. ಇದರಿಂದ ಇರುಸುಮುರಿಸಿಗೆ ಒಳಗಾಗಿದ್ದ ಪತ್ನಿ 2020ರ ಜ.15 ರಂದು ರಾತ್ರಿ ಇಲ್ಲಿನ ಸುರಗಿ ತೋಪಿನಲ್ಲಿರುವ ಮನೆಯಲ್ಲಿ ಪತಿಗೆ ತಂಪು ಪಾನೀಯದಲ್ಲಿ ಮತ್ತು ಬರಿಸುವ ಮಾತ್ರೆ ಬೆರೆಸಿ ಕುಡಿಸಿದ್ದಳು. ಪತಿ ನಿದ್ದೆಗೆ ಜಾರಿದ ಬಳಿಕ ಪ್ರಿಯಕರನನ್ನು ಮನೆಗೆ ಕರೆಸಿಕೊಂಡು ಪತಿಯ ಕತ್ತು ಹಿಸುಕಿ ಉಸಿರುಗಟ್ಟಿಸಿ ಕೊಲೆ ಮಾಡಿದ್ದರು. ಬಳಿಕ ಇಬ್ಬರೂ ಶವವನ್ನು ಕಾರಲ್ಲಿ ತೆಗೆದುಕೊಂಡು ಹೋಗಿ, ತರೀಕೆರೆ ತಾಲೂಕಿನ ಲಿಂಗದಹಳ್ಳಿ ಸಮೀಪದ ಭದ್ರಾ ನಾಲೆಗೆ ಎಸೆದು ಬಂದಿದ್ದರು. 3 ದಿನಗಳ ಬಳಿಕ ಶವ ದೊರೆತಿತ್ತು. ಪ್ರಕಾಶ್ ಬಾಬು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದೇ ಭಾವಿಸಲಾಗಿತ್ತು. ಮೃತನ ಸಹೋದರ ಫ್ರಾನ್ಸಿಸ್ ನೀಡಿದ ದೂರು ಆಧರಿಸಿ ತನಿಖೆ ಆರಂಭಿಸಿದ ಪೇಪರ್ ಟೌನ್ ಠಾಣೆ ಪೊಲೀಸರು, ಪ್ರಕರಣ ಭೇದಿಸಿದ್ದರು. ವಿಚಾರಣೆಯಲ್ಲಿ ಆರೋಪ ಸಾಬೀತಾಗಿದ್ದು, ನ್ಯಾಯಾಧೀಶರಾದ ಇಂದಿರಾ ಮೈಲಸ್ವಾಮಿ ಚೆಟ್ಟಿಯಾರ್ ಅವರು ಇಬ್ಬರಿಗೂ ಗಲ್ಲು ಶಿಕ್ಷೆ ಹಾಗೂ 14 ಲಕ್ಷ ರು.ದಂಡ ವಿಧಿಸಿದ್ದಾರೆ. ಮೃತನ ಸಹೋದರ ಫ್ರಾನ್ಸಿಸ್‌ಗೆ 5 ಲಕ್ಷ ರು.ಪರಿಹಾರ ನೀಡುವಂತೆ ಕೋರ್ಟ್ ಆದೇಶಿಸಿದೆ.

- **ಅಕ್ರಮ ಸಂಬಂಧಕ್ಕೆ ಅಡ್ಡಿಯೆಂದು ಪ್ರಿಯಕರನ ಜತೆ ಸೇರಿ ಗಂಡನ ಹತ್ಯೆ**
- **ಅಡುಗೆಯಲ್ಲಿ ನಿದ್ದೆ ಮಾತ್ರೆ ಕೊಟ್ಟು ಬಳಿಕ ಕತ್ತು ಹಿಸುಕಿ ಕೊಲೆ**
- **ಆತ್ಮಹತ್ಯೆ ಎಂದು ಬಿಂಬಿಸಲು ಶವವನ್ನು ಭದ್ರಾನಾಲೆಗೆ ಎಸೆದಿದ್ದ ಕೀಚಕರು**

ಅನ್ಯಾಯ ಮಾಡಿದರೆ ಮೆಟ್ಟಿನಿಂದ ಹೊಡೆಯುವೆ

ಚಿಕ್ಕೋಡಿ: ರೈತರು ಮತ್ತು ನನ್ನ ಕ್ಷೇತ್ರದ ಜನರ ಸ್ವಾಭಿಮಾನಕ್ಕೆ ಧಕ್ಕೆಯಾದರೆ ಸುಮ್ಮನಿರುವುದಿಲ್ಲ. ಅಂತಹ ಪ್ರಸಂಗ ಬಂದರೆ ಮೆಟ್ಟಿನಲ್ಲಿ ಹೊಡೆಯುತ್ತೇನೆ ಎಂದು ಕಾಂಗ್ರೆಸ್ ಶಾಸಕ ಲಕ್ಷ್ಮಣ್ ಸವದಿ ಪರೋಕ್ಷವಾಗಿ ಎದುರಾಳಿಗಳಿಗೆ ಎಚ್ಚರಿಕೆ ನೀಡಿದರು.



ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ತೇಲಸಂಗ ಗ್ರಾಮದಲ್ಲಿ ಸಾರ್ವಜನಿಕ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ಈ ಸಂದರ್ಭದಲ್ಲಿ ತಮ್ಮ ವಿರುದ್ಧ ನಡೆಯುತ್ತಿರುವ ವೈಯಕ್ತಿಕ ಟೀಕೆಗಳಿಗೆ ತಿರುಗೇಟು ನೀಡಿ ಮಾತನಾಡುತ್ತಾ, ಲಕ್ಷ್ಮಣ್ ಸವದಿಯನ್ನು ಟ್ರ್ಯಾಕ್ಟರ್ ಹೊಡೆಯಲು ಕಳಿಸುತ್ತೇವೆ ಎಂದು ಕೆಲವರು ಮಾತನಾಡುತ್ತಿದ್ದಾರೆ. ಹೌದು, ನಾನೊಬ್ಬ ರೈತನ ಹೊಟ್ಟೆಯಲ್ಲಿ ಹುಟ್ಟಿದ್ದೇನೆ. ಎತ್ತು ಹೊಡೆಯುತ್ತೇನೆ, ಟ್ರ್ಯಾಕ್ಟರ್ ಕೂಡ ಹೊಡೆಯುತ್ತೇನೆ. ಆದರೆ, ಪ್ರಸಂಗ ಬಂದರೆ ಅನ್ಯಾಯ ಮಾಡಲು ಬಂದವನಿಗೆ ಮೆಟ್ಟಿನಿಂದಲೂ ಹೊಡೆಯುತ್ತೇನೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ನಾನು ಐಎಎಸ್, ಐಪಿಎಸ್ ಓದಿಲ್ಲ. ಹಳ್ಳಿಯ ಸರಕಾರಿ ಶಾಲೆಯಲ್ಲಿ ಓದಿ, ಕಬಡ್ಡಿ ಆಡಿಕೊಂಡು, ದನ ಕಾಯ್ದುಕೊಂಡು ಬೆಳೆದವ. ನನ್ನ ಕ್ಷೇತ್ರದ 1,31,000 ಜನರೇ ನನಗೆ ರಕ್ಷಾಕವಚವಾಗಿ ನಿಂತಿದ್ದಾರೆ. ಬೆಳೆದ ಬೆಳೆಗೆ ಮೋಸವಾಗುವುದನ್ನು ಸಹಿಸಲು ಸಾಧ್ಯವಿಲ್ಲ ಎಂದರು.

> **ರಾಜ್ಯದಲ್ಲೇ ಅತಿ ಹೆಚ್ಚು, ಅಂದರೆ ವಾರ್ಷಿಕ 76 ಲಕ್ಷ ಟನ್ ಕಬ್ಬು ಬೆಳೆಯುವ ಹೆಮ್ಮೆಯ ತಾಲೂಕು ನಮ್ಮದು. ಅಮ್ಮಾಜೇಶ್ವರಿ-ಬಸವೇಶ್ವರ ಏತ ನೀರಾವರಿ ಯೋಜನೆ ಪೂರ್ಣಗೊಂಡ ಬಳಿಕ ಮುಂದಿನ ಕೇವಲ ಎರಡು ವರ್ಷಗಳಲ್ಲಿ ಇದು 1 ಕೋಟಿ ಟನ್ ಕಬ್ಬು ಬೆಳೆಯುವ ನಾಡಾಗಿ ಹೊರಹೊಮ್ಮಲಿದೆ.**
> **-ಲಕ್ಷ್ಮಣ್ ಸವದಿ, ಶಾಸಕ**

ಸಚಿವ ಸುಧಾಕರ್ ಅಕಾಲಿಕ ನಿಧನ

← ಮೊದಲ ಪುಟದಿಂದ

ಬಳಿಕ ಅವರನ್ನು ಮಣಿಪಾಲ್ ಆಸ್ಪತ್ರೆಯಿಂದ ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ ಕಿಮ್ಸ್ ಆಸ್ಪತ್ರೆಗೆ ಸ್ಥಳಾಂತರ ಮಾಡಲಾಗಿತ್ತು. ಐಸಿಯುನಲ್ಲಿಯೇ ಇದ್ದ ಸುಧಾಕರ್ ಕೊನೆಯುಸಿರೆಳೆದಿದ್ದಾರೆ. ಅವರು ಪತ್ನಿ ಹರ್ಷಿಣಿ, ಪುತ್ರ ಸುಹಾಸ್ ಮತ್ತು ಪುತ್ರಿ ಸ್ಫೂರ್ತಿ ಸೇರಿದಂತೆ ಕುಟುಂಬಸ್ಥರು, ಆಪ್ತರನ್ನು ಅಗಲಿದ್ದಾರೆ. ಅವರ ನಿಧನಕ್ಕೆ ಗಣ್ಯಾತಿಗಣ್ಯರು ಸಂತಾಪ ವ್ಯಕ್ತಪಡಿಸಿದ್ದಾರೆ.

ಡಿ.ಸುಧಾಕರ್ ಅವರು 1961ರಲ್ಲಿ ಜನಿಸಿದ್ದು, ಪ್ರಾಥಮಿಕ, ಪ್ರೌಢಶಿಕ್ಷಣ ಮುಗಿಸಿದರು. 2004ರಲ್ಲಿ ಚಳ್ಳಕೆರೆ ಕ್ಷೇತ್ರದಿಂದ ಮೊದಲ ಬಾರಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಗೆದ್ದರು. 2008ರಲ್ಲಿ ಪಕ್ಷೇತರರಾಗಿ ಹಿರಿಯೂರಿನಿಂದ ಸ್ಪರ್ಧಿಸಿ ಗೆದ್ದಿದ್ದರು. ಅಂದಿನ ಬಿಜೆಪಿ ಸರಕಾರದಲ್ಲಿ ಸಚಿವರಾಗಿದ್ದರು. 2023ರಲ್ಲಿ ಗೆದ್ದು, ಸಿದ್ದರಾಮಯ್ಯ ಸಂಪುಟದಲ್ಲಿ ಯೋಜನೆ ಮತ್ತು ಸಾಂಖ್ಯಿಕ ಖಾತೆ ನಿರ್ವಹಿಸುತ್ತಿದ್ದರು.

ಇಂದು ಅಂತ್ಯಕ್ರಿಯೆ: ಭಾನುವಾರ ಮಧ್ಯಾಹ್ನ 12ರಿಂದ 4 ಗಂಟೆಯವರೆಗೆ ಹಿರಿಯೂರಿನ ನೆಹರೂ ಮೈದಾನದಲ್ಲಿ ಡಿ.ಸುಧಾಕರ್ ಅವರ ಪಾರ್ಥಿವ ಶರೀರದ ಸಾರ್ವಜನಿಕ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ನಂತರ ಚಳ್ಳಕೆರೆಯ ಸ್ವಗೃಹದಲ್ಲಿ ಪೂಜೆ ವಿಧಿ-ವಿಧಾನಗಳು ನೆರವೇರಲಿವೆ. ಚಳ್ಳಕೆರೆ ಡಿ.ಸುಧಾಕರ್ ಕ್ರೀಡಾಂಗಣದಲ್ಲಿಯೂ ಸಾರ್ವಜನಿಕ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಸೋಮವಾರ ಮಧ್ಯಾಹ್ನ 3ರಿಂದ 4 ಗಂಟೆಯ ನಡುವೆ ಅಂತ್ಯಕ್ರಿಯಾ ವಿಧಿಗಳು ನಡೆಯಲಿವೆ.

> **ಸಚಿವರಾಗಿದ್ದ ಡಿ.ಸುಧಾಕರ್ ಭದ್ರಾ ಮೇಲ್ದಂಡೆ ಯೋಜನೆ ಜಾರಿಗೆ ಹೋರಾಟ ಮಾಡಿದ್ದರು. ಅವರ ಸ್ಮರಣಾರ್ಥ ನೀರಾವರಿ ಯೋಜನೆಗೆ ಸುಧಾಕರ್ ಅವರ ಹೆಸರಿಡಲು ಆಲೋಚನೆ ಮಾಡಲಾಗುವುದು. ಹಿರಿಯೂರು ಶಾಸಕರಾಗಿ, ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವರಾಗಿ ಅವರು ಜನರ ಬಗ್ಗೆ ಆಳವಾದ ಕಾಳಜಿ ಹೊಂದಿದ್ದ ನಾಯಕರಾಗಿದ್ದರು.**
> **-ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ**

ವಿಜಯ್‌ಗೆ ಪಟ್ಟಾಭಿಷೇಕ

← ಮೊದಲ ಪುಟದಿಂದ

ಆದರೆ ವಿಜಯ್ ಸರ್ಕಾರದಲ್ಲಿ ಸದ್ಯಕ್ಕೆ ಯಾರಿಗೂ ಡಿಸಿಎಂ ಸ್ಥಾನ ನೀಡಿಲ್ಲ. ಎನ್.ಆನಂದ್, ಆಧವ್ ಅರ್ಜುನ, ಕೆ.ಎ.ಸೆಂಗೊಟ್ಟೈಯನ್, ಡಾ.ಕೆ.ಜಿ.ಅರುಣ್ ರಾಜ್, ಪಿ.ವೆಂಕಟರಮಣನ್, ಸಿ.ಟಿ.ಆರ್. ನಿರ್ಮಲ್ ಕುಮಾರ್, ಎ.ರಾಜ್‌ಮೋಹನ್, ಡಾ.ಟಿ.ಕೆ.ಪ್ರಭು, ಸೆಲ್ವಿ ಎಸ್.ಕೀರ್ತನಾ ಸಂಪುಟ ಸೇರಿದ್ದಾರೆ.

29 ವರ್ಷದ ಕೀರ್ತನಾ ಕಿರಿಯ ಸಚಿವೆ: 5 ಭಾಷೆಗಳಲ್ಲಿ ನಿರರ್ಗಳವಾಗಿ ಮಾತನಾಡಬಲ್ಲ ಎಸ್.ಕೀರ್ತನಾ ವಿಜಯ್ ಸರಕಾರದ ಕಿರಿಯ ಸಚಿವೆ. ವಿರುತ್ತನಗರ ಜಿಲ್ಲೆಯ ಶಿವಕಾಶಿ ವಿಧಾನಸಭಾ ಕ್ಷೇತ್ರದಿಂದ ಭರ್ಜರಿ ಜಯ ಸಾಧಿಸಿರುವ ಇವರು, ಪುದುಚೇರಿ ವಿಶ್ವವಿದ್ಯಾಲಯದಿಂದ ಅಂಕಿಅಂಶ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪೂರೈಸಿದ್ದಾರೆ.

> **ತಮಿಳುನಾಡು ಹೊಸ ಪೀಳಿಗೆ, ಹೊಸ ಧ್ವನಿ, ಹೊಸ ಕಲ್ಪನೆಯನ್ನು ಆಯ್ಕೆ ಮಾಡಿ ಕೊಂಡಿದೆ. ತಿರು ವಿಜಯ್‌ಗೆ ನನ್ನ ಶುಭಾಶಯಗಳು. ಅವರು ತಮಿಳುನಾಡಿನ ಜನತೆಯ ಭರವಸೆಗಳನ್ನು ಈಡೇರಿಸುತ್ತಾರೆಂದು ಹಾರೈಸುತ್ತೇನೆ.**
> **-ರಾಹುಲ್ ಗಾಂಧಿ, ವಿಪಕ್ಷ ನಾಯಕ**

ಪ್ರಧಾನಿ ಪ್ರಯಾಣದ ದಾರಿಯಲ್ಲಿ ಜಿಲೆಟಿನ್ ಪತ್ತೆ

ಬೆಂಗಳೂರು: ಭಾನುವಾರ ಬೆಳಗ್ಗೆ 10.30ರ ಹೊತ್ತಿಗೆ ಪ್ರಧಾನಿ ಆರ್ಟ್ ಆಫ್ ಲೀವಿಂಗ್‌ಗೆ ಸಾಗುವ ದಾರಿಯಲ್ಲಿ ಭದ್ರತೆಗೆ ನಿಯೋಜನೆಗೊಂಡಿದ್ದ ಜಗದೀಶ ಎಂಬ ಪೊಲೀಸ್ ಕಾನ್ಸ್‌ಟೇಬಲ್‌ಗೆ ತಾತಗುಣಿ ಬಳಿಯ ರಸ್ತೆ ಬಳಿ ಅಂದರೆ ರಸ್ತೆಯಿಂದ ಸುಮಾರು ಮೂವತ್ತು ಮೀಟರ್ ದೂರದ ಕಾಂಪೌಂಡ್ ಬಳಿ ಅನುಮಾನಾಸ್ಪದ ಒಂದು ಕವರ್ ಒಂದು ಸಿಕ್ಕಿದೆ. ಅದನ್ನು ಪರಿಶೀಲನೆ ನಡೆಸಿದಾಗ ಜಿಲೆಟಿನ್ ಕಡ್ಡಿಗಳು ಇರುವುದು ಕಂಡುಬಂದಿದೆ.

ತಕ್ಷಣ ಅವನ್ನು ವಶಕ್ಕೆ ಪಡೆದಿರುವ ಪೊಲೀಸರು ಕಗ್ಗಲಿಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು ಮಾಡಿದ್ದಾರೆ. ಪ್ರಧಾನಿ ಆಗಮಿಸುವ ಮೊದಲೇ ಸ್ಫೋಟಕ ವಸ್ತು ಪತ್ತೆಯಾದ ಹಿನ್ನಲೆಯಲ್ಲಿ ತಕ್ಷಣ ಸಂಪೂರ್ಣ ರಸ್ತೆಯನ್ನು ಮತ್ತೊಮ್ಮೆ ಪರಿಶೀಲಿಸಿ ಯಾವುದೇ ಭದ್ರತಾ ಸಮಸ್ಯೆ ಇಲ್ಲ ಎಂಬುದನ್ನು ದೃಢಪಡಿಸಿದ್ದಾರೆ.

ಆ ಬಳಿಕವೇ ಪ್ರಧಾನಿ ಅವರನ್ನು ಅದೇ ರಸ್ತೆ ಮೂಲಕ ಕರೆತಂದು ಕಾರ್ಯಕ್ರಮ ಮುಗಿದ ಬಳಿಕ ವಾಪಸ್ ಕಳಿಸಲಾಗಿದೆ. ಆರಂಭದಲ್ಲಿ ಕೋರಮಂಗಲದ ವ್ಯಕ್ತಿಗೂ ಸಿಕ್ಕ ಜಿಲೆಟಿನ್‌ಗೂ ಸಂಬಂಧ ಇದೆಯಾ ಎಂಬ ಅನುಮಾನ ಇತ್ತು. ಆದರೆ ವಿಚಾರಣೆ ವೇಳೆ ಆತನಿಗೂ ಇದಕ್ಕೂ ಸಂಬಂಧ ಇಲ್ಲವೆಂಬುದು ದೃಢಪಟ್ಟಿದೆ.

ಜಿಲೆಟಿನ್ ಪತ್ತೆ ಪ್ರಕರಣ ಸಂಬಂಧ ತನಿಖೆಗೆ ರಾಮನಗರ ಡಿವೈಎಸ್‌ಪಿ ಶ್ರೀನಿವಾಸ್ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ ರಚನೆ ಮಾಡಲಾಗಿದೆ. ಎರಡೂ ಘಟನೆಗಳ ಬಳಿಕ ಬೆಂಗಳೂರು ನಗರದ ಆಗ್ನೇಯ ವಿಭಾಗ ಮತ್ತು ಬೆಂಗಳೂರು ದಕ್ಷಿಣ ಜಿಲ್ಲಾ ಪೊಲೀಸರು ಈ ಬಗ್ಗೆ ತನಿಖೆ ನಡೆಸಲಿದ್ದಾರೆ. ಜಿಲೆಟಿನ್ ಕಡ್ಡಿಗಳು ಹೇಗೆ ಬಂತು? ಯಾರು ತಂದಿದ್ದರು? ಮತ್ತು ಯಾವ ಉದ್ದೇಶಕ್ಕೆ ತಂದಿದ್ದರು ಎಂಬ ಬಗ್ಗೆ ತನಿಖೆ ನಡೆಸಲಾಗುತ್ತಿದೆ.

ಬಂಗಾರಪೇಟೆ: ಯಾರು ಇಲ್ಲದ ಮನೆಗಳ ಮೇಲೆ ಕಣ್ಣಿಡಲು ಕ್ಯೂಆರ್‌ಕೋಡ್ ಸ್ಟಿಕರ್

ಕಳ್ಳತನ ನಿಗ್ರಹಕ್ಕೆ ಪೊಲೀಸರ ಹೊಸ ವಿಧಾನ

ಬಂಗಾರಪೇಟೆ: ತಾಲೂಕಿನಾದ್ಯಂತ ಮನೆಗಳವು ಮತ್ತು ಆಸ್ತಿಪಾಸ್ತಿ ಕಳ್ಳತನ ಪ್ರಕರಣಗಳಿಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಕೆಜಿಎಫ್ ಪೊಲೀಸ್ ಜಿಲ್ಲಾ ವ್ಯಾಪ್ತಿಯಲ್ಲಿ ಲಾಕ್ಡ್ ಹೌಸ್ ಬೀಟ್ ಸಿಸ್ಟಂ ಎಂಬ ವಿನೂತನ ತಂತ್ರಜ್ಞಾನ ಆಧಾರಿತ ಕಣ್ಗಾವಲು ವ್ಯವಸ್ಥೆ ಜಾರಿಗೆ ತರಲಾಗಿದೆ.

ಬಂಗಾರಪೇಟೆ ನಗರ ಸೇರಿದಂತೆ ತಾಲ್ಲೂಕಿನಾದ್ಯಂತ ಗ್ರಾಮೀಣ ಭಾಗದ ಜನರು ಉದ್ಯೋಗ ನಿಮಿತ್ತ ಅಥವಾ ರಜೆಗಾಗಿ ಮನೆಗೆ ಬೀಗ ಹಾಕಿ ತೆರಳಿದಾಗ ಕಳ್ಳರು ತಮ್ಮ ಕೈಚಳಕ ತೋರಿಸುತ್ತಿದ್ದರು. ಇದನ್ನು ಗಂಭೀರವಾಗಿ ಪರಿಗಣಿಸಿದ ಕೆಜಿಎಫ್ ಜಿಲ್ಲಾ ಪೊಲೀಸ್ ಇಲಾಖೆಯು, ಸಾರ್ವಜನಿಕರ ಆಸ್ತಿ ಸುರಕ್ಷತೆಗಾಗಿ ಈ ಡಿಜಿಟಲ್ ಕವಚ ಸಿದ್ಧಪಡಿಸಿದೆ.

ಸಾರ್ವಜನಿಕರು ಪ್ರವಾಸ, ಹಬ್ಬ, ರಜೆ ಅಥವಾ ಶುಭ ಕಾರ್ಯಗಳ ನಿಮಿತ್ತ ಮನೆಗೆ ಬೀಗ ಹಾಕಿ ಊರಿಗೆ ಹೋದಾಗ ಕಳ್ಳತನವಾಗುವ ಸಂಭವ ಹೆಚ್ಚು. ಇಂತಹ ಸಂದರ್ಭಗಳಲ್ಲಿ ಮನೆ ಮಾಲೀಕರು ಪೊಲೀಸರಿಗೆ ಮಾಹಿತಿ ನೀಡಿದರೆ, ಅಂತಹ ಮನೆಗಳ ಮೇಲೆ ಪೊಲೀಸರು ವಿಶೇಷ ನಿಗಾ ವಹಿಸುವ ವ್ಯವಸ್ಥೆಯೇ ಈ ಲಾಕ್ಡ್ ಹೌಸ್ ಬೀಟ್ ಸಿಸ್ಟಮ್ ಆಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಕೋಲಾರ ಜಿಲ್ಲೆ ಬಂಗಾರಪೇಟೆ ತಾಲೂಕಿನ ಬೂದಿಕೋಟೆ ಹೋಬಳಿಯ ಗಸ್ತಿನಲ್ಲಿರುವ ಬೀಟ್ ಪೊಲೀಸರು.

ಠಾಣೆಗೆ ಭೇಟಿ ನೀಡಲು ಮನವಿ: ಸಾರ್ವಜನಿಕರು ತಾವು ಊರಿಗೆ ತೆರಳುವ ಕನಿಷ್ಠ 24 ಗಂಟೆ ಮೊದಲು ಹತ್ತಿರದ ಪೊಲೀಸ್ ಠಾಣೆಗೆ ಭೇಟಿ ನೀಡಿ ಮಾಹಿತಿ ನೀಡಬೇಕು ಅಥವಾ ಪೊಲೀಸ್ ಇಲಾಖೆಯ ಪೋರ್ಟಲ್ ಮೂಲಕ ತಮ್ಮ ಮನೆ ವಿಳಾಸ, ಮೊಬೈಲ್ ಸಂಖ್ಯೆ ಮತ್ತು ತಾವು ಊರಿನಲ್ಲಿ ಇಲ್ಲದ ಅವಧಿ ನೋಂದಾಯಿಸಿಕೊಳ್ಳಬೇಕು. ನೋಂದಾಯಿತ ಮನೆ ಮುಂಭಾಗದಲ್ಲಿ ಪೊಲೀಸರು ಒಂದು ವಿಶಿಷ್ಟ ಕ್ಯೂಆರ್ ಕೋಡ್ ಸ್ಟಿಕ್ಕರ್ ಅಳವಡಿಸುತ್ತಾರೆ. ಪೊಲೀಸರು ಇ-ಬೀಟ್ ತಂತ್ರಜ್ಞಾನ ಬಳಸಿಕೊಂಡು, ಬೀಗ ಹಾಕಿದ ಮನೆಗಳ ಕಡೆ ವ್ಯವಸ್ಥಿತವಾಗಿ ಗಸ್ತು ತಿರುಗುತ್ತಾರೆ. ಗಸ್ತಿನಲ್ಲಿರುವ ಬೀಟ್ ಪೊಲೀಸರು ಹಗಲು ಮತ್ತು ರಾತ್ರಿ ವೇಳೆ ಆ ಮನೆಗೆ ಕಡ್ಡಾಯವಾಗಿ ಭೇಟಿ ನೀಡಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಬೇಕು. ಇದು ಪೊಲೀಸರು ಸ್ಥಳಕ್ಕೆ ಭೇಟಿ ನೀಡಿರುವುದನ್ನು ಖಚಿತಪಡಿಸುತ್ತದೆ ಎಂದು ಇನ್‌ಸ್ಪೆಕ್ಟರ್ ಸಿ.ರವಿಕುಮಾರ್ ತಿಳಿಸಿದರು.

> **ಪೊಲೀಸರು ಮನೆಗೆ ಭೇಟಿ ನೀಡಿ ತಪಾಸಣೆ ನಡೆಸಿದ ಕ್ಷಣಾರ್ಧದಲ್ಲೇ ಮನೆ ಮಾಲೀಕರ ಮೊಬೈಲ್‌ಗೆ ಪೊಲೀಸರು ಮನೆಗೆ ಭೇಟಿ ನೀಡಿದ ಕುರಿತು ಸಂದೇಶ ರವಾನೆಯಾಗಲಿದೆ. ಸಾರ್ವಜನಿಕರು ಈ ಸೇವೆ ಸದುಪಯೋಗ ಪಡಿಸಿಕೊಳ್ಳಬೇಕು.**
> **-ಸಿ.ರವಿಕುಮಾರ್, ಇನ್‌ಸ್ಪೆಕ್ಟರ್**

ಬೆಂಗಳೂರು ಯೋಗನಗರ: ಮೋದಿ

← ಮೊದಲ ಪುಟದಿಂದ

ಆರ್ಟ್ ಆಫ್ ಲಿವಿಂಗ್ ಸಂಸ್ಥೆಯೂ ಸದಾ ಸಮಾಜದ ಈ ಶಕ್ತಿಯನ್ನು ಜತೆಗೆ ಕೊಂಡೊಯ್ಯುತ್ತಿದೆ. ಯುವಶಕ್ತಿಯತ್ತ ಗಮನ ಕೇಂದ್ರೀಕರಿಸಬೇಕಾಗಿದೆ. ಹೊಸ ಆವಿಷ್ಕಾರಗಳು ನಡೆಯುತ್ತಿದೆ. ಭಾರತ ಬಹಳ ಕ್ಷೇತ್ರಗಳಲ್ಲಿ ನೇತೃತ್ವ ವಹಿಸುತ್ತಿದೆ. ಡಿಜಿಟಲ್ ಪೇಮೆಂಟ್‌ನಲ್ಲಿ ಜಾಗತಿಕ ನಾಯಕನಾಗಿದೆ. ಸ್ಟಾರ್ಟ್ ಅಪ್‌ನಲ್ಲಿ ವೇಗದಲ್ಲಿ ಜಗತ್ತಿನ ಮೂರನೇ ಇಕೋ ಸಿಸ್ಟಮ್ ಆಗಿ ಹೊರಹೊಮ್ಮಿದೆ ಎಂದು ಹೇಳಿದರು.

> **ಭಾರತವು ಈಗ ಬದಲಾವಣೆಗಳಲ್ಲಿ ಕೇವಲ ಭಾಗವಹಿಸುತ್ತಿಲ್ಲ, ಬದಲಾಗಿ ಡಿಜಿಟಲ್ ಪಾವತಿಗಳು, ಮೂಲಸೌಕರ್ಯ ವಿಸ್ತರಣೆ ಮತ್ತು ಸ್ಟಾರ್ಟ್‌ಅಪ್, ಪರಿಸರ ವ್ಯವಸ್ಥೆ ಸೇರಿದಂತೆ ಹಲವಾರು ವಲಯಗಳಲ್ಲಿ ನಾಯಕತ್ವ ವಹಿಸುತ್ತಿದೆ. ಭಾರತದ ಯುವಕರು ಬಾಹ್ಯಾಕಾಶ ತಂತ್ರಜ್ಞಾನದಲ್ಲಿ ಮುಂಚೂಣಿಯಲ್ಲಿದ್ದಾರೆ ಮತ್ತು ಅಂತಹ ಎಲ್ಲಾ ರಾಷ್ಟ್ರೀಯ ಯಶಸ್ಸಿಗೆ ಕೊಡುಗೆ ನೀಡುತ್ತಿದ್ದಾರೆ.**
> **-ನರೇಂದ್ರ ಮೋದಿ, ಪ್ರಧಾನಮಂತ್ರಿ**

ಕರ್ನಾಟಕದಲ್ಲಿ ಸಿಎಂ ಸ್ಥಾನ ಅಭದ್ರ: ಮೋದಿ

← ಮೊದಲ ಪುಟದಿಂದ

ಈ ವೇಳೆ ಮಾತನಾಡಿದ ಮೋದಿ, ಕರ್ನಾಟಕದಲ್ಲಿ ಸಿಎಂ ಎಷ್ಟು ದಿನ ಇರಲಿದ್ದಾರೆ ಅನ್ನುವುದನ್ನು ನಿರ್ಧರಿಸಲು ಆಗುತ್ತಿಲ್ಲ. ಇನ್ನೊಬ್ಬರಿಗೆ ಅವಕಾಶ ಸಿಗುತ್ತಾ ಇಲ್ಲವೋ ಅನ್ನುವುದನ್ನು ನಿರ್ಣಯಿಸಲು ಆಗುತ್ತಿಲ್ಲ. ಕಾಂಗ್ರೆಸ್‌ವರು ಸುಳ್ಳುಗಾರರು. ಅವರ ಗ್ಯಾರಂಟಿಯೂ ಸುಳ್ಳಾಗಿದೆ. ಕಾಂಗ್ರೆಸ್ ಪುಸ್ತಕದಲ್ಲಿ ಆಡಳಿತದ ಅಧ್ಯಾಯವೇ ಇಲ್ಲ ಎಂದು ಟೀಕಿಸಿದರು. ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಕೇಂದ್ರ ಸಚಿವರಾದ ಶೋಭಾ ಕರಂದ್ಲಾಜೆ, ವಿ. ಸೋಮಣ್ಣ ಪಾಲ್ಗೊಂಡಿದ್ದರು.

ಸಮಾಚಾರ ಸಣ್ಣದಲ್ಲ

ಎಂಎಂಹಿಲ್ಸ್‌ನಲ್ಲಿ ಚಿರತೆ ದಾಳಿಗೆ ಬಾಲಕ ಬಲಿ

ಚಾಮರಾಜನಗರ: ಶ್ರೀ ಕ್ಷೇತ್ರ ಮಲೆ ಮಹದೇಶ್ವರ ಬೆಟ್ಟದಿಂದ ನಾಗಮಲೆಗೆ ಕುಟುಂಬದೊಂದಿಗೆ ತೆರಳುತ್ತಿದ್ದ ಬಾಲಕನ ಮೇಲೆ ಚಿರತೆ ದಾಳಿ ಮಾಡಿದ ಪರಿಣಾಮ ಸ್ಥಳದಲ್ಲಿ ಬಾಲಕ ಮೃತಪಟ್ಟಿದ್ದಾನೆ. ಸುರೇಶ ಎಂಬವರ ಪುತ್ರ ಹರ್ಷಿತ್ ಚಿರತೆ ದಾಳಿಗೊಳಗಾಗಿ ಮೃತಪಟ್ಟಿದ್ದಾನೆ. ಬೆಂಗಳೂರಿನ ಲಗ್ಗೆರೆ ವಾರ್ಡ್‌ನ ನಿವಾಸಿಗಳು ಶನಿವಾರ ಮಲೆ ಮಹದೇಶ್ವರ ಬೆಟ್ಟಕ್ಕೆ ಆಗಮಿಸಿ ದೇವರ ದರ್ಶನ ಪಡೆದ ವಾಸ್ತವ್ಯ ಹೂಡಿದ್ದರು. ಭಾನುವಾರ ಬೆಳಗ್ಗೆ 10ಕ್ಕೂ ಹೆಚ್ಚು ಜನರು ನಾಗಮಲೆಗೆ ತೆರಳುತ್ತಿದ್ದ ವೇಳೆ ಇಂಡಿಗನತ್ತ ಗ್ರಾಮದ ಸಮೀಪದ ಅರಣ್ಯ ಪ್ರದೇಶದಲ್ಲಿ ನಡೆದುಕೊಂಡು ಹೋಗುತ್ತಿದ್ದ ವೇಳೆ ವಿದ್ಯಾರ್ಥಿಯ ಮೇಲೆ ಚಿರತೆ ದಾಳಿ ನಡೆಸಿ ಪೊದೆಗೆ ಎಳೆದೊಯ್ದಿದೆ. ಕುಟುಂಬಸ್ಥರು ಕಿರುಚಾಡಿಕೊಂಡರು ಬಿಡದೆ ಚಿರತೆ ಎಳೆದುಕೊಂಡು ಹೋಗಿದೆ. ಘಟನಾ ಸ್ಥಳಕ್ಕೆ ಮಲೆ ಮಹದೇಶ್ವರ ಬೆಟ್ಟ ಪೊಲೀಸರು ಹಾಗೂ ಅರಣ್ಯ ಇಲಾಖೆ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಕಂದಾಯ ಸೇವೆಯಲ್ಲಿ ರಾಜ್ಯ ನಂಬರ್ ಒನ್

ಕಲಬುರಗಿ: ಕಂದಾಯ ಮತ್ತು ಪಂಚಾಯತ್ ರಾಜ್ ಸೇವೆಗಳನ್ನು ಮನೆಬಾಗಿಲಿಗೆ ತಲುಪಿಸುವಲ್ಲಿ ಕರ್ನಾಟಕ ಇಡೀ ದೇಶಕ್ಕೆ ಮಾದರಿಯಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು. ನಗರದ ಡಾ. ಎಸ್.ಎಂ. ಪಂಡಿತ್ ರಂಗಮಂದಿರದಲ್ಲಿ ಕಂದಾಯ ಇಲಾಖೆಯ ವಿವಿಧ ಯೋಜನೆಗಳ ಫಲಾನುಭವಿಗಳಿಗೆ ಹಕ್ಕುಪತ್ರ, ಪಹಣಿ, ಪಿಂಚಣಿ ಸೇರಿದಂತೆ ವಿವಿಧ ಸೌಲಭ್ಯಗಳನ್ನು ವಿತರಿಸುವ ಬೃಹತ್ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ನಮ್ಮ ಸರಕಾರ ಈಗಾಗಲೇ ಐದು ಗ್ಯಾರಂಟಿಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದೆ. ಜನಸಾಮಾನ್ಯರಿಗೆ ತಮ್ಮ ಆಸ್ತಿಯ ಕಾನೂನಾತ್ಮಕ ಹಕ್ಕು ಒದಗಿಸುವ ಈ 'ಭೂ ಗ್ಯಾರಂಟಿ' ಯೋಜನೆಯು ಸರಕಾರದ ಆರನೇ ಗ್ಯಾರಂಟಿ. ಕಳೆದ ಮೂರು ವರ್ಷಗಳಲ್ಲಿ ಜಿಲ್ಲೆಯಲ್ಲಿ ದಾಖಲೆ ಪ್ರಮಾಣದಲ್ಲಿ ಪ್ರಗತಿಯಾಗಿದ್ದು, ಇಂದು ಏಕಕಾಲದಲ್ಲಿ 1,14,337 ಫಲಾನುಭವಿಗಳಿಗೆ ಸೌಲಭ್ಯ ವಿತರಿಸುತ್ತಿರುವುದು ಒಂದು ಕಂದಾಯ ಕ್ರಾಂತಿಯಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು. ಹಿಂದಿನ ಬಿಜೆಪಿ ಸರಕಾರ ಅತಿವೃಷ್ಟಿ ಪರಿಹಾರವಾಗಿ ಕೇವಲ 22 ಕೋಟಿ ರು.ನೀಡಿತ್ತು. ಆದರೆ ನಮ್ಮ ಅವಧಿಯಲ್ಲಿ 2,590 ಕೋಟಿ ರು. ಪರಿಹಾರ ವಿತರಿಸಲಾಗಿದೆ. ಬೆಳೆ ವಿಮೆ ವಿತರಣೆಯಲ್ಲಿ ಕಲಬುರಗಿ ಜಿಲ್ಲೆ ರಾಷ್ಟ್ರಮಟ್ಟದಲ್ಲಿ ಎರಡನೇ ಸ್ಥಾನದಲ್ಲಿದೆ. ಭೂ ಕಬಳಿಕೆ ತಡೆಯಲು ಆರ್‌ಟಿಸಿಗೆ ಆಧಾರ್ ಸೀಡಿಂಗ್ ಮಾಡಲಾಗುತ್ತಿದ್ದು, ಇದುವರೆಗೆ ಶೇ.85 ರಷ್ಟು ಪ್ರಗತಿಯಾಗಿದೆ ಎಂದು ಹೇಳಿದರು.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ:** ಬಿಲ್ಲನಕೋಟೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ
- **ಸಮಸ್ಯೆ ಯೇನು?** ಬೇಕರಿ ಹಾಗೂ ಐಸ್‌ಕ್ರೀಂ ಮಳಿಗೆಗಳಲ್ಲಿ ಅಸ್ವಚ್ಛತೆ ಕಂಡು ಬಂದಿರುವ ಬಗ್ಗೆ.
- **ಪರಿಹಾರ:** ಬೆಂಗಳೂರು ಗ್ರಾಮಾಂತರ ಜಿಲ್ಲೆ ಬಿಲ್ಲನಕೋಟೆ ಗ್ರಾಮದ ಹೆದ್ದಾರಿ ಬಳಿಯ ಬೇಕರಿ ಹಾಗೂ ತಿಂಡಿತಿನಿಸು ಮಳಿಗೆಗಳಲ್ಲಿ ಅಸ್ವಚ್ಛತೆ ಹಾಗೂ ಇನ್ನಿತರ ಸಮಸ್ಯೆಗಳು ಇರುವ ಕುರಿತು ಸಾರ್ವಜನಿಕರಿಂದ ದೂರುಗಳು ಬಂದ ಹಿನ್ನೆಲೆ ಆಹಾರ ಸುರಕ್ಷತಾ ಅಧಿಕಾರಿಗಳು ಬೇಕರಿಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಅಸ್ವಚ್ಛತೆ ಕಂಡು ಬಂದ ಬೇಕರಿಗಳಿಗೆ ನೋಟಿಸ್ ನೀಡಿದರು.

ದಿನ ವಿಶೇಷ

11 ಮೇ 2026 ಸೋಮವಾರ

» ಸೂರ್ಯೋದಯ	: 5-49
» ಸೂರ್ಯಾಸ್ತ	: 6-57
» ತಿಥಿ	: ನವಮಿ
» ನಕ್ಷತ್ರ	: ಶತಭಿಷ
» ಸಂವತ್ಸರ	: ಪರಾಭವ
» ಅಯನ	: ಉತ್ತರಾಯನ
» ಋತು	: ಗ್ರೀಷ್ಮ
» ಮಾಸ	: ವೈಶಾಖ
» ಪಕ್ಷ	: ಕೃಷ್ಣಪಕ್ಷ

ಹಿರಿಯೂರಿನ ಕೊಡುಗೈದಾನಿ ಇನ್ನಿಲ್ಲ | ಆತ್ಮೀಯ ಗೆಳೆಯನ ಅಗಲಿಕೆಗೆ ಡಿಸಿಎಂ ಡಿ.ಕೆ.ಶಿವಕುಮಾರ್ ಕಣ್ಣೀರು

ಡಿ.ಸುಧಾಕರ್ ಅಗಲಿಕೆಗೆ ಚಿತ್ರದುರ್ಗ ಕಂಬನಿ

ಚಿತ್ರದುರ್ಗ: ಅನಾರೋಗ್ಯದಿಂದ ಬೆಂಗಳೂರಿನ ಕಿಮ್ಸ್ ಆಸ್ಪತ್ರೆಯಲ್ಲಿ ಯೋಜನೆ ಮತ್ತು ಸಾಂಖ್ಯಿಕ ಸಚಿವ ಹಾಗೂ ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್ (65) ಅವರು ಭಾನುವಾರ ನಿಧರಾದರು.

ಶ್ವಾಸಕೋಶ ಸಂಬಂಧಿ ಖಾಯಿಲೆಯಿಂದ ಬಳಲುತ್ತಿದ್ದ ಅವರು, ಕಳೆದ ಒಂದು ತಿಂಗಳಿನಿಂದ ಬೆಂಗಳೂರಿನ ಕಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ದುರಾದೃಷ್ಟವಶಾತ್ ಚಿಕಿತ್ಸೆ ಫಲಿಸದೆ ಭಾನುವಾರ ಬೆಳಗಿನ 3:15ರ ಸುಮಾರಿಗೆ ಸಾವನ್ನಪ್ಪಿದ್ದಾರೆ. ಡಿ.ಸುಧಾಕರ್ ಅವರ ಸಾವಿನಿಂದ ಇಡೀ ಚಿತ್ರದುರ್ಗ ಜಿಲ್ಲೆಯಲ್ಲಿ ಶೋಕ ಆವರಿಸಿದೆ.

ಮಧ್ಯಮ ವರ್ಗದ ಕುಟುಂಬದಲ್ಲಿ 1961ರ ಮಾರ್ಚ್ 28ರಂದು ಡಿ.ಸುಧಾಕರ್ ಜನಿಸಿದರು. ಸಹಕಾರ ಕ್ಷೇತ್ರದ ಮೂಲಕ ಜನಸೇವೆ ಆರಂಭಿಸಿದ ಅವರು, ಚಿತ್ರದುರ್ಗ ಜಿಲ್ಲೆಯ ಪ್ರಭಾವಿ ನಾಯಕರಾಗಿ ಬೆಳೆದರು. ಕಳೆದ ಎರಡು ದಶಕಗಳ ಕಾಲ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿ ಸಾವಿರಾರು ರೈತರು, ಮಹಿಳಾ ಸಂಘಗಳು ಹಾಗೂ ಬಡ ಕುಟುಂಬಗಳಿಗೆ ನೆರವಾಗಿದ್ದರು.

ಸಹಕಾರ ಕ್ಷೇತ್ರದಲ್ಲಿ ಕಟ್ಟಿಕೊಂಡ ಜನಬೆಂಬಲವೇ ಅವರನ್ನು ಚುನಾವಣಾ ರಾಜಕೀಯಕ್ಕೆ ಕರೆತಂದಿತು. 2004ರಲ್ಲಿ ಕಾಂಗ್ರೆಸ್ ಪಕ್ಷದಿಂದ ಚಳ್ಳಕೆರೆ ಕ್ಷೇತ್ರದಿಂದ ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾಗುವ ಮೂಲಕ ವಿಧಾನಸಭೆಗೆ ಪ್ರವೇಶಿಸಿದರು. ನಂತರ ಚಳ್ಳಕೆರೆ ಕ್ಷೇತ್ರ ಪರಿಶಿಷ್ಟ ಪಂಗಡಕ್ಕೆ ಮೀಸಲಾಗಿದ್ದರಿಂದ ಸಾಮಾನ್ಯ ಕ್ಷೇತ್ರವಾದ ಹಿರಿಯೂರಿಗೆ ರಾಜಕೀಯ ಪಯಣ ಮುಂದುವರಿಸಿದರು.

2008ರ ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್ ಸಿಗದ ಹಿನ್ನೆಲೆ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಭರ್ಜರಿ ಗೆಲುವು ಸಾಧಿಸಿದರು. ಬಳಿಕ ಬಿ.ಎಸ್.ಯಡಿಯೂರಪ್ಪ ನೇತೃತ್ವದ ಸರಕಾರಕ್ಕೆ ಬೆಂಬಲ ಘೋಷಿಸಿ ಸಮಾಜ ಕಲ್ಯಾಣ ಸಚಿವರಾಗಿಯೂ ಸೇವೆ ಸಲ್ಲಿಸಿದರು.

2013ರಲ್ಲಿ ಮತ್ತೆ ಕಾಂಗ್ರೆಸ್ ಪಕ್ಷ ಸೇರಿ ಹಿರಿಯೂರು ಕ್ಷೇತ್ರದಿಂದ ಜಯಗಳಿಸಿದರು. ಆದರೆ 2018ರ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಪೂರ್ಣಿಮಾ ಶ್ರೀನಿವಾಸ್ ವಿರುದ್ಧ ಸೋಲು ಅನುಭವಿಸಿದರು. ಆದರೂ ಜನಸಂಪರ್ಕ ಕಡಿತಗೊಳಿಸದ ಸುಧಾಕರ್, 2023ರ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಮರು ಆಯ್ಕೆಯಾಗಿದ್ದು, ಬಳಿಕ ಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಸಚಿವರಾಗಿ ಜವಾಬ್ದಾರಿ ವಹಿಸಿಕೊಂಡಿದ್ದರು. ಚಳ್ಳಕೆರೆ ಹಾಗೂ ಹಿರಿಯೂರು ಕ್ಷೇತ್ರಗಳಲ್ಲಿ ಜೈನ ಸಮುದಾಯದ ಮತಗಳು ಅತಿ ಕಡಿಮೆ ಇದ್ದರೂ, ಎಲ್ಲಾ ಸಮುದಾಯಗಳ ಪ್ರೀತಿ ಮತ್ತು ವಿಶ್ವಾಸ ಗಳಿಸಿದ್ದ ಅವರು ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾಗಿರುವುದು ಅವರ ಜನಪ್ರಿಯತೆಗೆ ಸಾಕ್ಷಿಯಾಗಿದೆ.

ಡಿ.ಸುಧಾಕರ್ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದು ಡಿಸಿಎಂ ಡಿ.ಕೆ.ಶಿವಕುಮಾರ್ ಕಂಬನಿ ಮಿಡಿದರು.

ರಾಜಕೀಯ ಹೆಜ್ಜೆಗಳು

- **1978-89** ರ ಅವಧಿಯಲ್ಲಿ ಸುಧಾಕರ್ ಅವರ ಚಿಕ್ಕಪ್ಪ ಎನ್.ಜಯಣ್ಣ ಅವರು ಚಳ್ಳಕೆರೆಯ ಶಾಸಕರಾಗಿದ್ದರು. ಅವರ ರಾಜಕೀಯ ಒಡನಾಟದಿಂದ ಡಿ ಸುಧಾಕರ್ ರಾಜಕೀಯ ಪ್ರವೇಶ.
- **2004-2008:** ಕಾಂಗ್ರೆಸ್ ನಿಂದ ಶಾಸಕರಾಗಿ ಮೊದಲು ಆಯ್ಕೆಯಾಗಿದ್ದರು. ನಂತರ ಚಳ್ಳಕೆರೆ ಎಸ್ ಟಿ ಮೀಸಲು ಕ್ಷೇತ್ರವಾದ ಬಳಿಕ 2008 ರಲ್ಲಿ ಹಿರಿಯೂರು ಕ್ಷೇತ್ರದ ಪಕ್ಷೇತರ ಶಾಸಕರಾಗಿ ಆಯ್ಕೆ.
- ಬಿಎಸ್ ವೈ ಸಂಪುಟದಲ್ಲಿ ಸಮಾಜ ಕಲ್ಯಾಣ, ಮುಜರಾಯಿ ಇಲಾಖೆಯ ಸಚಿವರಾಗಿಯೂ ಕೆಲಸ ಮಾಡಿದ್ದಾರೆ. ಬಂಧಿಖಾನೆ, ಯುವಜನಸೇವೆಯ ಸಚಿವರಾಗಿದ್ದರು. ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾಗಿಯೂ ಸೇವೆ
- **2013** ರಲ್ಲಿ ಮತ್ತೆ ಕಾಂಗ್ರೆಸ್‌ನಿಂದ ಶಾಸಕರಾಗಿ ಆಯ್ಕೆ, 2018 ರಲ್ಲಿ ಬಿಜೆಪಿ ಅಭ್ಯರ್ಥಿ ಪೂರ್ಣಿಮಾ ಶ್ರೀನಿವಾಸ್ ವಿರುದ್ಧ ಮೊದಲ ಸೋಲು, 2023 ರಲ್ಲಿ ಮತ್ತೆ ಹಿರಿಯೂರಲ್ಲಿ ಶಾಸಕರಾಗಿ, ಈಗ ಸಚಿವರಾಗಿ ಚಿತ್ರದುರ್ಗ ಉಸ್ತುವಾರಿ.

ಚಿತ್ರದುರ್ಗ ಜಿಲ್ಲೆಯಲ್ಲಿ ಇಂದು ರಜೆ

ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್ ಅವರ ನಿಧನಕ್ಕೆ ಕರ್ನಾಟಕ ಸರಕಾರ ತೀವ್ರ ಸಂತಾಪ ಸೂಚಿಸಿದೆ. ಅವರಿಗೆ ಗೌರವಾರ್ಥವಾಗಿ ಚಿತ್ರದುರ್ಗ ಜಿಲ್ಲಾ ವ್ಯಾಪ್ತಿಯಲ್ಲಿ ಮೇ 11 ಸೋಮವಾರದಂದು ಸರಕಾರಿ ಕಚೇರಿ ಹಾಗೂ ಸರಕಾರಿ, ಖಾಸಗಿ ಶಾಲಾ ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ. ಜತೆಗೆ 3 ದಿನಗಳ ಕಾಲ ರಾಜ್ಯಾದ್ಯಂತ ಶೋಕವನ್ನು ಆಚರಿಸಲಾಗುವುದು ಎಂದು ಸರಕಾರದ ಅಧೀನ ಕಾರ್ಯದರ್ಶಿ ಆದೇಶಿಸಿದ್ದಾರೆ. ಈ ಅವಧಿಯಲ್ಲಿ ಯಾವುದೇ ಸಾರ್ವಜನಿಕ ಮನರಂಜನಾ ಕಾರ್ಯಕ್ರಮಗಳು ಇರುವುದಿಲ್ಲ. ನಿಯತವಾಗಿ ಹಾರಿಸಲ್ಪಡುವ ಕಟ್ಟಡಗಳ ಮೇಲೆ ರಾಷ್ಟ್ರಧ್ವಜವನ್ನು ಅರ್ಧ ಮಟ್ಟದಲ್ಲಿ ಹಾರಿಸಲಾಗುವುದು ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ನಿಮ್ಮ ನೆನಪು ಸದಾ ಜೀವಂತ: ಶಾಸಕ ಪಪ್ಪಿ

ಸಚಿವ ಡಿ.ಸುಧಾಕರ್ ಅಣ್ಣ ಇವತ್ತು ನಮ್ಮೊಡನೆ ಇಲ್ಲ. ಆದರೆ ಅವರು ಮಾಡಿರುವಂತಹ ಅಭಿವೃದ್ಧಿ ಕಾರ್ಯಗಳು ಅವರನ್ನು ನೆನಪಿಸುವಂತೆ ಮಾಡುತ್ತಿದೆ. ಚಿತ್ರದುರ್ಗ ಜಿಲ್ಲೆಗೆ ಸಾಕಷ್ಟು ಹೊಸ ಹೊಸ ಯೋಜನೆಗಳನ್ನು ತಂದು ಜಿಲ್ಲೆಯನ್ನು ಅಭಿವೃದ್ಧಿಪಡಿಸಬೇಕು ಎನ್ನುವ ಅಭಿಲಾಷೆ ಹೊಂದಿದ್ದ ವ್ಯಕ್ತಿ ಇವತ್ತು ನಮ್ಮ ಬಳಿ ಇಲ್ಲ ಎನ್ನುವುದು ಮನಸ್ಸಿಗೆ ಬರಸಿಡಿಲು ಬಡಿದಂತಾಗಿದೆ ಎಂದು ಶಾಸಕ ಕೆ.ಸಿ ವೀರೇಂದ್ರ ಪಪ್ಪಿ ತಿಳಿಸಿದರು. ಸುದಣ್ಣ ಹೇಗಿದ್ದೀಯಾ? ಚೆನ್ನಾಗಿದ್ದೀಯಾ? ಸ್ವಲ್ಪ ಚಿತ್ರದುರ್ಗ ವಿಧಾನಸಭಾ ಕ್ಷೇತ್ರದ ಅಭಿವೃದ್ಧಿ ಕಡೆ ಸ್ವಲ್ಪ ಗಮನಹರಿಸಣ ಎನ್ನುತ್ತಲೆ ಫೋನ್‌ನಲ್ಲಿ ಸಂಭಾಷಣೆ ಮಾಡುತ್ತಿದ್ದೆ, ಸುದಣ್ಣ ಎನ್ನುತ್ತಲೆ ನಾನು ಅವರನ್ನು ಮಾತನಾಡಿಸುತ್ತಿದೆ. ಸಚಿವರಾಗಿದ್ದರು ಸಹ ಆತ್ಮೀಯವಾಗಿ ಪ್ರೀತಿಯ ತಮ್ಮ ನಂತೆ ನನ್ನನ್ನ ಅಪ್ಪಿಕೊಳ್ಳುತ್ತಿದ್ದರು. ತಮಾಷೆಗಾಗಿ ಕೀಟ ಲೆ ಮಾಡುತ್ತಿದ್ದರು. ಅಂತಹ ವ್ಯಕ್ತಿಯ ನಿಧನದ ಸುದ್ದಿ ಕೇಳಿ ಮನಸ್ಸಿಗೆ ಅಪಾರ ವೇದನೆ ಉಂಟು ಮಾಡಿದೆ. ಭಗವಂತನು ಅವರ ದಿವ್ಯಾತ್ಮಕ್ಕೆ ಚಿರಶಾಂತಿ ಕರುಣಿ ಸಲಿ. ಅವರ ಕುಟುಂಬದವರಿಗೆ, ಬಂಧು-ಬಳ ಗಕ್ಕೆ ಹಾಗೂ ಅಪಾರ ಅಭಿಮಾನಿಗಳಿಗೆ ಈ ದುಃಖ ಭರಿಸುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸುತ್ತೇನೆ ಎಂದರು.

ಭೋವಿ ಶ್ರೀಗಳಿಂದ ಭಾವಪೂರ್ಣ ಸಂತಾಪ

ಹಿರಿಯೂರು: ಜಾತಿ ರಾಜಕಾರಣದ ಮಿತಿಗಳನ್ನು ಮೀರಿ, ವೈಯಕ್ತಿಕವಾಗಿ ಜನರ ಕಷ್ಟಗಳಿಗೆ ಸ್ಪಂದಿಸುತ್ತಿದ್ದ ಅಪರೂಪದ ರಾಜಕಾರಣಿ ಯೊಬ್ಬರಾದ ಡಿ.ಸುಧಾಕರ ಅವರನ್ನು ನಾವು ಕಳೆದುಕೊಂಡಿದ್ದೇವೆ ಎಂದು ಭೋವಿ ಗುರು ಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಸಂತಾಪ ವ್ಯಕ್ತಪಡಿಸಿದ್ದಾರೆ.

ಅಗಲಿದ ಸಚಿವ ಡಿ.ಸುಧಾಕರ ಕುರಿತು ತಮ್ಮ ಶೋಕ ಸಂದೇಶ ಹಂಚಿಕೊಂಡಿರುವ ಶ್ರೀಗಳು, ಅವರು ಕೇವಲ ಒಬ್ಬ ಜನಪ್ರತಿ ನಿಧಿಯಾಗಿರದೆ, ಜನರ ನೋವಿಗೆ ಮಿಡಿಯುವ ಸಹಾಯಹಸ್ತವಾಗಿದ್ದರು. ನಾಲ್ಕು ಬಾರಿ ಶಾಸಕರಾಗಿ ಹಾಗೂ ಸಚಿವರಾಗಿ ಸಮಾಜಕ್ಕೆ ಅವರು ನೀಡಿದ ಕೊಡುಗೆ ಅನನ್ಯವಾದುದು. ಜಾತ್ಯತೀತ ಪರಿಕಲ್ಪನೆಯಲ್ಲಿ ಎಲ್ಲರನ್ನು ಸಮಾನವಾಗಿ ಕಾಣುವ ಅವರ ಗುಣ ಎಲ್ಲರಿಗೂ ಮಾದರಿಯಾಗಿತ್ತು ಎಂದು ಸ್ಮರಿಸಿದರು.

ಕೊನೆಯ ಕ್ಷಣದ ನೆನಪು: ನಮ್ಮ ಮೀಸಲಾತಿ ಹೋರಾಟದ ಕ್ಷಣಗಳಿಗೆ ಸಾಕ್ಷಿಯಾಗಲು ಅವರು ಸರಕಾರದ ಪರವಾಗಿ ಬಂದು ಮನವಿ ಸ್ವೀಕರಿಸಿದ್ದರು. ಆ ಕ್ಷಣವೇ ಅವರೊಂದಿಗೆ ಕಳೆದ ಕೊನೆಯ ಕ್ಷಣವಾಗುತ್ತದೆ ಎಂದು ನಾವು ಭಾವಿಸಿರಲಿಲ್ಲ. ಅವರೊಂದಿಗೆ ಕಳೆದ ಪ್ರತಿಯೊಂದು ಕ್ಷಣವೂ ಆನಂದದಾ ಯಕವಾಗಿರುತ್ತಿತ್ತು. ಅವರ ತಿಳಿಹಾಸ್ಯದ ವ್ಯಕ್ತಿತ್ವ ಸದಾ ನೆನಪಿನಲ್ಲಿ ಉಳಿಯುವಂತದ್ದು, ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿ ಭಗವಂತ ಅವರ ಕುಟುಂಬಸ್ಥರಿಗೆ ಹಾಗೂ ಅಭಿಮಾನಿಗಳಿಗೆ ನೀಡಲಿ. ಆ ಪುಣ್ಯಾತ್ಮಕ್ಕೆ ಚಿರಶಾಂತಿ ದೊರೆಯಲಿ ಎಂದು ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಪ್ರಾರ್ಥಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಕಂಬನಿ

ನಮ್ಮ ಸರಕಾರದಲ್ಲಿ ಯೋಜನೆ ಮತ್ತು ಸಾಂಖಿತ ಇಲಾಖೆ ಸಚಿವರಾಗಿ ಮತ್ತು ಹಿರಿಯ ನಾಯಕರಾಗಿ ಸೇವೆ ಸಲ್ಲಿಸಿದ್ದ ಡಿ.ಸುಧಾಕರ್ ಅವರ ಅಕಾಲಿಕ ನಿಧನದಿಂದ ನನಗೆ ತೀವ್ರ ದುಃಖವಾಗಿದೆ. ಕಳೆದ ಕೆಲವು ದಿನಗಳಿಂದ ಅವರು ಅನಾರೋಗ್ಯದಿಂದ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದರು. ಇತ್ತೀಚೆಗೆ, ನಾನು ಖುದ್ದಾಗಿ ಆಸ್ಪತ್ರೆಗೆ ಭೇಟಿ ನೀಡಿ ಅವರಿಗೆ ಚಿಕಿತ್ಸೆ ನೀಡುತ್ತಿದ್ದ ವೈದ್ಯರಿಂದ ಅವರ ಆರೋಗ್ಯದ ಬಗ್ಗೆ ಮಾಹಿತಿ ಪಡೆದುಕೊಂಡಿದ್ದೆ. ಆ ಸಂದರ್ಭದಲ್ಲಿ ಅವರು ಚೇತರಿಸಿಕೊಳ್ಳುತ್ತಾರೆ ಎಂಬ ದೃಢವಾದ ಭರವಸೆ ನನ್ನಲ್ಲಿ ಹುಟ್ಟಿಕೊಂಡಿತ್ತು. ಸುಧಾಕರ್ ಸಾರ್ವಜನಿಕ ಸೇವೆಯ ಬಗ್ಗೆ ಅಪಾರ ಕಾಳಜಿ ಮತ್ತು ಸಮರ್ಪಣೆ ಹೊಂದಿದ್ದ ವ್ಯಕ್ತಿ. ಅವರಂತಹ ವ್ಯಕ್ತಿಗಳು ಹೆಚ್ಚು ಕಾಲ ಜನರ ನಡುವೆ ಇರಬೇಕಿತ್ತು. ವೈದ್ಯರ ನಿರಂತರ ಪ್ರಯತ್ನಗಳು ಮತ್ತು ನಮ್ಮೆಲ್ಲರ ಪ್ರಾರ್ಥನೆಗಳ ಹೊರತಾಗಿಯೂ, ಸುಧಾಕರ್ ನಮ್ಮನ್ನು ಅಗಲಿದ್ದಾರೆ. ಇದು ಅತ್ಯಂತ ನೋವಿನ ಕ್ಷಣ. ಅಗಲಿದ ಆತ್ಮಕ್ಕೆ ಶಾಶ್ವತ ಶಾಂತಿ ಸಿಗಲಿ. ಅವರ ಕುಟುಂಬ ಮತ್ತು ಅಭಿಮಾನಿಗಳು ಈ ದುಃಖ ಭರಿಸುವ ಶಕ್ತಿ ಪಡೆಯಲಿ ಎಂದು ನಾನು ದೇವರಲ್ಲಿ ಪ್ರಾರ್ಥಿಸುತ್ತೇನೆ ಎಂದು ಸಿಎಂ ಸಿದ್ದರಾಮಯ್ಯ ಸಂತಾಪ ಸೂಚಿಸಿದ್ದಾರೆ. ಇದರೊಂದಿಗೆ ಡಿಸಿಎಂ ಸೇರಿದಂತೆ ಸಂಪುಟ ಸಹದ್ಯೋಗಿಗಳು , ಹಿರಿಯರು ಸಂತಾಪ ಸೂಚಿಸಿದ್ದಾರೆ.

ಭದ್ರಾ ಮೇಲ್ದಂಡೆ ಯೋಜನೆ ಜಾರಿಗೆ ಸುಧಾಕರ್ ಅವಿರತ ಹೋರಾಟ: ಡಿಸಿಎಂ

ಭದ್ರಾ ಯೋಜನೆಗೆ ಸುಧಾಕರ್ ಹೆಸರು ಚಿಂತನೆ

ಬೆಂಗಳೂರು: ಸಚಿವರಾದ ಡಿ. ಸುಧಾಕರ್ ಭದ್ರ ಮೇಲ್ದಂಡೆ ಯೋಜನೆ ಜಾರಿಗೆ ಹೋರಾಟ ಮಾಡಿದ್ದರು. ಅವರ ಸ್ಮರಣಾರ್ಥ ನೀರಾವರಿ ಯೋಜನೆಗೆ ಸುಧಾಕರ್ ಅವರ ಹೆಸರಿಡಲು ಆಲೋಚನೆ ಮಾಡಲಾಗುವುದು ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.

ಸದಾಶಿವನಗರ ನಿವಾಸದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ನಮ್ಮ ಪಾಲಿಗೆ ಬಹಳ ದುಃಖದ ದಿನ. ನನ್ನ ಆಪ್ತಮಿತ್ರ ಹಾಗೂ ಸಚಿವರಾಗಿದ್ದ ಡಿ. ಸುಧಾಕರ್ ಅವರು ನಮ್ಮನ್ನು ಅಗಲಿದ್ದಾರೆ. ಕಳೆದ ಒಂದು ತಿಂಗಳ ಹಿಂದೆ ಮಂಡಿ ನೋವಿನ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ಸೇರಿದ್ದರು. ಶಸ್ತ್ರಚಿಕಿತ್ಸೆ ನಂತರ ಶ್ವಾಸಕೋಶ ಸೋಂಕಿಗೆ ಒಳಗಾಗಿದ್ದರು, ಪ್ರಜ್ಞೆ ಹೋಗಿತ್ತು. ಈ ಮಧ್ಯೆ ಕೆಲ ದಿನಗಳ ಕಾಲ ಅವರಿಗೆ ಪ್ರಜ್ಞೆ ಮರಳಿತ್ತು. ಹೀಗಾಗಿ ಅವರು ಗುಣಮುಖರಾಗಿ ಮರಳುತ್ತಾರೆ ಎಂಬ ವಿಶ್ವಾಸವಿತ್ತು. ವಿದೇಶದಿಂದಲೂ ವೈದ್ಯರನ್ನು ಕರೆಸಿ ಚಿಕಿತ್ಸೆ ನೀಡಲಾಗಿತ್ತು. ಆದರೆ ಇಂದು ಬೆಳಗಿನ ಜಾವ 3.15ಕ್ಕೆ ಅವರು ಕೊನೆಯುಸಿರೆಳೆದಿದ್ದಾರೆ. ಪ್ರತಿ ನಿತ್ಯ ನಾನು ಅವರ ಕುಟುಂಬ ಸದಸ್ಯರ ಜತೆ ಸಂಪರ್ಕದಲ್ಲಿದ್ದು, ಅವರ ಆರೋಗ್ಯದ ಬಗ್ಗೆ ಮಾಹಿತಿ ಪಡೆಯುತ್ತಿದ್ದೆ ಎಂದರು.

ನನ್ನ ಜತೆ ಬಹಳ ಒಡನಾಟ ಇಟ್ಟುಕೊಂಡಿದ್ದರು. ಬಹಳ ಚಿಕ್ಕ ವಯಸ್ಸು, ಆರೋಗ್ಯವಾಗಿದ್ದರು. ಎಸ್.ಎಂ.ಕೃಷ್ಣ ಅವರ ಕಾಲದಲ್ಲಿ ರಂಗನಾಥ್ ಅವರ ಕ್ಷೇತ್ರದಲ್ಲಿ ಟಿಕೆಟ್ ಕೊಡಿಸಿದ್ದೆ. ನನ್ನ ಜತೆ ಮಂತ್ರಿಯಾಗಿ ಕೆಲಸ ಮಾಡಿದ್ದಾರೆ. ಅವರಿಗೆ ಯೋಜನಾ ಮತ್ತು ಮುಜರಾಯಿ ಇಲಾಖೆ ನೀಡಲಾಗಿತ್ತು. ಅವರ ಜೊತೆ ಚರ್ಚೆ ಮಾಡಿ ಮುಜರಾಯಿ ಇಲಾಖೆಯನ್ನು ರಾಮಲಿಂಗಾರೆಡ್ಡಿ ಅವರಿಗೆ ನೀಡಲಾಯಿತು. ಸಿಎಂ ಇದಕ್ಕೆ ಅನುಮತಿ ನೀಡಿದ್ದರು. ಭಾರತ ಜೋಡೋ ಯಾತ್ರೆ ವೇಳೆ ಐದು ದಿನದ ಜವಾಬ್ದಾರಿಯನ್ನು ಅವರೇ ವಹಿಸಿದ್ದರು. ಅವರ ಅಗಲಿಕೆ ವಿಚಾರ ರಾಹುಲ್ ಗಾಂಧಿ ಅವರ ಗಮನಕ್ಕೆ ತರಲಾಗಿದೆ. ರಾಹುಲ್ ಗಾಂಧಿ ಅವರು ಸುಧಾಕರ್ ಅವರ ಕುಟುಂಬದ ಸದಸ್ಯರ ಜೊತೆಗೆ ಮಾತನಾಡಲಿದ್ದಾರೆ ಎಂದರು.

ಭದ್ರಾ ಯೋಜನೆಗೆ ಚಾಲನೆ ನೀಡುವ ಆಸೆ

ಭದ್ರಾ ಯೋಜನೆ ಪೂರ್ಣಗೊಳಿಸಿ ಅದಕ್ಕೆ ಚಾಲನೆ ನೀಡಬೇಕು ಎಂದು ಬಹಳ ಆಸೆ ಇಟ್ಟುಕೊಂಡಿದ್ದರು. ಈ ಯೋಜನೆಗಾಗಿ ಸಾಕಷ್ಟು ಹೋರಾಟ ಮಾಡಿದ್ದರು. ಅವರ ಅಧ್ಯಕ್ಷತೆಯಲ್ಲಿ ಈ ಯೋಜನೆ ಉದ್ಘಾಟನೆ ಮಾಡಬೇಕು ಎಂದು ಚಿಂತಿಸಿದ್ದೆವು. ಕ್ಷೇತ್ರ ಹಾಗೂ ಜಿಲ್ಲೆಯ ಅಭಿವೃದ್ಧಿ ಬಗ್ಗೆ ಆಸಕ್ತಿ ಹೊಂದಿದ್ದರು. ಎಲ್ಲಾ ವರ್ಗದ ಜನರಿಗೆ ನ್ಯಾಯ ಒದಗಿಸಿಕೊಡುತ್ತಿದ್ದರು. ಪಕ್ಷದ ಸದಸ್ಯತ್ವ ಅಭಿಯಾನದಲ್ಲಿ ಅತಿ ಹೆಚ್ಚು ನೋಂದಣಿ ಮಾಡಿಸಿದ ಕೀರ್ತಿ ಸುಧಾಕರ್ ಅವರಿಗೆ ಸಲ್ಲುತ್ತದೆ. ರಾಹುಲ್ ಗಾಂಧಿ ಅವರ ಭಾರತ ಜೋಡೋ ಸಂದರ್ಭದಲ್ಲಿ ಮಳೆ ಬಂದು ಅವ್ಯವಸ್ಥೆಯಾದಾಗ ಕಾರ್ಯಕ್ರಮ ಯಶಸ್ಸಿಗೆ ಅವರು ಹಾಗೂ ಅವರ ಕಾರ್ಯಕರ್ತರು ಪಟ್ಟ ಕಷ್ಟ ನೆನೆಯುತ್ತೇವೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು.

ಕೇರಳ ಶಾಸಕರಿಗೆ ಸಿಎಂ ಅಭಿನಂದನೆ

ಬೆಂಗಳೂರು: ಮುಸ್ಲಿಂ ಲೀಗ್ ಪಕ್ಷದ ಅಭ್ಯರ್ಥಿಯಾಗಿ ಕಾಸರಗೋಡು ಕ್ಷೇತ್ರದಿಂದ ಕೇರಳ ವಿಧಾನಸಭೆಗೆ ಆಯ್ಕೆಯಾಗಿರುವ ಮಾಹಿನ್ ಕಲ್ಲತ್ರ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಭಾನುವಾರ ತಮ್ಮ ನಿವಾಸದಲ್ಲಿ ಅಭಿನಂದಿಸಿದರು. ಚುನಾವಣೆ ವೇಳೆ ಸಿದ್ದರಾಮಯ್ಯ ಅವರು ಮಾಹಿನ್ ಅವರ ಪರ ಪ್ರಚಾರ ನಡೆಸಿದ್ದರು. ಈ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಧನ್ಯವಾದ ತಿಳಿಸಿದರು. ಈ ವೇಳೆ ಶಾಸಕ, ಕೆಕೆಆರ್‌ಡಿಬಿ ಅಧ್ಯಕ್ಷ ಅಜಯ್ ಸಿಂಗ್ ಇದ್ದರು.

ಕೇರಳ ನೂತನ ಶಾಸಕ ಮಾಹಿನ ಕಲ್ಲತ್ರ (ಸಿಎಂ ಬಲ ಭಾಗದಲ್ಲಿರುವವರು) ಅವರನ್ನು ಸಿಎಂ ಸಿದ್ದರಾಮಯ್ಯ ಅಭಿನಂದಿಸಿದರು.

ನೆಲಕ್ಕೆ ಬಿದ್ದ ಬೃಹತ್ ಮರ: ಸಂಚಾರ ಸ್ಥಗಿತ

ಚಿಕ್ಕೋಡಿ: ತಾಲೂಕಿನ ವಿವಿಧೆಡೆ ಬಿರುಗಾಳಿ ಸಹಿತ ಭಾರೀ ಮಳೆಯಾಗಿದೆ. ಬಿರುಗಾಳಿಯ ಅಬ್ಬರಕ್ಕೆ ಚಿಕ್ಕೋಡಿ ಹುಕ್ಕೇರಿ ರಸ್ತೆಯ ಸಂಕೇಶ್ವರ ಕ್ರಾಸ್ ಬಳಿ ರಸ್ತೆ ಮೇಲೆ ಬೃಹದಾಕಾರದ ಮರ ನೆಲಕ್ಕುರುಳಿದೆ.

ಸ್ಥಳಕ್ಕೆ ಚಿಕ್ಕೋಡಿ ಅಗ್ನಿಶಾಮಕ ಸಿಬ್ಬಂದಿ ಭೇಟಿ ನೀಡಿ, ಮರವನ್ನು ತೆಗೆಯುವ ಕಾರ್ಯ ಮಾಡಿದ್ದಾರೆ. ಸುಮಾರು 2 ಗಂಟೆಗಳ ಬಳಿಕ ರಸ್ತೆ ಸಂಚಾರಕ್ಕೆ ಮುಕ್ತವಾಗಿದೆ. ಇನ್ನು ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಎರಡು ದಿನ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ರಾಜ್ಯದ ಕೆಲವು ಭಾಗಗಳಲ್ಲಿ ಗಂಟೆಗೆ 40 ರಿಂದ 50 ಕಿ.ಮೀ ವೇಗದಲ್ಲಿ ಬಲವಾದ ಗಾಳಿ ಬೀಸುವ ಸಾಧ್ಯತೆ ಇದೆ.

ಪ್ರಧಾನಿ ನರೇಂದ್ರ ಮೋದಿ ಹೇಳಿಕೆಗೆ ಡಿಕೆಶಿ ತಿರುಗೇಟು

ಎಲ್ಲಾ ಕುರ್ಚಿಗಳೂ ಗಟ್ಟಿಯಾಗಿವೆ

ರಾಯಚೂರು: ರಾಜ್ಯದಲ್ಲಿ ಮುಖ್ಯಮಂತ್ರಿ ಕುರ್ಚಿ ಅಲುಗಾಡುತ್ತಿದೆ ಎಂಬ ಪ್ರಧಾನಿ ನರೇಂದ್ರ ಮೋದಿ ಹೇಳಿಕೆಗೆ ಉಪ ಡಿಸಿಎಂ ಡಿ.ಕೆ.ಶಿವಕುಮಾರ್ ತಿರುಗೇಟು ನೀಡಿದ್ದಾರೆ.

ಜಿಲ್ಲೆಯ ಲಿಂಗಸೂಗೂರು ಮುದಗಲ್‌ನಲ್ಲಿ ಭಾನುವಾರ ಮಾತನಾಡಿದ ಅವರು, ಪ್ರಧಾನಿ ಮಂತ್ರಿಗಳ ಕಣ್ಣಿಗೆ ಏನೇನು ಕಾಣುತ್ತಿದೆಯೋ ನಮಗೆ ಗೊತ್ತಿಲ್ಲ. ಯಾವ ಕುರ್ಚಿಗಳೂ ಅಲ್ಲಾಡುತ್ತಿಲ್ಲ. ಎಲ್ಲಾ ಕುರ್ಚಿಗಳೂ ಗಟ್ಟಿಯಾಗಿವೆ ಎಂದು ಹೇಳಿದರು.

ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ವಿಷಯವು ಹೈಕಮಾಂಡ್ ಹಂತಕ್ಕೆ ಬಿಟ್ಟ ವಿಚಾರ. ಹೈಕಮಾಂಡ್ ತೆಗೆದುಕೊಳ್ಳುವ ಯಾವುದೇ ನಿರ್ಧಾರಕ್ಕೆ ನಾನು ಬದ್ಧನಾಗಿದ್ದೇನೆ. ಇದೇ ಸಂದರ್ಭದಲ್ಲಿ ಮುದಗಲ್ ಪಟ್ಟಣದಲ್ಲಿ ತಲೆದೋರಿರುವ ಕುಡಿಯುವ ನೀರಿನ ಭೀಕರ ಸಮಸ್ಯೆಯ ಕುರಿತು ಪತ್ರಕರ್ತರು ಪ್ರಶ್ನಿಸಿದಾಗ ಪಟ್ಟಣದಲ್ಲಿ ನೀರಿನ ಸಮಸ್ಯೆ ಇರುವುದು ನನ್ನ ಗಮನಕ್ಕೆ ಬಂದಿಲ್ಲ ಎಂದು ಉತ್ತರಿಸಿದರು.

ಆದರೆ, ಈ ಕುರಿತು ಈಗಾಗಲೇ ವಿಧಾನಸಭೆಯ ಅಧಿವೇಶನದಲ್ಲಿ ಗಂಭೀರ ಚರ್ಚೆಗಳು ನಡೆದಿದ್ದರೂ, ಸಹ ಉಪ ಮುಖ್ಯಮಂತ್ರಿ ಮಾಹಿತಿ ಇಲ್ಲ ಎಂದು ಹೇಳಿರುವುದು ಸಾರ್ವಜನಿಕ ವಲಯದಲ್ಲಿ ಹಾಗೂ ಹೋರಾಟಗಾರರಲ್ಲಿ ತೀವ್ರ ಅಚ್ಚರಿ ಮತ್ತು ವಿಪರ್ಯಾಸಕ್ಕೆ ಕಾರಣವಾಗಿದೆ. ಸ್ಥಳೀಯ ನಿವಾಸಿಗಳು ನೀರಿನ ಸಮಸ್ಯೆ ತೀವ್ರವಾಗಿದ್ದರೂ, ಜನ ಪ್ರತಿನಿಧಿಗಳು ನಿರ್ಲಕ್ಷ್ಯ ವಹಿಸುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬೆಂಗಳೂರಿಗೆ ಆಗಮಿಸಿದ ಪ್ರಧಾನಿ ಮೋದಿಗೆ ರಾಜ್ಯ ಬಿಜೆಪಿ ನಾಯಕರಿಂದ ಅಭಿನಂದನೆ

ಕಾಂಗ್ರೆಸ್ ಈಗ ಪರಜೀವಿ ಪಕ್ಷ: ಮೋದಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕಾಂಗ್ರೆಸ್ ಈಗ ಪರಜೀವಿ ಪಕ್ಷವಾಗಿದೆ. ಇಂತಹ ಪರಜೀವಿಗೆ ಕಾಂಗ್ರೆಸ್‌ಗೆ ಈಗ ಮತ್ತೊಂದು ಪಕ್ಷ ಬೇಕಾಗಿದೆ ಎಂದು ಮೂದಲಿಸಿರುವ ಪ್ರಧಾನಿ ಮೋದಿ, ಕರ್ನಾಟಕದಲ್ಲಿ ಕಳೆದ ಮೂರು ವರ್ಷದಿಂದ ಕಾಂಗ್ರೆಸ್ ಸರಕಾರ ಆಡಳಿತ ನಡೆಸುವ ಬದಲು ಆಂತರಿಕ ಸಂಘರ್ಷ ಪರಿಹರಿಸುವುದರಲ್ಲೇ ನಿರತವಾಗಿದೆ ಎಂದು ಟೀಕಿಸಿದರು.

ಪಶ್ಚಿಮ ಬಂಗಾಳ, ಅಸ್ಸಾಂ ಮತ್ತು ಪುದುಚೇರಿ ರಾಜ್ಯಗಳಲ್ಲಿ ಜಯಭೇರಿ ಬಾರಿಸಿದ ಬಳಿಕ ಕರ್ನಾಟಕಕ್ಕೆ ಆಗಮಿಸಿದ ಪ್ರಧಾನಿಗೆ ಎಚ್‌ಎಎಲ್ ವಿಮಾನ ನಿಲ್ದಾಣದಲ್ಲಿ ನಡೆದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿ, ಕರ್ನಾಟಕದಲ್ಲಿ ಸಿಎಂ ಎಷ್ಟು ದಿನ ಇರಲಿದ್ದಾರೆ ಅನ್ನುವುದು ನಿರ್ಧರಿಸಲು ಆಗುತ್ತಿಲ್ಲ. ಇನ್ನೊಬ್ಬರಿಗೆ ಅವಕಾಶ ಸಿಗುತ್ತಾ ಇಲ್ಲವೋ ಅನ್ನೋದನ್ನು ನಿರ್ಣಯಿಸಲು ಆಗುತ್ತಿಲ್ಲ. ಆ ವಿಚಾರ ಡೋಲಾಯಮಾನವಾಗಿ ಇರಿಸಿದ್ದಾರೆ. ಕಾಂಗ್ರೆಸ್‌ವರು ಸುಳ್ಳುಗಾರರು. ಅವರ ಗ್ಯಾರಂಟಿಯೂ ಸುಳ್ಳಾಗಿದೆ. ಕಾಂಗ್ರೆಸ್ ಪುಸ್ತಕದಲ್ಲಿ ಆಡಳಿತದ ಚಾಪ್ಟರ್ ಇಲ್ಲವೇ ಇಲ್ಲ ಎಂದು ಟೀಕಿಸಿದರು.

ಕಾಂಗ್ರೆಸ್ ಈಗ ಒಂದು ಪರಜೀವಿ ಪಕ್ಷವಾಗಿದೆ. ಹೀಗಾಗಿ ಅವರು ಮೊದಲ ಅವಕಾಶ ಸಿಕ್ಕಕೂಡಲೇ ತಮ್ಮ ಮೈತ್ರಿ ಗೆಳೆಯರ ಬಳಿಯೂ ವಿಶ್ವಾಸದ್ರೋಹ ಮಾಡುತ್ತದೆ. ತಮಿಳುನಾಡಿನಲ್ಲಿ ನೋಡಿ ಡಿಎಂಕೆ ಜತೆ ಕಳೆದ 30 ವರ್ಷದಿಂದ ಕಾಂಗ್ರೆಸ್ ಕನಿಷ್ಠ ಸಂಬಂಧ ಹೊಂದಿತ್ತು. ಡಿಎಂಕೆ ಮೈತ್ರಿಯಿಂದ ಕಾಂಗ್ರೆಸನ್ನು ಅದೆಷ್ಟೋ ಬಾರಿ ಸಂಕಟದಿಂದ ಹೊರತೆಗೆದಿದೆ. 10 ವರ್ಷದ ಯುಪಿಎ ಸರಕಾರನೂ ಡಿಎಂಕೆಯಿಂದ ಅಸ್ತಿತ್ವದಲ್ಲಿ ಇತ್ತು. ಆದರೆ ಈಗ ಕಳೆದ 25-30 ವರ್ಷದಿಂದ ಡಿಎಂಕೆ ಜತೆ ಸಾವು ಬದುಕಿನ ಗೆಳೆತನ ಇತ್ತು ಅಧಿಕಾರದ ಗಾಳಿ ತಿರುಗುತ್ತಿದ್ದ ಹಾಗೇ, ಅಧಿಕಾರದ ಆಸೆಗೆ, ಅಧಿಕಾರದ ಹಸಿವಿನ ಕಾಂಗ್ರೆಸ್ ಅವಕಾಶ ಸಿಗುತ್ತಿದ್ದ ಹಾಗೇ ಡಿಎಂಕೆ ಬೆನ್ನಿಗೆ ಚೂರಿ ಹಾಕಿತು ಎಂದು ವಾಗ್ದಾಳಿ ನಡೆಸಿದರು.

ಪಶ್ಚಿಮ ಬಂಗಾಳ, ಅಸ್ಸಾಂ ಮತ್ತು ಪುದುಚೇರಿ ರಾಜ್ಯಗಳಲ್ಲಿ ಜಯಭೇರಿ ಬಾರಿಸಿದ ಬಳಿಕ ಕರ್ನಾಟಕಕ್ಕೆ ಆಗಮಿಸಿದ ನರೇಂದ್ರ ಮೋದಿ ಅವರಿಗೆ ರಾಜ್ಯ ಬಿಜೆಪಿ ನಾಯಕರಿಂದ ಅಭಿನಂದನೆ ಸಲ್ಲಿಸಲಾಯಿತು. ಈ ವೇಳೆ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ, ಆರ್.ಅಶೋಕ್, ಛಲವಾದಿ ನಾರಾಯಣಸ್ವಾಮಿ ಸೇರಿ ಹಲವರಿದ್ದರು. ಚಿತ್ರ: ಸುಧಾಕರ್ ದೇವರಾಜ್

ಮೋದಿ ದೇಶಕ್ಕೆ ಹೊಸ ಹುರುಪು ನೀಡಿದ್ದಾರೆ: ರವಿಶಂಕರ್ ಗುರೂಜಿ

ವಿಶ್ವದ ಪರಮಮಿತ್ರ, ಭಾರತದ ಅಮೂಲ್ಯ ಪುತ್ರ, ಶ್ರೇಷ್ಠ ಪುತ್ರ ಪ್ರಧಾನಿ ನರೇಂದ್ರ ಮೋದಿ ಆಗಿದ್ದಾರೆ. ವಸುಧೈವ ಕುಟುಂಬಕಂ ಉದ್ಘೋಷದ ಮೂಲಕ ನೀವು ಭಾರತವನ್ನು ಬೇರೆಯದೇ ಸ್ತರಕ್ಕೆ ತೆಗೆದುಕೊಂಡು ಹೋಗಿದ್ದೀರಿ. ನಾವು ಈ ಮುಂಚೆ ಹೆಚ್ಚು ಅಸುರಕ್ಷತೆ ಅನುಭವಿಸುತ್ತಿದ್ದೆವು. ಆದರೆ ಈಗ ಅದಿಲ್ಲ. ಉಗ್ರವಾದಕ್ಕೆ ನೀವು ಅಂತ್ಯ ಹಾಡಿದ್ದೀರಿ ಎಂದು ಶ್ರೀಶ್ರೀ ರವಿಶಂಕರ್ ಗುರೂಜಿ ಪ್ರಧಾನಿ ಮೋದಿಯನ್ನು ಹೊಗಳಿದ್ದಾರೆ.

ನೀವು ದೇಶಕ್ಕೆ ಹೊಸ ಹುರುಪು ನೀಡಿದ್ದೀರಿ. ಕಡಿಮೆ ಅವಧಿಯಲ್ಲಿ ನೀವು ಭಾರತವನ್ನು ಕೇಳುವ ದೇಶದಿಂದ ಕೊಡುವಂಥ ದೇಶವನ್ನಾಗಿ ಮಾಡಿದ್ದೀರಿ. ಜಗತ್ತಿನ ಆರ್ಥಿಕ ಸ್ಥಿತಿ ಹದಗೆಟ್ಟಾಗ ನೀವು ಭಾರತವನ್ನು ಸಂಬಾಳಿಸಿದಿರಿ. ಭಾರತವನ್ನು 14ನೇ ಆರ್ಥಿಕತೆಯಿಂದ ಈಗ ಮೂರನೇ ಆರ್ಥಿಕತೆಯ ಹೊಸ್ತಿಲಲ್ಲಿ ತಂದು ನಿಲ್ಲಿಸಿದ್ದೀರಿ. ಅಯೋಧ್ಯೆಯಲ್ಲಿ ಶ್ರೀರಾಮ ಟೆಂಟ್‌ನಲ್ಲಿ ವಾಸವಾಗಿದ್ದರು. ನೀವು ಅದರ ಎಲ್ಲಾ ಸಮಸ್ಯೆಯನ್ನು ನಿರ್ಮೂಲನೆ ಮಾಡಿ ಭವ್ಯ ಮಂದಿರವನ್ನು ನಿರ್ಮಿಸಿದ್ದೀರಿ. ಕಾಶಿಗೆ ನೀವು ಭವ್ಯತೆ ಕೊಟ್ಟಿದ್ದೀರಿ. ಕರ್ನಾಟಕದಿಂದ ಕಾಶಿಗೆ ನಿಕಟ ಸಂಬಂಧ ಇದೆ. ಯೋಗಕ್ಕೆ ನೀವು ಸ್ಥಾನಮಾನ ನೀಡಿದ್ದೀರಿ. ವಿಶ್ವ ಯೋಗ ದಿನ ಮಾಡಿ ಯೋಗಕ್ಕೆ ಸರ್ವ ಮಾನ್ಯತೆ ನೀಡಿದ್ದೀರಿ. ದೇಶವನ್ನು ಹೀಗೆ ಮುಂಚೂಣಿಯಲ್ಲಿ ಕೊಂಡೊಯ್ಯಿರಿ. ದೀರ್ಘಾಯು ಆಗಿರಿ ಎಂದು ಆರ್ಟ್ ಆಫ್ ಲಿವಿಂಗ್‌ನ ಶ್ರೀ ರವಿಶಂಕರ ಗುರೂಜಿ ಅವರು ಪ್ರಧಾನಿ ಮೋದಿ ಅವರಿಗೆ ಹಾರೈಸಿದರು.

ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಕೇಂದ್ರ ಸಚಿವರಾದ ಶೋಭಾ ಕರಂದ್ಲಾಜೆ, ವಿ. ಸೋಮಣ್ಣ, ಕರ್ನಾಟಕ ರಾಜ್ಯ ಉಸ್ತುವಾರಿ ಡಾ. ರಾಧಾಮೋಹನ್ ದಾಸ್ ಅಗರವಾಲ್, ಸಂಸದ ಬಸವರಾಜ ಬೊಮ್ಮಾಯಿ, ವಿರೋಧ ಪಕ್ಷದ ನಾಯಕ ಆರ್.ಅಶೋಕ, ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಸಂಸದ ಪಿ.ಸಿ. ಮೋಹನ್, ಶಾಸಕಿ ಮಂಜುಳಾ ಅರವಿಂದ ಲಿಂಬಾವಳಿ ಉಪಸ್ಥಿತರಿದ್ದರು.

ದೇಶದಲ್ಲಿ ಚುನಾವಣಾ ಪರಿಣಾಮಗಳ ಮೇಲೆ ಚರ್ಚೆ ನಡೆಯುತ್ತಿದೆ. ಪುದುಚೇರಿಯಲ್ಲಿ ಸತತ ಎರಡನೇ ಬಾರಿ ಎನ್‌ಡಿಎ ಸರಕಾರ, ಅಸ್ಸಾಂನಲ್ಲಿ ಸತತ ಮೂರನೇ ಬಾರಿ ಎನ್‌ಡಿಎ ಸರಕಾರ ರಚನೆ ಆಗುವುದು, ಪ.ಬಂಗಾಳದಲ್ಲಿ ಮೊದಲ ಬಾರಿಗೆ ಜನ ದೊಡ್ಡ ಜನಾಶೀರ್ವಾದ ನೀಡಿ ಸರಕಾರ ರಚನೆ ಮಾಡಿದ್ದೇವೆ.
-ನರೇಂದ್ರ ಮೋದಿ, ಪ್ರಧಾನಿ

ಕೈನಿಂದ ಬೆನ್ನಿಗೆ ಚೂರಿ

ಕಾಂಗ್ರೆಸ್ ಬೆನ್ನಿಗೆ ಚೂರಿ ಹಾಕುವ ಪಕ್ಷ. ಮೂರು ಚುನಾವಣೆಯಲ್ಲಿ ಎಲ್ಲವೂ ಸೇರಿದರೂ 100 ಸೀಟ್ ಮುಟ್ಟಲು ಆಗಿಲ್ಲ. ಆದರೆ, ಅವರ ಅಹಂಕಾರ ಎಷ್ಟಿದೆ ಎಂದರೆ ಅವರ ಸೋಲಿಗೆ ಇಡೀ ಜಗತ್ತನ್ನು ದೂರುತ್ತಿದ್ದಾರೆ. ಸಂವಿಧಾನ, ಲೋಕತಂತ್ರ, ಕೋರ್ಟ್, ಚುನಾವಣಾ ಆಯೋಗ ವಿರುದ್ಧದ ಅವರ ದ್ವೇಷವನ್ನು ನಾನು ನನ್ನ ಸಾರ್ವಜನಿಕ ಜೀವನದಲ್ಲಿ ನೋಡಿಲ್ಲ. ಅವರು ನಿರಾಶೆಯಲ್ಲಿ ಮುಳುಗಿದ್ದಾರೆ, ಕೆಟ್ಟ ಭಾಷೆ ಬಳಸುವ ಬದಲು ಅವರ ಬಳಿ ಯಾವುದೇ ಅಜೆಂಡಾ ಇಲ್ಲದಾಗಿದೆ. ನಮಗೆ ಲೋಕ ಕಲ್ಯಾಣ ಸರ್ವಪರಿಯಾಗಿದೆ. ಅದು ಬರೇ ಬಾಯಿ ಮಾತಿಗೆ ಸೀಮಿತವಾಗಿಲ್ಲ. ಅದನ್ನು ನಾವು ಬದುಕಿ ತೋರಿಸಿದ್ದೇವೆ. ನಮ್ಮ ಮಂತ್ರ ಸಬ್ ಕಾ ಸಾತ್ ಸಬ್ ಕಾ ವಿಕಾಸ್ ಇದೆ. ಉತ್ತಮ ಆಡಳಿತ ನಮ್ಮ ಮಾಡೆಲ್ ಆಗಿದೆ. ಹಾಗಾಗಿ, ಪ್ರತಿ ರಾಜ್ಯಗಳಲ್ಲಿ ಎರಡು, ಮೂರು ಬಾರಿ ಬಿಜೆಪಿಯನ್ನು ಗೆಲ್ಲಿಸುತ್ತಾರೆ. ಆದರೆ ಕಾಂಗ್ರೆಸ್ ಸರಕಾರ ಒಂದು ಅವಧಿಯ ಬಳಿಕ ಎರಡು ಬಾರಿ ಗೆಲ್ಲಲು ಸಾಧ್ಯವಾಗುವುದಿಲ್ಲ. ಅವರ ವಿರುದ್ಧ ಬಹುಬೇಗ ಆಡಳಿತ ವಿರೋಧಿ ಅಲೆ ಕಾಣಿಸುತ್ತದೆ. ಕಾಂಗ್ರೆಸ್ ಕೇವಲ ವಿಶ್ವಾಸಘಾತಕ ಮಾಡಲು ಬರುತ್ತದೆ ಎಂದು ಟೀಕಿಸಿದರು.

ಸಂಪಾದಕೀಯ

ಹೂವಿನ ಹಾಸಲ್ಲ ವಿಜಯ್ ಹಾದಿ

ತಮಿಳುನಾಡಿನಲ್ಲಿ ಸತತ ಐದು ದಿನಗಳ ಬಹುಮತದ ಕಸರತ್ತು ಮುಕ್ತಾಯವಾಗಿದ್ದು, ನಟ ಜೋಸೆಫ್ ವಿಜಯ್ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ. ಅವರ ಟಿವಿಕೆ ಪಕ್ಷಕ್ಕೆ ಕಾಂಗ್ರೆಸ್, ಸಿಪಿಐ, ಸಿಪಿಎಂ, ವಿಸಿಕೆ, ಮುಸ್ಲಿಂ ಲೀಗ್ ಬೆಂಬಲ ಸೂಚಿಸಿದ್ದು, ವಿಜಯ್ ಬೆಂಬಲಿಗ ಶಾಸಕರ ಸಂಖ್ಯೆ 121ಕ್ಕೇರಿ ಅವರು ಸರಕಾರ ರಚಿಸಲು ಮುಂದಾಗಿದ್ದಾರೆ. ಬಹುಮತದ ಸಂಖ್ಯೆಯನ್ನೇನೋ ಅವರು ಸಂಪಾದಿಸಿದ್ದಾರೆ. ಆದರೆ ಅವರನ್ನು ಸಂಭಾಳಿಸಿಕೊಂಡು ಹೋಗುವ ಕಷ್ಟದ ಕೆಲಸ ವಿಜಯ್ ಮುಂದಿದೆ. ಮೈತ್ರಿಕೂಟ ಎಂದ ಮೇಲೆ ಒಬ್ಬೊಬ್ಬರ ಆಶಯ ಒಂದೊಂದು ಇರುತ್ತದೆ. ಅದಕ್ಕನುಗುಣವಾಗಿ ಅವರು ಹೆಜ್ಜೆ ಹಾಕಬೇಕಾಗುತ್ತದೆ. ಮೌಲ್ಯ ಸಿದ್ಧಾಂತಗಳಲ್ಲಿ ರಾಜಿ ಅನಿವಾರ್ಯವಿದೆ. ತಮಿಳುನಾಡು ದ್ರಾವಿಡ ಆದ್ಯತೆಯ ಸಿದ್ಧಾಂತಕ್ಕೆ ಇದುವರೆಗೂ ಮಣೆ ಹಾಕಿದೆ. ದ್ರಾವಿಡ ಆದ್ಯತೆ ಒಳ್ಳೆಯದೇ. ಆದರೆ ಅದಕ್ಕಾಗಿ ಒಕ್ಕೂಟ ಸರ್ಕಾರದ ಜೊತೆಗೆ ಹಿಡಿದ ಸಂಘರ್ಷದ ಮಾದರಿ ಸಮರ್ಪಕವಾಗಿರಲಿಲ್ಲ. ಹೆಜ್ಜೆ ಹೆಜ್ಜೆಗೂ ರಾಜ್ಯಪಾಲರ ಜೊತೆ ತಿಕ್ಕಾಟ ನಡೆಸಲಾಗುತ್ತಿತ್ತು. ಮಾಜಿ ಮುಖ್ಯಮಂತ್ರಿ ಸ್ಟಾಲಿನ್ ಹಾಗೂ ಅವರ ಪುತ್ರ ಉದಯನಿಧಿ ಸ್ಟಾಲಿನ್ ನೇರಾನೇರ ಹಿಂದುತ್ವವಿರೋಧಿ ವಿಚಾರಗಳ ಜೊತೆಗೆ ಜೋಡಿಸಿಕೊಂಡಿದ್ದರು. ವಿಜಯ್ ಅವರದೇ ಆದರ್ಶದಲ್ಲಿ ಮುಂದುವರಿಯುತ್ತಾರೋ ಅಥವಾ ಹೊಸ ಹಾದಿ ಹಿಡಿಯುತ್ತಾರೋ ನೋಡಬೇಕಿದೆ. ವಿಜಯ್ ಮುಂದೆ ಇರುವ ಇನ್ನೊಂದು ಸಂಕಷ್ಟದ ಸಂಗತಿ ಎಂದರೆ ಕೊಟ್ಟ ಭರವಸೆಗಳನ್ನು ಈಡೇರಿಸುವ ಅನಿವಾರ್ಯತೆ. ಮನೆ ಯಜಮಾನಿಗೆ ಮಾಸಿಕ 2500 ರೂ., ವಾರ್ಷಿಕ 6 ಗ್ಯಾಸ್ ಸಿಲಿಂಡರ್ ಉಚಿತ, ಬಡ ಮನೆತನದ ಹೆಣ್ಣುಮಕ್ಕಳ ಮದುವೆಗೆ ಒಂದು ಪವನ್ ಚಿನ್ನ ಹಾಗೂ ರೇಶ್ಮೆ ಸೀರೆ; ನವಜಾತ ಹೆಣ್ಣುಮಕ್ಕಳಿಗೆ ಚಿನ್ನದುಂಗುರ ಹಾಗೂ ಕಿಟ್. ನಿರುದ್ಯೋಗಿ ಪದವಿಧರರಿಗೆ ಮಾಸಿಕ 4000 ರೂ., ಕೃಷಿ ಸಾಲ ಮನ್ನಾ, ಮಹಿಳೆಯರಿಗೆ ಉಚಿತ ಪ್ರಯಾಣ, 200 ಯುನಿಟ್ ವಿದ್ಯುತ್ ಉಚಿತ ಇತ್ಯಾದಿ ಇತ್ಯಾದಿ ಕಾಮನ ಬಿಲ್ಲನ್ನು ವಿಜಯ್ ತೋರಿಸಿದ್ದಾರೆ. ಆದರೆ ಇವನ್ನೆಲ್ಲ ಈಡೇರಿಸಲು ರಾಜ್ಯದ ಖಜಾನೆಯಲ್ಲಿ ಸಂಪನ್ಮೂಲ ಇದ್ದಂತಿಲ್ಲ. ಇದನ್ನು ವಿಜಯ್ ಎಲ್ಲಿಂದ ತರುತ್ತಾರೆ ನೋಡಬೇಕಿದೆ. ತೆರಿಗೆ ಸಂಗ್ರಹ ಸಾಕಷ್ಟಿದ್ದರೂ ರಾಜ್ಯದಲ್ಲಿ ಬಡತನ ಹಾಗೂ ನಿರುದ್ಯೋಗವೂ ವ್ಯಾಪಕವಾಗಿದೆ. ಈ ಹಿನ್ನೆಲೆಯಲ್ಲಿ ವಿಜಯ್ ತಮ್ಮ ಆಡಳಿತವನ್ನು ಮೊದಲಿನಿಂದ ಶುರು ಮಾಡಬೇಕಿದೆ. ಸಿನಿಮಾದ ಜನಪ್ರಿಯತೆಯಿಂದ ಸಿಕ್ಕಿದ ಗೆಲುವನ್ನು ದಕ್ಷ ಆಡಳಿತದ ಮೂಲಕ ದಕ್ಕಿಸಿಕೊಳ್ಳಬೇಕಿದೆ.

ಸೊಂಪಾದಕೀಯ

ಕಿಕ್ ಇಳಿಸಲಿರುವ ಲಿಕ್ಕರ್

ಆಲ್ಕೋಹಾಲ್ ಪ್ರಮಾಣ ಜಾಸ್ತಿ ಇರುವ ಮದ್ಯ ಸೇವಿಸಿದರೆ ನಶಾ ಬೇಗನೆ ಏರುತ್ತದೆ. ಕಡಿಮೆ ಆಲ್ಕೋಹಾಲ್ ಇರುವ ಲಿಕ್ಕರ್ ಸವಿದರೆ ಕಡಿಮೆ ಕಿಕ್ಕು ಎಂಬುದು ಮದ್ಯಪ್ರಿಯರ ಅಂಬೋಣ. ಆದರೆ ಅದು ಉಲ್ಟಾ ಆಗುವ ಸಾಧ್ಯತೆ ಕಾಣಿಸುತ್ತಿದೆ. ಇಂದಿನಿಂದ ಅಬಕಾರಿ ಹೊಸ ತೆರಿಗೆ ನೀತಿ ಜಾರಿ ಆಗುತ್ತಿದೆ. ಅದರ ಪ್ರಕಾರ ಆಲ್ಕೋಹಾಲ್ ಇನ್ ಬೆವರೇಜ್ (ಎಐಬಿ) ಆಧಾರಿತ ಹೊಸ ತೆರಿಗೆ ಜಾರಿಗೆ ತರುತ್ತಿದೆ. ಆ ಮೂಲಕ 6 ದಶಕಗಳಿಂದ ರಾಜ್ಯದಲ್ಲಿ ಜಾರಿಯಲ್ಲಿದ್ದ ಬಲ್ಕ್ ಲೀಟರ್ ಆಧಾರಿತ ತೆರಿಗೆ ವ್ಯವಸ್ಥೆಗೆ ತೆರೆ ಬೀಳಲಿದೆ. ಹೊಸ ನೀತಿಯ ಪ್ರಕಾರ, ಬ್ರಾಂಡಿ, ವಿಸ್ಕಿ, ರಮ್, ಜಿನ್, ಬಿಯರ್ ಸೇರಿದಂತೆ ವಿವಿಧ ಮದ್ಯಗಳಲ್ಲಿ ಇರುವ ಆಲ್ಕೋಹಾಲ್ ಪ್ರಮಾಣ ಆಧರಿಸಿ ತೆರಿಗೆ ವಿಧಿಸಲಾಗುತ್ತದೆ. ವಿಶೇಷವಾಗಿ ಹೆಚ್ಚು ಮಾರಾಟವಾಗುವ 180 ಮಿಲಿ ಟೆಟ್ರಾ ಪ್ಯಾಕ್‌ಗಳ ವಿಸ್ಕಿ, ರಮ್, ಬ್ರಾಂಡಿ, ಜಿನ್ ಹಾಗೂ ವೋಡ್ಕಾ ಬೆಲೆ ಕನಿಷ್ಠ ಶೇ.20 ಹೆಚ್ಚಾಗಲಿದೆ. ಅಂದರೆ ನೂರು ರೂ. ಇದ್ದಲ್ಲಿ ನೂರಿಪ್ಪತ್ತು ಆಗಲಿದೆ. ಇದೇ ವೇಳೆ ಪ್ರೀಮಿಯಂ ಮದ್ಯ ಬ್ರಾಂಡ್‌ಗಳ ಬೆಲೆ ಶೇ.16ರಿಂದ ಶೇ.20ರವರೆಗೆ ಇಳಿಕೆಯಾಗುವ ಸಾಧ್ಯತೆ ಇದೆಯಂತೆ. ಅಂದರೆ ಮಧ್ಯಮ, ಕೆಳ ಮಧ್ಯಮ ವರ್ಗದ ಕುಡುಕರು ಆಯ್ದುಕೊಳ್ಳುವ ಸ್ಥಳೀಯ ಬ್ರಾಂಡ್‌ಗಳು, ಟೆಟ್ರಾ ಪ್ಯಾಕ್‌ಗಳ ಬೆಲೆ ಏರಿ, ಏರಿದ ಬೆಲೆಯನ್ನು ಕೇಳಿದಾಗಲೇ ಕಿಕ್ಕು ಇಳಿದುಹೋಗುವ ಎಲ್ಲ ಸಾಧ್ಯತೆಯೂ ಇದೆ. ಇದು ಮದ್ಯಪಾನದ ಮೂಲಕ ದೇಶದ ತೆರಿಗೆ ಸಂಗ್ರಹ ಏರಿಕೆಗೆ ಪಣ ತೊಟ್ಟಿರುವ ಎಲ್ಲ ಮದ್ಯಪ್ರಿಯರನ್ನು ನಿರಾಶೆಗೊಳಿಸಿದೆಯಂತೆ. ಹೆಚ್ಚಿನ ಬೆಲೆಯ ಲಿಕ್ಕರ್ ಕರುಳು ಸುಡುವುದಲ್ಲದೆ ಜೇಬೂ ಸುಡುವುದು ಖಚಿತ.

ಸಂಪಾದಕರ ಸದ್ಯಶೋಧನೆ

ವಿಮಾನದ ಕಿಟಕಿ ರಹಸ್ಯ

ವಿಮಾನದ ಕಿಟಕಿಗಳು ಕೇವಲ ಹೊರಗಿನ ಸುಂದರ ನೋಟವನ್ನು ಸವಿಯಲು ಇರುವ ಗಾಜಿನ ತುಣುಕುಗಳಲ್ಲ. ಅವು ಆಕಾಶದಲ್ಲಿ ಹಾರುವ ಪ್ರಯಾಣಿಕರ ಪಾಲಿನ ಜೀವನಾಡಿಗಳು. ಸಮುದ್ರ ಮಟ್ಟದಿಂದ ಸುಮಾರು 35 ಸಾವಿರ ಅಡಿ ಎತ್ತರದಲ್ಲಿ ವಿಮಾನ ಹಾರುವಾಗ, ಹೊರಗಿನ ವಾತಾವರಣವು ಪ್ರಯಾಣಿಕರಿಗೆ ಪೂರಕವಾಗಿರುವುದಿಲ್ಲ. ಅಲ್ಲಿನ ಗಾಳಿಯ ಒತ್ತಡ ತೀರಾ ಕಡಿಮೆ ಇರುತ್ತದೆ ಮತ್ತು ತಾಪಮಾನವು ಮೈನಸ್ 50 ಡಿಗ್ರಿ ಸೆಲ್ಸಿಯಸ್‌ಗಿಂತಲೂ ಕೆಳಗಿರುತ್ತದೆ. ಇಂಥ ಪರಿಸ್ಥಿತಿಯಲ್ಲಿ ವಿಮಾನದ ಒಳಗಿನ ಒತ್ತಡವನ್ನು ಕಾಪಾಡಿಕೊಳ್ಳಲು ಮತ್ತು ಪ್ರಯಾಣಿಕರನ್ನು ಸುರಕ್ಷಿತವಾಗಿರಿಸಲು ಈ ಕಿಟಕಿಗಳನ್ನು ಅತ್ಯಂತ ಸಂಕೀರ್ಣವಾದ ತಂತ್ರಜ್ಞಾನದೊಂದಿಗೆ ವಿನ್ಯಾಸಗೊಳಿಸಲಾಗಿರುತ್ತದೆ. ವಿಮಾನದ ಕಿಟಕಿಗಳನ್ನು ಪ್ರಮುಖವಾಗಿ ಮೂರು ಪದರಗಳನ್ನಾಗಿ ವಿಂಗಡಿಸಬಹುದು. ಹೊರಗಿನ ಪದರ (Outer Pane), ಮಧ್ಯದ ಪದರ (Middle Pane) ಮತ್ತು ಒಳಗಿನ ಪದರ (Inner Pane). ಈ ಪೈಕಿ ಹೊರಗಿನ ಮತ್ತು ಮಧ್ಯದ ಪದರಗಳು ರಚನಾತ್ಮಕವಾಗಿ ಅತ್ಯಂತ ಬಲಿಷ್ಠವಾಗಿದ್ದು, ಇಡೀ ವಿಮಾನದ ಕ್ಯಾಬಿನ್ ಒತ್ತಡವನ್ನು ತಡೆದುಕೊಳ್ಳುವ ಸಾಮರ್ಥ್ಯ ಹೊಂದಿರುತ್ತವೆ. ಇವುಗಳನ್ನು ಸಾಮಾನ್ಯವಾಗಿ 'ಸ್ಟ್ರೆಚ್ಡ್ ಅಕ್ರಿಲಿಕ್' ಎಂಬ ವಿಶೇಷ ವಸ್ತುವಿನಿಂದ ತಯಾರಿಸಲಾಗುತ್ತದೆ. ಇದು ಸಾಮಾನ್ಯ ಗಾಜಿಗಿಂತ ಹಗುರವಾಗಿದ್ದರೂ, ವಿಪರೀತ ಒತ್ತಡ ಮತ್ತು ತಾಪಮಾನದ ವ್ಯತ್ಯಾಸಗಳನ್ನು ತಡೆದುಕೊಳ್ಳುವ ಗುಣವನ್ನು ಹೊಂದಿದೆ. ಈ ವಿನ್ಯಾಸದಲ್ಲಿ ಅತ್ಯಂತ ಕುತೂಹಲಕಾರಿ ಅಂಶವೆಂದರೆ ಮಧ್ಯದ ಪದರದಲ್ಲಿ ಇರುವ ಒಂದು ಸಣ್ಣ ರಂಧ್ರ. ಇದನ್ನು 'ಬ್ರೀದರ್ ಹೋಲ್' ಅಥವಾ 'ವೆಂಟ್ ಹೋಲ್' ಎಂದು ಕರೆಯಲಾಗುತ್ತದೆ. ವಿಮಾನ ಎತ್ತರಕ್ಕೆ ಹೋದಂತೆ ಕ್ಯಾಬಿನ್ ಒಳಗೆ ಕೃತಕವಾಗಿ ಒತ್ತಡವನ್ನು ಹೆಚ್ಚಿಸಲಾಗುತ್ತದೆ. ಈ ರಂಧ್ರವು ಕ್ಯಾಬಿನ್ ಒಳಗಿನ ಒತ್ತಡವು ಹೊರಗಿನ ಮತ್ತು ಮಧ್ಯದ ಪದರದ ನಡುವಿನ ಜಾಗಕ್ಕೂ ತಲುಪುವಂತೆ ಮಾಡುತ್ತದೆ. ಇದರಿಂದಾಗಿ ಹೊರಗಿನ ಪದರವು ಮಾತ್ರ ಹೆಚ್ಚಿನ ಒತ್ತಡವನ್ನು ಹೊರುತ್ತದೆ ಮತ್ತು ಮಧ್ಯದ ಪದರವು ಒಂದು ವೇಳೆ ಹೊರಗಿನ ಪದರಕ್ಕೆ ಹಾನಿಯಾದರೆ ಮಾತ್ರ ಕೆಲಸ ಮಾಡುವಂತೆ 'ಬ್ಯಾಕ್-ಅಪ್' ಆಗಿ ಕಾರ್ಯನಿರ್ವಹಿಸುತ್ತದೆ. ವಿಮಾನದ ಕಿಟಕಿಗಳ ಆಕಾರವನ್ನು ಗಮನಿಸಿದರೆ ಅವುಗಳು ಯಾವಾಗಲೂ ಅಂಡಾಕಾರದಲ್ಲಿ ಅಥವಾ ಬಾಗಿದ ಮೂಲೆಗಳಿರುವಂತೆ ವಿನ್ಯಾಸ ಮಾಡಿರಲಾಗುತ್ತದೆ. ಇದರ ಹಿಂದೆ ವೈಜ್ಞಾನಿಕ ಕಾರಣವಿದೆ. 1950ರ ದಶಕದಲ್ಲಿ ಬ್ರಿಟಿಷ್ 'ಡಿ ಹ್ಯಾವಿಲ್ಯಾಂಡ್ ಕಾಮೆಟ್' ವಿಮಾನಗಳು ಅಪಘಾತಕ್ಕೀಡಾದಾಗ ನಡೆಸಿದ ಸಂಶೋಧನೆಯಲ್ಲಿ, ಚೌಕಾಕಾರದ ಕಿಟಕಿಗಳ ಮೂಲೆಗಳಲ್ಲಿ ಒತ್ತಡವು ಕೇಂದ್ರೀಕೃತವಾಗಿ ಅಲ್ಲಿ ಬಿರುಕುಗಳು ಮೂಡುವುದು ಪತ್ತೆಯಾಯಿತು. ದುಂಡಗಿನ ಮೂಲೆಗಳು ಒತ್ತಡವನ್ನು ಕಿಟಕಿಯ ಸುತ್ತಲೂ ಸಮಾನವಾಗಿ ಹರಡುತ್ತವೆ, ಇದರಿಂದಾಗಿ ಲೋಹದ ಆಯಾಸ (Metal Fatigue) ಕಡಿಮೆಯಾಗಿ ವಿಮಾನದ ಬಾಳಿಕೆ ಹೆಚ್ಚುತ್ತದೆ. ಕಿಟಕಿಯ ಒಳಗಿನ ಪದರವು ಕೇವಲ ಪ್ರಯಾಣಿಕರ ರಕ್ಷಣೆಗಾಗಿ ಇರುತ್ತದೆ. ಪ್ರಯಾಣಿಕರು ಆಕಸ್ಮಿಕವಾಗಿ ಕಿಟಕಿಗೆ ಒದೆಯುವುದು ಅಥವಾ ತಟ್ಟುವುದು ಮಾಡಿದರೆ ಅದು ಮುಖ್ಯವಾದ ಒತ್ತಡ ತಡೆಯುವ ಪದರಗಳಿಗೆ ಹಾನಿ ಮಾಡಬಾರದು ಎಂಬ ಉದ್ದೇಶದಿಂದ ಈ ಪ್ಲಾಸ್ಟಿಕ್ ಪದರವನ್ನು ಅಳವಡಿಸಲಾಗಿರುತ್ತದೆ. ಇದು ಕಿಟಕಿಯ ಮುಖ್ಯ ಭಾಗವಲ್ಲದಿದ್ದರೂ, ಧೂಳು, ಗೀರುಗಳು ಮತ್ತು ಮಾನವ ಹಸ್ತಕ್ಷೇಪದಿಂದ ಒಳಗಿನ ತಾಂತ್ರಿಕ ಪದರಗಳನ್ನು ರಕ್ಷಿಸುತ್ತದೆ. ಆಕಾಶದಲ್ಲಿ ಅತಿ ಹೆಚ್ಚಿನ ತಂಪು ಇರುವುದರಿಂದ ಕಿಟಕಿಗಳ ಮೇಲೆ ಮಂಜು ಅಥವಾ ಹಿಮ ಗಡ್ಡೆ ಕಟ್ಟುವ ಸಾಧ್ಯತೆ ಇರುತ್ತದೆ. ಆದರೆ, ಈ ಮೂರು ಪದರಗಳ ನಡುವೆ ಇರುವ Airspace ಅತ್ಯುತ್ತಮ ಇನ್ಸುಲೇಶನ್ ನೀಡುತ್ತದೆ. ವೆಂಟ್ ಹೋಲ್ ಮೂಲಕ ಗಾಳಿಯ ಪರಿಚಲನೆ ನಡೆಯುವುದರಿಂದ ತೇವಾಂಶವು ಕಿಟಕಿಗಳ ನಡುವೆ ಸಂಗ್ರಹವಾಗುವುದಿಲ್ಲ. ಇದು ಪ್ರಯಾಣಿಕರಿಗೆ ಯಾವುದೇ ಅಡೆತಡೆಯಿಲ್ಲದೆ ಹೊರಗಿನ ದೃಶ್ಯಗಳನ್ನು ನೋಡಲು ಮತ್ತು ಪೈಲಟ್‌ಗಳಿಗೆ ಸ್ಪಷ್ಟವಾದ ದೃಷ್ಟಿಯನ್ನು ಹೊಂದಲು ಸಹಾಯ ಮಾಡುತ್ತದೆ. ವಿಮಾನ ತಯಾರಿಕಾ ಸಂಸ್ಥೆಗಳಾದ ಬೋಯಿಂಗ್ ಮತ್ತು ಏರ್‌ಬಸ್ ತಮ್ಮ ವಿನ್ಯಾಸಗಳಲ್ಲಿ ಕಿಟಕಿಗಳ ತಂತ್ರಜ್ಞಾನವನ್ನು ನಿರಂತರವಾಗಿ ಸುಧಾರಿಸುತ್ತಿವೆ. ಉದಾಹರಣೆಗೆ, ಬೋಯಿಂಗ್ 787 ಡ್ರೀಮ್‌ಲೈನರ್‌ನಲ್ಲಿ ಸಾಂಪ್ರದಾಯಿಕ ಪ್ಲಾಸ್ಟಿಕ್ ಶೇಡ್‌ಗಳ ಬದಲಿಗೆ 'ಎಲೆಕ್ಟ್ರೋಕ್ರೋಮಿಕ್' ತಂತ್ರಜ್ಞಾನವನ್ನು ಬಳಸಲಾಗಿದೆ. ಇಲ್ಲಿ ಕಿಟಕಿಯ ಗಾಜು ಗುಂಡಿಯನ್ನು ಒತ್ತಿದ ಕೂಡಲೇ ಕಪ್ಪಾಗುತ್ತದೆ. ಇದು ಪ್ರಕಾಶಮಾನವಾದ ಸೂರ್ಯನ ಬೆಳಕನ್ನು ತಡೆಯುವುದಲ್ಲದೇ, ಕ್ಯಾಬಿನ್ ತಾಪಮಾನವನ್ನು ನಿಯಂತ್ರಣದಲ್ಲಿಡಲು ಸಹಾಯ ಮಾಡುತ್ತದೆ.

ಸಿದ್ದು ಸಂದೇಶ ರಾಹುಲ್ ಕಿವಿಗೆ ತಲುಪಿತು

ಮೂರ್ತಿಪೂಜೆ

ಆರ್.ಟಿ. ವಿಠ್ಠಲಮೂರ್ತಿ

vveditoped@gmail.com

ತೃಣಮೂಲ ಕಾಂಗ್ರೆಸ್‌ನ ಅಧಿನಾಯಕಿ ಮಮತಾ ಬ್ಯಾನರ್ಜಿ ಕುಸಿದು ಬಿದ್ದ ರೀತಿಯಿಂದ ದಿಲ್ಲಿಯ ಕಾಂಗ್ರೆಸ್ ವರಿಷ್ಠರಿಗೆ ಚಿಂತೆ ಸುರುವಾಗಿದೆ. ಅಷ್ಟೇ ಅಲ್ಲ, ಈ ಚಿಂತೆಯ ಪರಿಣಾಮವಾಗಿ ಅವರೀಗ ಕರ್ನಾಟಕದ ಮೇಲೆ ಕಣ್ಣು ನೆಟ್ಟಿದ್ದಾರೆ.

ಅಂದ ಹಾಗೆ ಪಶ್ಚಿಮ ಬಂಗಾಳವನ್ನು ಅಭೇದ್ಯ ಕೋಟೆಯನ್ನಾಗಿ ಮಾಡಿಕೊಂಡಿದ್ದ ಮಮತಾ ಬ್ಯಾನರ್ಜಿ ಇತ್ತೀಚಿನ ಚುನಾವಣೆಯಲ್ಲಿ ಕುಸಿದು ಬಿದ್ದರು. ಬಿಜೆಪಿಯ ಮಾರಕ ದಾಳಿಯ ಎದುರು ಅವರ ತೃಣಮೂಲ ಕಾಂಗ್ರೆಸ್ ಪಕ್ಷ ಸೋತು ಸುಣ್ಣವಾಯಿತು.

ಆದರೆ ಮಮತಾ ಬ್ಯಾನರ್ಜಿ ಅವರ ಪತನಕ್ಕೆ ಆ ರಾಜ್ಯದ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ಕಾರಣ. ರಾಜ್ಯದ ತೊಂಬತ್ತು ಲಕ್ಷಕ್ಕೂ ಹೆಚ್ಚು ಜನ ಈ ವಿಶೇಷ ಪರಿಷ್ಕರಣೆಯಿಂದ ಹೊರಬಿದ್ದಿದ್ದಕ್ಕಾಗಿ ತೃಣಮೂಲ ಕಾಂಗ್ರೆಸ್ ಪಕ್ಷದ ಶಕ್ತಿ ಸೊರಗಿತು. ಮತ್ತು ಇದನ್ನು ಎನ್‌ಕ್ಯಾಶ್ ಮಾಡಿಕೊಂಡ ಬಿಜೆಪಿ ಪಶ್ಚಿಮ ಬಂಗಾಳದ 200ಕ್ಕೂ ಹೆಚ್ಚು ವಿಧಾನಸಭಾ ಕ್ಷೇತ್ರಗಳಲ್ಲಿ ಗೆಲುವು ಗಳಿಸಿತು. ಮಮತಾ ಬ್ಯಾನರ್ಜಿ ಅವರ ಅಭೇದ್ಯ ಕೋಟೆ ಛಿದ್ರವಾಯಿತು ಎಂಬುದು ಕಾಂಗ್ರೆಸ್ ಸೇರಿದಂತೆ ಬಿಜೆಪಿ ವಿರೋಧಿ ಶಕ್ತಿಗಳ ಆರೋಪ.

ಈ ಹಿನ್ನೆಲೆಯಲ್ಲಿಯೇ ಕಾಂಗ್ರೆಸ್ ವರಿಷ್ಠರ ಗಮನವೀಗ ಕರ್ನಾಟಕದ ಮೇಲೆ ಬಿದ್ದಿದೆ. ಅಂದ ಹಾಗೆ ದೇಶದ ಬಹುತೇಕ ರಾಜ್ಯಗಳಲ್ಲಿ ಅಧಿಕಾರ ಹಿಡಿದರೂ ಬಿಜೆಪಿಗೆ ಇನ್ನೂ ದಕ್ಷಿಣ ಭಾರತ ಒಲಿಯುತ್ತಿಲ್ಲ. ತಮಿಳುನಾಡಿನಲ್ಲಿ ಅದೇನೇ ಕಸರತ್ತು ಮಾಡಿದರೂ ಅದಕ್ಕೆ ಶಕ್ತಿ ಸಿಗುತ್ತಿಲ್ಲ. ಎಐಎಡಿಎಂಕೆಯ ಜತೆ ಸೇರಿ ದಷ್ಟಪುಷ್ಟವಾಗೋಣ ಎಂದರೂ ಅದು ಸಾಧ್ಯವಾಗಿಲ್ಲ.

ತಮಿಳುನಾಡಿನ ಮತದಾರರು ಪರಂಪರಾಗತ ಎದುರಾಳಿಗಳಾದ ಡಿಎಂಕೆ-ಎಐಎಡಿಎಂಕೆಯನ್ನು ತಿರಸ್ಕರಿಸಿದರೂ ಬಿಜೆಪಿ ವಿರೋಧಿ ಮನಃಸ್ಥಿತಿಯ ಟಿವಿಕೆ ಪಕ್ಷದ ಕೈ ಹಿಡಿದಿದ್ದಾರೆ. ಆ ಪಕ್ಷದ ನಾಯಕ ವಿಜಯ್ ಸಿಎಂ ಗದ್ದುಗೆಯ ಮೇಲೆ ಕೂರುವಂತೆ ನೋಡಿಕೊಂಡಿದ್ದಾರೆ. ಇನ್ನು ಕೇರಳದ ವಿಷಯ ಬಂದರೂ ಬಿಜೆಪಿಯ ಸ್ಥಿತಿ ಇಂಪ್ರೂವ್ ಆಗಿಲ್ಲ. ಬದಲಿಗೆ ಸಿಕ್ಕ ಸಿಕ್ಕ ಕಡೆ ಹೊಡೆತ ತಿನ್ನುತ್ತಿರುವ ಕಾಂಗ್ರೆಸ್ ಪಕ್ಷ ಇಲ್ಲಿ ತಲೆ ಎತ್ತಿ ಕುಳಿತಿದೆ.

ಹೀಗಾಗಿ ಪಶ್ಚಿಮ ಬಂಗಾಳದಲ್ಲಿ ತಾವು ದಿಗ್ವಿಜಯ ಸಾಧಿಸಿದ ರೀತಿಯಲ್ಲಿ ಕರ್ನಾಟಕವನ್ನು ವಶಪಡಿಸಿಕೊಳ್ಳಲು ಬಿಜೆಪಿ ವರಿಷ್ಠರು ಪ್ಲಾನು ಮಾಡಿದ್ದಾರೆ. ಮತ್ತು ಆ ಪ್ಲಾನಿಗೆ ಪೂರಕವಾಗಿ ಆರೆಸ್ಸೆಸ್ ಕರ್ನಾಟಕದಲ್ಲಿ ರಂಗಪ್ರವೇಶ ಮಾಡಿದೆ. ಅದರಲ್ಲೂ ಮುಖ್ಯವಾಗಿ ಆರೆಸ್ಸೆಸ್ ಮುಖ್ಯಸ್ಥರಾದ ಮೋಹನ್ ಭಾಗವತ್ ಅವರು ಕರ್ನಾಟಕದ ಆರೆಸ್ಸೆಸ್ ಪ್ರಮುಖರಿಗೆ ನಿರ್ಣಾಯಕ ಸೂಚನೆ ಕೊಟ್ಟಿದ್ದಾರೆ.

ಅವರ ಈ ಸೂಚನೆಯ ಹಿನ್ನೆಲೆಯಲ್ಲಿ ಆರೆಸ್ಸೆಸ್ ಕಾರ್ಯಕರ್ತರು ಕರ್ನಾಟಕದುದ್ದ ಪಸರಿಕೊಳ್ಳುತ್ತಿದ್ದಾರೆ ಮತ್ತು ಮುಖ್ಯವಾಗಿ ಯುವ ಮತದಾರರ ಒಲವು ಗಳಿಸುವ ಕಸರತ್ತು ಆರಂಭಿಸಿದ್ದಾರೆ.ಅವರು ಹೀಗೆ ಕಸರತ್ತು ನಡೆಸುತ್ತಿದ್ದಂತೆಯೇ ಕರ್ನಾಟಕದಲ್ಲಿ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ಕಾರ್ಯ ನಡೆದರೆ ಮತ್ತು ಬಿಜೆಪಿಯ ಇಚ್ಛೆಗೆ ತಕ್ಕಂತೆ ನಡೆದರೆ ಡೇಂಜರ್ ಗ್ಯಾರಂಟಿ ಎಂಬುದು ಕಾಂಗ್ರೆಸ್ ವರಿಷ್ಠರ ಆತಂಕ.

ಅವರಿಗಿರುವ ಸದ್ಯದ ಮಾಹಿತಿಯ ಪ್ರಕಾರ, ಕರ್ನಾಟಕದಲ್ಲಿ ಪಶ್ಚಿಮ ಬಂಗಾಳದಂತೆ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ (ಎಸ್‌ಐಆರ್) ನಡೆದರೆ ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ನ ಹಾಲಿ ಶಾಸಕರ ಪೈಕಿ ಮಿನಿಮಮ್ ನೂರು ಮಂದಿ ಸೋಲು ಅನುಭವಿಸಲಿದ್ದಾರೆ.

ಈ ಪ್ರಮಾಣದಲ್ಲಿ ಕಾಂಗ್ರೆಸ್ ಶಾಸಕರು ಸೋಲು ಅನುಭವಿಸಿದರೆ ರಾಜ್ಯ ಕಾಂಗ್ರೆಸ್ 1994ರ ಪರಿಸ್ಥಿತಿಗೆ ತಲುಪುತ್ತದೆ. ಆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ನಲವತ್ತು ಸೀಟುಗಳ ಗಡಿ ತಲುಪಲು ವಿಫಲವಾಗಿತ್ತು. ಇಂತಹ ಹೀನಾಯ ಸ್ಥಿತಿ 2028ರಲ್ಲಿ ರಿಪೀಟ್ ಆದರೆ ಭವಿಷ್ಯದಲ್ಲಿ ಮೇಲೆದ್ದು ನಿಲ್ಲುವುದೂ ಪಕ್ಷಕ್ಕೆ ಕಷ್ಟವಾಗಲಿದೆ. ಯಾಕೆಂದರೆ 94ರಲ್ಲಿ ಸೋಲು ಅನುಭವಿಸಿದರೂ ಮುಂದಿನ ಚುನಾವಣೆಯ ಹೊತ್ತಿಗೆ ಎಸ್.ಎಂ.ಕೃಷ್ಣ, ಮಲ್ಲಿಕಾರ್ಜುನ ಖರ್ಗೆ, ಕೆ.ಹೆಚ್.ರಂಗನಾಥ್, ಎಂ.ವೈ.ಘೋರ್ಪಡೆ ಸೇರಿದಂತೆ ಹಲವು ಅತಿರಥ-ಮಹಾರಥರಿದ್ದ ಕಾಂಗ್ರೆಸ್ ಸೈನ್ಯ ಗೆಲುವು ಗಳಿಸಿತು.

ಆದರೆ 2028ರ ವಿಧಾನಸಭಾ ಚುನಾವಣೆಯಲ್ಲಿ ಸೋತರೆ 2033ರ ಹೊತ್ತಿಗೆ ಕಾಂಗ್ರೆಸ್ ಸೈನ್ಯವನ್ನು ಮೇಲೆಬ್ಬಿಸಿ ನಿಲ್ಲಿಸಲು ಇಂತಹ ಅತಿರಥ-ಮಹಾರಥರ ದಂಡು ಇರುವುದಿಲ್ಲ. ಅಷ್ಟೊತ್ತಿಗಾಗಲೇ ಸಿದ್ದರಾಮಯ್ಯ, ಮಲ್ಲಿಕಾರ್ಜುನ ಖರ್ಗೆ, ಪರಮೇಶ್ವರ್ ಸೇರಿದಂತೆ ಅತಿರಥ-ಮಹಾರಥರು ಶಸ್ತ್ರತ್ಯಾಗ ಮಾಡಿರುತ್ತಾರಾದ್ದರಿಂದ ಅವರ ಜಾಗವನ್ನು ತುಂಬುವ ಸೇನಾನಿಗಳು ಕಡಿಮೆ. ಹೀಗಾಗಿ 2028 ರ ಚುನಾವಣೆಯಲ್ಲಿ ಗೆದ್ದು ಅಧಿಕಾರಕ್ಕೆ ಬರದೇ ಹೋದರೂ ಸಾಲಿಡ್ಡು ಸಂಖ್ಯೆಯ ಶಾಸಕರಾದರೂ ಇರಬೇಕು ಎಂಬುದು ಕಾಂಗ್ರೆಸ್ ವರಿಷ್ಠರ ಲೆಕ್ಕಾಚಾರ.

ಹೀಗಾಗಿ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆಯ ಸಂದರ್ಭದಲ್ಲಿ ಟಾರ್ಗೆಟ್ ಆಗುವ ಪಾಕೀಟು ಯಾವುದಿದೆ? ಅದರ ಮೇಲೆ ವಿಶೇಷ ಗಮನ ಹರಿಸಬೇಕು ಮತ್ತು ಆ ಪಾಕೀಟಿನ ಜನ ಮತದಾರರ ಪಟ್ಟಿಯಲ್ಲಿ ಉಳಿದುಕೊಳ್ಳಲು ಅಗತ್ಯವಾದ ದಾಖಲೆಗಳನ್ನು ಹೊಂದಲು ಅನುಕೂಲ ಮಾಡಿಕೊಡಬೇಕು ಎಂಬುದು ಕಾಂಗ್ರೆಸ್ ವರಿಷ್ಠರ,

ಅದರಲ್ಲೂ ರಾಹುಲ್ ಗಾಂಧಿಯವರ ಸಿಗ್ನಲ್ಲು. ಮುಂದೇನಾಗುತ್ತದೋ ನೋಡಬೇಕು.

ರಾಹುಲ್‌ಗೆ ತಲುಪಿದ ಸಿದ್ದು ಸಂದೇಶ ಇನ್ನು ಪಶ್ಚಿಮ ಬಂಗಾಳದ ಎಲೆಕ್ಷನ್ ರಿಸಲ್ಟು ರಾಜ್ಯ ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ಅಧಿಕಾರ ಹಂಚಿಕೆಯ ಸಂಘರ್ಷಕ್ಕೆ ಹೊಸ ತಿರುವು ನೀಡಿದೆ. ಅಂದ ಹಾಗೆ ಈ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಕೇರಳದಲ್ಲಿ ಗೆದ್ದು ಅಧಿಕಾರವನ್ನೇನೋ ಹಿಡಿದಿದೆ. ಆದರೆ ಪಶ್ಚಿಮ ಬಂಗಾಳದ ಫಲಿತಾಂಶ ನೋಡಿದ ಮೇಲೆ ಅತೀವ ಆತಂಕವೂ ಆಗಿದೆ.

ಯಾಕೆಂದರೆ ಪಶ್ಚಿಮ ಬಂಗಾಳವನ್ನು ಗೆದ್ದ ಮೇಲೆ ಬಿಜೆಪಿಯ ಒಟ್ಟಾರೆ ಗಮನ ಕರ್ನಾಟಕದ ಕಡೆ ಸರಿದಿದೆ. ಇವತ್ತು ದಕ್ಷಿಣ ಭಾರತವನ್ನು ವಶಪಡಿಸಿಕೊಳ್ಳಲು ಬಿಜೆಪಿ ಪಾಲಿಗೆ ಕರ್ನಾಟಕವೇ ಖೈಬರ್ ಕಣಿವೆ ಇದ್ದಂತೆ. 2028ರಲ್ಲಿ ಕರ್ನಾಟಕವನ್ನು ವಶಪಡಿಸಿಕೊಂಡರೆ ಮುಂದೆ ತಮಿಳುನಾಡು, ಕೇರಳದಂತಹ ರಾಜ್ಯಗಳಲ್ಲಿ ಪಕ್ಷದ ನೆಲೆಯನ್ನು ಭದ್ರಪಡಿಸಿಕೊಳ್ಳಬಹುದು ಎಂಬುದು ಮೋದಿ-ಅಮಿತ್ ಶಾ ಯೋಚನೆ.

ಹೀಗಾಗಿ ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರವನ್ನು ದುರ್ಬಲಗೊಳಿಸುವ ಸಣ್ಣ ಅವಕಾಶವನ್ನೂ ಈ ಜೋಡಿ ಕಳೆದುಕೊಳ್ಳಲು ಬಯಸುವುದಿಲ್ಲ. ಅದರಲ್ಲೂ 2023ರಲ್ಲಿ ತಾವೇ ನಿರಂತರವಾಗಿ ಕರ್ನಾಟಕಕ್ಕೆ ನುಗ್ಗಿದರೂ ಬಿಜೆಪಿಯನ್ನು ಮರಳಿ ಅಧಿಕಾರಕ್ಕೆ ತರಲಾಗದ ಹತಾಶೆ, ಅವಮಾನವಾಗಿ ಪರಿವರ್ತನೆಗೊಂಡು ಪ್ರಧಾನಿ ನರೇಂದ್ರ ಮೋದಿ ಅವರನ್ನು ಕಾಡುತ್ತಿದೆ. ಹೀಗಾಗಿ ಐದು ರಾಜ್ಯಗಳ ವಿಧಾನಸಭೆ ಚುನಾವಣೆಯ ನಂತರ ಮತ್ತೆ ಅವರು ಕರ್ನಾಟಕಕ್ಕೆ ನುಗ್ಗತೊಡಗಿದ್ದಾರೆ. ಅಷ್ಟೇ ಅಲ್ಲ, ಸಿದ್ದರಾಮಯ್ಯ-ಡಿಕೆಶಿ ನಡುವಣ ಖುರ್ಚಿ ಕಾಳಗದ ಬಗ್ಗೆ ಪ್ರಸ್ತಾಪಿಸತೊಡಗಿದ್ದಾರೆ.

ಪರಿಣಾಮ? ಸಿದ್ದರಾಮಯ್ಯ-ಡಿಕೆಶಿ ನಡುವಣ ಅಧಿಕಾರ ಸಂಘರ್ಷದ ಎಪಿಸೋಡಿನ ಬಗ್ಗೆ ರಾಹುಲ್ ಗಾಂಧಿ ಅವರಿಗೆ ಉತ್ಸಾಹವಿಲ್ಲ.

ಇದೇ ರೀತಿ ಈಗ ಸಿದ್ದರಾಮಯ್ಯ ಕೂಡಾ ಎಷ್ಟು ಅಗ್ರೆಸಿವ್ ಆಗಿದ್ದಾರೆ ಎಂದರೆ ರಾಹುಲ್ ಗಾಂಧಿ ಪ್ರಸ್ತಾಪಿಸುವ ಮುನ್ನವೇ, 'ಅಧಿಕಾರದಿಂದ ಕೆಳಗಿಳಿಯಲು ನಾನು ರೆಡಿ. ಆದರೆ ಹಾಲಿ ಗೃಹ ಸಚಿವ, ದಲಿತ ನಾಯಕ ಡಾ.ಜಿ.ಪರಮೇಶ್ವರ್ ಅವರೇ ಮುಂದಿನ ಸಿಎಂ ಆಗಬೇಕು. ಹಾಗಾಗದಿದ್ದರೆ ಮುಂದಿನ ಪರಿಣಾಮಗಳಿಗೆ ನಾನು ಹೊಣೆಯಲ್ಲ' ಎಂಬ ಮೆಸೇಜು ರಾಹುಲ್ ಕಿವಿಗೆ ತಲುಪುವಂತೆ ಮಾಡಿದ್ದಾರೆ.

ಇಂತಹ ಪರಿಸ್ಥಿತಿಯಲ್ಲಿ ತಾವು ದುಡುಕಿ ಒಂದು ಹೆಜ್ಜೆ ಇಟ್ಟರೆ ಮೋದಿ-ಅಮಿತ್ ಶಾ ಜೋಡಿ ರಾಜ್ಯ ಸರ್ಕಾರವನ್ನೇ ಖೆಡ್ಡಾಗೆ ಬೀಳಿಸಬಹುದು ಎಂಬುದು ರಾಹುಲ್ ಆತಂಕ. ಹೀಗಾಗಿ ಅವರು ಅಧಿಕಾರ ಹಂಚಿಕೆಯ ಹಿಯರಿಂಗ್ ಡೇಟನ್ನೇ ಮುಂದೂಡಲು ನಿರ್ಧರಿಸಿದ್ದಾರೆ ಎಂಬುದು ಕಾಂಗ್ರೆಸ್ ಮೂಲಗಳ ಮಾತು.

ಇವರಿಗೆ ಬೇಕು ಅವರಿಗೆ ಬೇಡಈ ಮಧ್ಯೆ ಗ್ರೇಟರ್ ಬೆಂಗಳೂರು ಅಥಾರಿಟಿ (ಜಿಬಿಎ) ಚುನಾವಣೆಯನ್ನು ತ್ವರಿತವಾಗಿ ಮಾಡಿ ಅಂತ ರಾಹುಲ್ ಗಾಂಧಿ ರಾಜ್ಯದ ನಾಯಕರಿಗೆ ಸೂಚನೆ ಕೊಟ್ಟಿದ್ದಾರಂತೆ.ಮುಂದಿನ ವಿಧಾನಸಭಾ ಚುನಾವಣೆಯ ಹೊತ್ತಿಗೆ ರಾಜಧಾನಿಯಲ್ಲಿ ಹೋರಾಡಲು ಕಾರ್ಪೊರೇಟರುಗಳ ಪಡೆ ಬೇಕಲ್ಲ? ಅವರಿದ್ದರೆ ತಾನೇ ತಳಹಂತದಲ್ಲಿ ಕಾರ್ಯಕರ್ತರ ಪಡೆಯನ್ನು ಸಜ್ಜುಗೊಳಿಸುವುದು ಎಂಬುದು ರಾಹುಲ್ ಗಾಂಧಿಯವರ ಯೋಚನೆ.

ಹೀಗೆ ರಾಹುಲ್ ಗಾಂಧಿ ಅವರು ನೀಡಿದ ಸೂಚನೆಯನ್ನು ಪಾಲಿಸಲು ಸಿಎಂ ಸಿದ್ದರಾಮಯ್ಯ ಅವರಂತೂ ರೆಡಿ ಇದ್ದಾರೆ. ಆದರೆ ಜಿಬಿಎ ಚುನಾವಣೆ ನಡೆಸುವ ವಿಷಯದಲ್ಲಿ ಅವರಿಗೆ ಉತ್ಸುಕತೆ ಇದ್ದರೂ ಅವರ ವಿರೋಧಿ ಪಾಳಯಕ್ಕೆ ಬಿಲ್ ಕುಲ್ ಇಷ್ಟವಿಲ್ಲ.

ಕಾರಣ? ಒಂದು ಸಲ ಜಿಬಿಎ ಚುನಾವಣೆ ಘೋಷಣೆಯಾದರೆ ಸಿದ್ದರಾಮಯ್ಯ ಅವರು ಸಿಎಂ ಹುದ್ದೆಯಲ್ಲಿ ಮತ್ತಷ್ಟು ಗಟ್ಟಿಯಾಗಿ ಸೆಟ್ಲಾಗುತ್ತಾರೆ. ಎಲ್ಲಕ್ಕಿಂತ ಮುಖ್ಯವಾಗಿ ಚುನಾವಣೆ ನಡೆದರೆ ಕಾಂಗ್ರೆಸ್ ಗೆಲ್ಲುವುದು ಕಷ್ಟ. ಈಗಿರುವ ಮಾಹಿತಿಯ ಪ್ರಕಾರ ಐದು ಜಿಬಿಎಗಳ ಪೈಕಿ ನಾಲ್ಕು ಜಿಬಿಎಗಳ ಅಧಿಕಾರ ಬಿಜೆಪಿ-ಜೆಡಿಎಸ್ ಮಿತ್ರಕೂಟದ ತೆಕ್ಕೆಗೆ ಹೋಗುತ್ತದೆ. ಇದ್ದುದರಲ್ಲಿ ಸೆಂಟ್ರಲ್ ಜಿಬಿಎ ಕಾಂಗ್ರೆಸ್ ವಶಕ್ಕೆ ಬರಬಹುದು.

ಇವತ್ತು ಚುನಾವಣೆಯಲ್ಲಿ ಕನಿಷ್ಠ ಮೂರು ಜಿಬಿಎಗಳನ್ನು ವಶಪಡಿಸಿಕೊಂಡರೆ ಓಕೆ. ಹಾಗಾಗದೆ ಒಂದೇ ಜಿಬಿಎ ಕೈಗೆ ಬಂದರೆ ಸಿದ್ದರಾಮಯ್ಯ ಗ್ಯಾಂಗು ಹೊಸ ಆಟಕ್ಕಿಳಿಯುತ್ತದೆ. ಇದು ಬೆಂಗಳೂರು ಉಸ್ತುವಾರಿ ನಾಯಕರ ವೈಫಲ್ಯ ಎನ್ನುತ್ತದೆ. ಹೀಗಾಗಿ ಜಿಬಿಎ ಚುನಾವಣೆ ತಕ್ಷಣ ನಡೆಯುವ ಬದಲು ಇನ್ನಷ್ಟು ಕಾಲ ಮುಂದಕ್ಕೆ ಹೋಗಲಿ ಎಂಬುದು ಸಿದ್ದರಾಮಯ್ಯ ವಿರೋಧಿ ಪಾಳಯದ ಲೆಕ್ಕಾಚಾರ.

ಮೂಲಗಳ ಪ್ರಕಾರ ಇದೇ ಕಾರಣಕ್ಕಾಗಿ ಜಿಬಿಎ ಚುನಾವಣೆ ನಡೆಸದಂತೆ ಸುಪ್ರೀಂ ಕೋರ್ಟಿನ ಮೊರೆ ಹೋಗಲು ಈ ಪಾಳಯ ನಿರ್ಧರಿಸಿದೆ. ಅಂದ ಹಾಗೆ ಜಿಬಿಎ ಚುನಾವಣೆಯನ್ನು ಮುಂದೂಡಲು ಅನುಕೂಲವಾಗುವಂತೆ ಸುಪ್ರೀಂ ಕೋರ್ಟಿನಲ್ಲಿ ವಾದಿಸಲು ಅದಕ್ಕೆ ಕಾರಣವೂ ಇದೆ.

ಯಾಕೆಂದರೆ ಈಗ ಆಗಿರುವ ಜಿಬಿಎ ವಾರ್ಡುಗಳು ಕ್ರಮಬದ್ಧವಾಗಿಲ್ಲ, ಕೆಲವು ವಾರ್ಡುಗಳಲ್ಲಿ ಒಂಬತ್ತು ಸಾವಿರ ಮತದಾರರಿದ್ದರೆ, ಕೆಲವು ವಾರ್ಡುಗಳಲ್ಲಿ ನಲವತ್ತೈದು ಸಾವಿರ ಮತದಾರರಿದ್ದಾರೆ. ಇನ್ನು ಕೆ.ಆರ್.ಪುರಂ ವ್ಯಾಪ್ತಿಯ ಗುಂಜೂರಿನಲ್ಲಿ ಎರಡು ಅಪಾರ್ಟ್‌ಮೆಂಟು ಮತ್ತು ಸ್ವಲ್ಪೇ ಸ್ವಲ್ಪ ಪ್ರದೇಶವನ್ನು ಒಳಗೊಂಡ ಚೋಟಾ ವಾರ್ಡನ್ನು ಸೃಷ್ಟಿಸಲಾಗಿದೆ. ಇದೇ ರೀತಿ ಮಹಿಳಾ ಮೀಸಲಾತಿ ಸಮರ್ಪಕವಾಗಿಲ್ಲ ಎಂಬುದು ಸೇರಿದಂತೆ ಹಲವು ಲೋಪಗಳನ್ನು ಎತ್ತಿ ತೋರಿಸಲು ಈ ಪಾಳಯ ನಿರ್ಧರಿಸಿದ್ದು, ಇದೆಲ್ಲವನ್ನು ಹಿಡಿದುಕೊಂಡು ಈ ಪಾಳಯದ ಒಂದು ಗುಂಪು ದೇಶದ ಖ್ಯಾತ ನ್ಯಾಯವಾದಿ ಮುಕುಲ್ ರೋಹ್ಟಗಿ ಬಳಿ, ಮತ್ತೊಂದು ಗುಂಪು ಅಭಿಷೇಕ್ ಮನು ಸಿಂಘ್ವಿ ಅವರನ್ನು ಸಂಪರ್ಕಿಸಿದೆ. ಎಲ್ಲವೂ ಲೆಕ್ಕಾಚಾರದ ಪ್ರಕಾರ ನಡೆದರೆ ಜಿಬಿಎ ಚುನಾವಣೆಗೆ ಬ್ರೇಕ್ ಹಾಕಲು ಸಿದ್ದು ವಿರೋಧಿ ಪಾಳಯ ಸುಪ್ರೀಂ ವಾರ್ ಆರಂಭಿಸಲಿದೆ.

ಪ್ರಸ್ತುತ

ಡಾ. ಎಲ್ಲಪ್ಪ ಜಿ., ಕಲಾದಗಿ

ಲೈಬ್ರರಿಗಳಿಗೆ ಮರು ಜೀವ

ಗ್ರಂಥಾಲಯಗಳು ಜ್ಞಾನ ಮತ್ತು ಅರಿವಿನ ಕೀಲಿ ಕೈಗಳು. ಇಂದು ಇವು ತಟಸ್ಥ ಮೌನಕ್ಕೆ ಜಾರಿವೆ. ಆಧುನಿಕತೆಯ ಹೊಡೆತಕ್ಕೆ ಸಿಕ್ಕು, ಜನಜೀವನ ಒತ್ತಡ ಮತ್ತು ವೇಗವನ್ನು ಪಡೆದುಕೊಂಡಿದೆ. ಇದರ ಮಧ್ಯದಲ್ಲಿ ನಿಂತು ನೋಡುವ, ಕುಂತು ಕೇಳುವ ವ್ಯವಧಾನ ಇಲ್ಲವಾಗಿವೆ. ಹಾಗಾಗಿ ಪುಸ್ತಕಗಳು ದೂಳು ಹಿಡಿದು, ಕಪಾಟುಗಳಲ್ಲಿ ಗೋಡೆಗಳ ನಡುವೆ ಬಂಧಿಗಳಾಗಿ ಅನಾಥವಾಗಿ ಬಿಟ್ಟಿವೆ. ಕಾಯಕಲ್ಪವಿಲ್ಲದೆ ಕೊರಗುತ್ತಿರುವ ಗ್ರಾಮೀಣ ಪ್ರದೇಶದ ಗ್ರಂಥಾಲಯಗಳಿಗೆ ಮರು ಜೀವ ತುಂಬುವ ಸಂಕಲ್ಪವನ್ನು ಕೈಗೆತ್ತಿಕೊಂಡಿರುವ ರಾಜ್ಯ ಸರ್ಕಾರದ ನಡೆ ಸ್ವಾಗತಾರ್ಹ. ಇದರಿಂದಾಗಿ ಗ್ರಾಮೀಣ ಪ್ರದೇಶದ ಸಾವಿರಾರು, ಲಕ್ಷಾನುಗಟ್ಟಲೆ ಯುವಜನತೆಗೆ ಉಪಯೋಗ ಆಗಬಹುದು.

ಈಗ ಗ್ರಾಮೀಣ ಪ್ರದೇಶದಲ್ಲಿರುವ ಗ್ರಂಥಾಲಯಗಳನ್ನು 'ಅರಿವು ಕೇಂದ್ರಗಳು' ಎಂದು ಕರೆಯಲಾಗುತ್ತಿದೆ. ಈ ಉಪನಾಮೆಯು ಅರ್ಥಪೂರ್ಣವಾದದ್ದು. ವಾಸ್ತವ ಸ್ಥಿತಿ-ಗತಿ ಅರಿತು ಅವುಗಳಿಗೆ ಕಾರ್ಯಾತ್ಮಕ ಮತ್ತು ಕ್ರಿಯಾತ್ಮಕ ಶಕ್ತಿ ತುಂಬುವ ಪ್ರಯತ್ನದ ಭಾಗದಂತಿದೆ. ರಾಜ್ಯದಲ್ಲಿ ಒಟ್ಟು 5,895 ಅರಿವು ಕೇಂದ್ರಗಳು ಚಾಲ್ತಿಯಲ್ಲಿವೆ. 5770 ಗ್ರಾಮೀಣ ಪ್ರದೇಶದ ಅರಿವು ಕೇಂದ್ರಗಳನ್ನು ಡಿಜಿಟಲ್ ಗ್ರಂಥಾಲಯಗಳಾಗಿ ಮೇಲ್ದರ್ಜೆಗೆ ಏರಿಸಲಾಗಿದೆ. ಪಂಚಾಯತಿ ಗ್ರಂಥಾಲಯಗಳಲ್ಲಿ 50.28 ಲಕ್ಷ ಮಕ್ಕಳ ನೋಂದಣಿ ಆಗಿರುವುದು ಒಳ್ಳೆಯ ಬೆಳವಣಿಗೆ. ಈ ಕೇಂದ್ರಗಳು ಮುಖ್ಯವಾಗಿ ಮೂರು ಆಶಯಗಳಿಗೆ ಒತ್ತು ನೀಡಿದಂತಿದೆ. ಒಂದು, ಪುಸ್ತಕ ಪ್ರೀತಿ ಹೆಚ್ಚಿಸುವುದು. ಎರಡು, ಹಳ್ಳಿಗಳಲ್ಲಿನ ವಿದ್ಯಾರ್ಥಿಗಳ, ಯುವಕರ ಭವಿಷ್ಯಕ್ಕೆ ಭದ್ರಬುನಾದಿ ಹಾಕುವುದು. ಮೂರು, ಪರೀಕ್ಷಾ ಸಿದ್ಧತೆಗೆ ಅನುಕೂಲಗೊಳಿಸುವುದು. ಈ ನಿಟ್ಟಿನಲ್ಲಿ ಇವುಗಳ ರೂಪರೇಷೆ ಬದಲಾಯಿಸುವ ಚಿಂತನೆ ಅಡಗಿದೆ. ಜೊತೆಗೆ ಯುವಕರನ್ನು ಗ್ರಂಥಾಲಯದ ಕಡೆಗೆ ಸೆಳೆಯುವ ಹೊಸ ಪ್ರಯತ್ನವಾಗಿಯೂ ನೋಡಬಹುದಾಗಿದೆ.

ನಾವು ಬಾಲ್ಯದಲ್ಲಿ ಕಂಡ 'ಅಕ್ಷರವಾಣಿ' ಎಂಬ ಯೋಜನೆ ನೆನಪಿಗೆ ಬರುತ್ತದೆ. ಇದು ಸಾಕ್ಷರತೆಯ ಕಾರ್ಯಕ್ರಮವಾದರೂ ಗ್ರಂಥಾಲಯದ ಸ್ವರೂಪ ಇತ್ತು. ಅಂದು ಬಹು ಜನರನ್ನು, ಅದರಲ್ಲೂ ಯುವಕರನ್ನು ಆಕರ್ಷಣೀಯ ಸೆಳೆತಕ್ಕೆ ಒಳಪಡಿಸಿತ್ತು. ಆ ಕೇಂದ್ರಕ್ಕೆ ಇಬ್ಬರನ್ನು ಗೌರವಧನ ಕೊಟ್ಟು ನೇಮಿಸಲಾಗಿತ್ತು. ಅಭಿರುಚಿಗೆ ತಕ್ಕಂತೆ ರೂಪಿಸಲಾಗಿತ್ತು. ಟಿವಿಯೂ ಇತ್ತು. ಚೆಸ್ಸು, ಕೇರಂ, ಕ್ರಿಕೆಟ್ ಇಂತಹ ಆಟದ ಸಾಮಗ್ರಿಗಳು ಇದ್ದವು. ಓದು ಮತ್ತು ಕಲಿಕೆಗೆ ಪುಸ್ತಕಗಳು ಇದ್ದವು. ಗ್ರಾಮೀಣ ಯುವ ಜನತೆಗೆ ಇವು ಹೊಸತನವನ್ನು ಕಟ್ಟಿಕೊಟ್ಟಿದ್ದವು. ಹಾಗಾಗಿ ಆಸಕ್ತಿಯ ಮೂಲಕ ಅರಿವಿನ ಕೇಂದ್ರಗಳು ಆಗಿದ್ದವು. ಆದರೆ ಇವು ದೀರ್ಘಕಾಲ ಉಳಿಯಲಿಲ್ಲ ಎಂಬ ಬೇಸರ. ಕೆಲವೇ ವರ್ಷಗಳಲ್ಲಿ ಅವು ಮುಚ್ಚಿ ಹೋದವು. ಗೌರವಧನ ನಿಂತ ಮೇಲೆ ಅಲ್ಲಿನ ಸಾಮಗ್ರಿಗಳು ಸುಳಿವಿಲ್ಲದಂತೆ ಕಾಣೆಯಾಗಿ ಹೋದವು. ಸಾಮಾಜಿಕ ಪಲ್ಲಟ ಮತ್ತು ಅರಿವನ್ನು ಮೂಡಿಸುವ ಯೋಜನೆಗಳು ತಾತ್ಕಾಲಿಕವಾಗಿ ಸ್ಥಗಿತಗೊಳ್ಳಬಾರದು. ಇದು ಬಹಳ ಮುಖ್ಯವಾದ ಒತ್ತಾಸೆ. ಒಂದು ಊರಿನ ಭವಿಷ್ಯವನ್ನು ಇಲ್ಲವೇ ದೇಶದ ಭವಿಷ್ಯವನ್ನೇ ಪರಿವರ್ತಿಸುವಷ್ಟು ಸಶಕ್ತತೆ ಇರುವುದನ್ನು ಪರಿಗಣಿಸಬೇಕಿದೆ.

ಪುಸ್ತಕಗಳನ್ನು ಓದುವ ಸಂಸ್ಕೃತಿ ಕ್ಷೀಣಿಸುವ ಹೊತ್ತಿನಲ್ಲಿ ಇಂತಹ ಗಮನಾರ್ಹ ನಿರ್ಧಾರಗಳು, ಹೊಸತನ ನಿರ್ಮಾಣ ಮಾಡುವ ಆಲೋಚನೆ ಉತ್ತಮವಾದದ್ದು. ಪುಸ್ತಕಗಳೆಂದರೆ ಕೇವಲ ಹಾಳೆಯ ಮೇಲೆ ಮುದ್ರಣಗೊಂಡ ಬಳ್ಳಿ ಆಕಾರದ ಅಕ್ಷರಗಳಲ್ಲ.

ಅವು ಅರಿವಿನ ಬೀಜಗಳು. ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಯುವಕರಿಗೆ ಮತ್ತು ಅವರ ಭವಿಷ್ಯಕ್ಕೆ ಬೇಕಾಗುವ ವಿದ್ವತ್ತಿನ ಕಡೆಗೆ ಅವರನ್ನು ತಂದು ತೊಡಗಿಸಬೇಕಿದೆ. ಕೋಚಿಂಗ್ ಸೆಂಟರ್‌ಗಳಿಗೆ ಹೋಗಿ ಪರೀಕ್ಷಾ ಸಿದ್ಧತೆಯನ್ನು ಮಾಡಿಕೊಳ್ಳಲಾಗದ ಬಡ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ, ಯುವಕರಿಗೆ ಆರ್ಥಿಕ ಹೊರೆಯನ್ನು ಇವು ಕಡಿಮೆ ಮಾಡಬಲ್ಲವು. ಸ್ಪರ್ಧಾತ್ಮಕ ಯುಗ ಧರ್ಮಕ್ಕೆ ಬೇಕಾದ ಜ್ಞಾನವನ್ನು ಪಡೆದುಕೊಳ್ಳಲು, ವರ್ತಮಾನದೊಂದಿಗೆ ಸ್ಪರ್ಧಿಸಲು ಇವು ಉತ್ತಮ ವೇದಿಕೆಗಳು ಆಗಬಲ್ಲವು. ಭವಿಷ್ಯತ್ತು ರೂಪಿಸುವ ಅನುಭವ ಮಂಟಪಗಳಾಗಬೇಕಾದರೆ, ಅವುಗಳಿಗೆ ಬೇಕಾದ ಸೂಕ್ತ ಪುಸ್ತಕಗಳು, ಯೋಗ್ಯವಾದ ಸೌಲಭ್ಯಗಳನ್ನು ಕೊಟ್ಟು ಬಲಿಷ್ಠಗೊಳಿಸಬೇಕು. ಇಲ್ಲವಾದರೆ ಹತ್ತರಲ್ಲಿ ಒಂದಾಗಿ ಉಳಿಯುವಂತಾಗಬಾರದು!

ಕೇವಲ ಪುಸ್ತಕದ ಪ್ರೀತಿ, ಅರಿವು ಮತ್ತು ಪರೀಕ್ಷಾ ಸಿದ್ಧತೆಗೆ ಸೀಮಿತವಾಗದೆ, ಯುವ ಜನತೆಯ ಭವಿಷ್ಯದ ಜೊತೆಗೆ ಹಳ್ಳಿಗಳ ಪರಿವರ್ತನೆಗೂ ಮೂಲ ದ್ರವ್ಯವಾಗಬಹುದು. ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಧಾರ್ಮಿಕ ವಿವೇಚನೆಗಳು ಹೊಸ ರೂಪವನ್ನು ಪಡೆದುಕೊಳ್ಳಬಹುದು. ವೈಚಾರಿಕ ಚಿಂತನೆಗಳ ಮೂಲಕ ಹಲವು ಪಲ್ಲಟಗಳಿಗೆ ನಾಂದಿಯೂ ಆಗಬಹುದು. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ದೇವಾಲಯಗಳಿಗಿಂತ ಶಾಲೆ ಮತ್ತು ಗ್ರಂಥಾಲಯಗಳು ಮುಖ್ಯ. ಇವೆರಡೂ ಅರಿವಿನ ಕೇಂದ್ರಗಳು ಎಂಬುದು ಅವರ ಮುಖ್ಯ ಧೋರಣೆ.

ಇವು ಅನೇಕ ರೀತಿಯ ಬದಲಾವಣೆಗೆ ಮುನ್ನುಡಿ ಬರೆಯುತ್ತವೆ. ಅಷ್ಟೇ ಅಲ್ಲ ದೇಶದ ದಿಕ್ಸೂಚಿಯನ್ನೇ ಬದಲಿಸುತ್ತವೆ ಎಂಬುದು ಬಲವಾದ ನಂಬಿಕೆಯೂ ಆಗಿದೆ. ಎದೆಗೆ ಒತ್ತುವ ಈ ಅಕ್ಷರಗಳು ಅರಿವನ್ನು ಮೂಡಿಸಿ, ಭರವಸೆಯ ಆತ್ಮವಿಶ್ವಾಸವನ್ನು ಕಟ್ಟಬಲ್ಲವು. ಇದರಿಂದಾಗಿ ಹಳ್ಳಿಗಳು ಇನ್ನಷ್ಟು ಸದೃಢಗೊಳ್ಳುತ್ತವೆ.

ಸೋಮನಾಥದಿಂದ ಸಿಂದೂರದವರೆಗೆ ಭಾರತ ಪುನರುತ್ಥಾನ

ಭಕ್ತಿ ಭಾವ

ಪಿಯೂಷ್ ಗೋಯಲ್

vveditoped@gmail.com

75 ವರ್ಷಗಳ ಹಿಂದೆ ಭವ್ಯವಾದ ಸೋಮನಾಥ ದೇವಾಲಯದ ಪುನರ್ನಿರ್ಮಾಣ ಮತ್ತು ಪ್ರತಿಷ್ಠಾಪನೆಯು ಭಾರತದ ನಾಗರಿಕತೆಯ ವೈಭವದ ಮರುಕಳಿಕೆಯಲ್ಲಿ ಒಂದು ನಿರ್ಣಾಯಕ ಕ್ಷಣವಾಗಿತ್ತು. ಇದು ಭಾರತದ ಚೇತರಿಸಿಕೊಳ್ಳುವ ಶಕ್ತಿ ಮತ್ತು ದೃಢಸಂಕಲ್ಪವನ್ನು ಪುನರುಚ್ಚರಿಸಿತು. ಇವೇ ಗುಣಗಳು ಇಂದು ಪ್ರಧಾನಮಂತ್ರಿ ನರೇಂದ್ರ ಮೋದಿಯವರ 'ವಿಕಸಿತ ಭಾರತ 2047' ಮಿಷನ್‌ನ ಕೇಂದ್ರಬಿಂದುವಾಗಿವೆ.

ಈ ಪವಿತ್ರ ಮೈಲಿಗಲ್ಲಿನ 75ನೇ ವಾರ್ಷಿಕೋತ್ಸವವು ರಾಷ್ಟ್ರಕ್ಕೆ ಒಂದು ಭವ್ಯವಾದ ಆತ್ಮವಿಶ್ವಾಸವನ್ನು ನೀಡುತ್ತದೆ. ಸಾವಿರ ವರ್ಷಗಳ ಕಾಲ ಮತಾಂಧರಿಂದ ಸರಣಿ ದಾಳಿಗಳಿಗೆ ಒಳಗಾದರೂ, ಅದನ್ನೆಲ್ಲ ಮೆಟ್ಟಿ ನಿಂತು ಮತ್ತಷ್ಟು ಬಲಿಷ್ಠವಾಗಿ ಹೊರಹೊಮ್ಮಿದ ಭಾರತೀಯ ನಾಗರಿಕತೆಯ ಅಡಿಪಾಯ ಮತ್ತು ಸಾಮರ್ಥ್ಯವನ್ನು ಇದು ಸಾಬೀತುಪಡಿಸುತ್ತದೆ.

ಗುಜರಾತ್‌ನ ಪ್ರಶಾಂತ ಸಮುದ್ರತೀರದಲ್ಲಿರುವ ಈ ದೇವಾಲಯವು ಪ್ರತಿ ದಾಳಿಯ ನಂತರವೂ ತನ್ನೆಲ್ಲಾ ವೈಭವದೊಂದಿಗೆ ಅವಶೇಷಗಳಿಂದ ಮತ್ತೆ ಪುಟಿದೆದ್ದಿದೆ. ಹಲವು ವಿಧಗಳಲ್ಲಿ, ಈ ದೇವಾಲಯದ ಇತಿಹಾಸವು ನಮ್ಮ ದೇಶದ ಭೂತಕಾಲವನ್ನೇ ಪ್ರತಿಬಿಂಬಿಸುತ್ತದೆ; ಅಂದರೆ, ಶಾಂತಿಪ್ರಿಯರಾದ ನಮ್ಮ ಜನರು ತಮ್ಮ ನಂಬಿಕೆ, ಸಂಸ್ಕೃತಿ ಮತ್ತು ಪರಂಪರೆಯ ಮೇಲಿನ ಕ್ರೂರ ದಾಳಿಗಳ ನಂತರವೂ ಹೇಗೆ ಮತ್ತೆ ಪುಟಿದೆದ್ದರು ಎಂಬುದಕ್ಕೆ ಇದು ಸಾಕ್ಷಿಯಾಗಿದೆ.

ಪ್ರಧಾನಿ ಮೋದಿ ಅವರು ಹೇಳಿದಂತೆ, ಸೋಮನಾಥ ದೇವಾಲಯವನ್ನು ಧ್ವಂಸಗೊಳಿಸಲು ಹೇಗೆ ಪದೇ ಪದೇ ಪ್ರಯತ್ನಗಳು ಮತ್ತು ಸಂಚುಗಳು ನಡೆದವೋ, ಹಾಗೆಯೇ ವಿದೇಶಿ ಆಕ್ರಮಣಕಾರರು ಶತಮಾನಗಳ ಕಾಲ ಭಾರತವನ್ನು ಸರ್ವನಾಶ ಮಾಡಲು ಪ್ರಯತ್ನಿಸಿದರು. ಆದರೂ, ಪೂಜ್ಯನೀಯವಾದ ಆ ಪುಣ್ಯಕ್ಷೇತ್ರವಾಗಲಿ ಅಥವಾ ಈ ದೇಶವಾಗಲಿ ನಾಶವಾಗಲಿಲ್ಲ.

ಸೋಮನಾಥ ದೇವಾಲಯದ ಮೇಲಿನ ದಾಳಿಗಳ ಉದ್ದೇಶವು ಕೇವಲ ಲೂಟಿ ಮಾಡುವುದಕ್ಕಿಂತಲೂ ಹೆಚ್ಚು ಭೀಕರವಾಗಿತ್ತು ಎಂಬುದನ್ನು ಪ್ರಧಾನಿ ಸ್ಪಷ್ಟಪಡಿಸಿದರು. ದಾಳಿಗಳು ಕೇವಲ ಲೂಟಿಗಾಗಿ ಮಾತ್ರ ಆಗಿದ್ದರೆ, ಸಾವಿರ ವರ್ಷಗಳ ಹಿಂದಿನ ಮೊದಲ ದೊಡ್ಡ ಲೂಟಿಯ ನಂತರವೇ ಅವು ನಿಂತುಹೋಗಬೇಕಿತ್ತು. ಆದರೆ ಹಾಗಿರಲಿಲ್ಲ. ಸೋಮನಾಥನ ಪವಿತ್ರ ಮೂರ್ತಿಯನ್ನು ಅಪವಿತ್ರಗೊಳಿಸಲಾಯಿತು, ದೇವಾಲಯದ ಸ್ವರೂಪವನ್ನು ಪದೇ ಪದೇ ಬದಲಾಯಿಸಲಾಯಿತು. ಆದರೆ ನಮಗೆ ಮಾತ್ರ 'ಸೋಮನಾಥ ದೇವಾಲಯವನ್ನು ಕೇವಲ ಲೂಟಿಗಾಗಿ ಧ್ವಂಸಗೊಳಿಸಲಾಯಿತು' ಎಂದು ಕಲಿಸಲಾಯಿತು. ದ್ವೇಷ, ದಮನ ಮತ್ತು ಭಯೋತ್ಪಾದನೆಯ ಆ ಕ್ರೂರ ಇತಿಹಾಸವನ್ನು ನಮ್ಮಿಂದ ಮರೆಮಾಚಲಾಗಿತ್ತು ಎಂದು ಅವರು ಹೇಳಿದರು.

ನೆಹರೂ ಅವರ ವಿರೋಧ

ಸ್ವಾತಂತ್ರ್ಯದ ನಂತರ, ಸರ್ದಾರ್ ಪಟೇಲರು ಸೋಮನಾಥ ದೇವಾಲಯದ ಪುನರ್ನಿರ್ಮಾಣದ ಕಾರ್ಯದ ನೇತೃತ್ವ ವಹಿಸಿದರು. ಇದು ಹೊಸದಾಗಿ ಸ್ವತಂತ್ರಗೊಂಡ ಭಾರತದ ರಾಷ್ಟ್ರೀಯ ಆತ್ಮವಿಶ್ವಾಸದ ಆರಂಭಿಕ ಅಭಿವ್ಯಕ್ತಿಗಳಲ್ಲಿ ಒಂದಾಗಿತ್ತು. ಆದರೆ ಈ ಕಾರ್ಯವೂ ಅಡೆತಡೆಗಳನ್ನು ಎದುರಿಸಿತು. ಅಂದಿನ ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದ್ ಅವರು ಈ ಐತಿಹಾಸಿಕ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸುವ ನಿರ್ಧಾರವನ್ನು ಭಾರತದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರು ಅಧಿಕೃತವಾಗಿ ವಿರೋಧಿಸಿದ್ದರು. ಆದಾಗ್ಯೂ, ರಾಷ್ಟ್ರಪತಿಯವರು ಮೇ 11,

1951 ರಂದು ದೇವಾಲಯವನ್ನು ಉದ್ಘಾಟಿಸಿದರು.

ಶತಮಾನಗಳ ಕ್ರೂರ ದಮನದ ನಂತರ, ಈ ಪುನರ್ನಿರ್ಮಾಣವು ಭಾರತದ ಸಾಂಸ್ಕೃತಿಕ ಪುನರುಜ್ಜೀವನ ಮತ್ತು ನಾಗರಿಕತೆಯ ಬಗ್ಗೆ ಹೆಮ್ಮೆಯ ಬೀಜಗಳನ್ನು ಬಿತ್ತಿತು. ಕಾಶಿ ವಿಶ್ವನಾಥ ಮತ್ತು ಉಜ್ಜಯಿನಿಯ ಮಹಾಕಾಳೇಶ್ವರ ದೇವಾಲಯಗಳ ಕಾಯಕಲ್ಪದಿಂದ ಹಿಡಿದು ಅಯೋಧ್ಯೆಯ ಭವ್ಯ ರಾಮಮಂದಿರದವರೆಗೆ; ಕೇದಾರನಾಥದ ಪುನರುತ್ಥಾನದಿಂದ ಹಿಡಿದು ಅಸಂಖ್ಯಾತ ಪರಂಪರೆಯ ತಾಣಗಳ ಸಂರಕ್ಷಣೆಯವರೆಗೆ, ಭಾರತವು ಇಂದು ತನ್ನ ನಾಗರಿಕತೆಯ ಇತಿಹಾಸವನ್ನು ಘನತೆ ಮತ್ತು ಸ್ಪಷ್ಟ ಉದ್ದೇಶದೊಂದಿಗೆ ಮರಳಿ ಪಡೆಯುತ್ತಿದೆ. ಈ ಪ್ರಯತ್ನಗಳು ಪ್ರವಾಸಿಗರ ಸಂಖ್ಯೆಯನ್ನು ಹೆಚ್ಚಿಸುತ್ತಿವೆ ಮತ್ತು ಸ್ಥಳೀಯ ಜನರಿಗೆ ಹಲವಾರು ಉದ್ಯೋಗ ಹಾಗೂ ವ್ಯಾಪಾರ ಅವಕಾಶಗಳನ್ನು ಸೃಷ್ಟಿಸುತ್ತಿವೆ.

ಜಾಗತಿಕ ಹೆಜ್ಜೆಗುರುತು

ಸೋಮನಾಥ ದೇವಾಲಯದಂತೆಯೇ ಭಾರತವೂ ಇಂದು ಮತ್ತಷ್ಟು ಬಲಿಷ್ಠವಾಗಿ ಹೊರಹೊಮ್ಮಿದೆ. ವಿಶ್ವದ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಾಗಿ ಮತ್ತು ಆಧುನಿಕತೆಯ ಜೊತೆಗೆ ತನ್ನ ಶ್ರೀಮಂತ ಪರಂಪರೆಯನ್ನು ವಿಶಿಷ್ಟವಾಗಿ ಸಮ್ಮಿಳಿತಗೊಳಿಸಿರುವ ದೇಶವಾಗಿ ಭಾರತವು ಜಾಗತಿಕ ಮಟ್ಟದಲ್ಲಿ ಅಲೆಗಳನ್ನು ಸೃಷ್ಟಿಸುತ್ತಿದೆ. 2014 ರಲ್ಲಿ ದೇಶವು ಮೋದಿ ಸರ್ಕಾರಕ್ಕೆ ಅಭೂತಪೂರ್ವ ಬಹುಮತ ನೀಡಿ ಅಧಿಕಾರಕ್ಕೆ ತಂದ ನಂತರ, ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ದಾಖಲೆ ಮಟ್ಟದ 175 ದೇಶಗಳ ಬೆಂಬಲದೊಂದಿಗೆ 'ಅಂತರರಾಷ್ಟ್ರೀಯ ಯೋಗ ದಿನ'ವನ್ನು ಆಚರಿಸುವ ನಿರ್ಣಯವನ್ನು ಅಂಗೀಕರಿಸಿತು. ಯೋಗವು ಇಂದು ಜಾಗತಿಕ ಮಟ್ಟದ ಆರೋಗ್ಯ ಚಳುವಳಿಯಾಗಿ ಬೆಳೆದಿದ್ದು, ಪ್ರಪಂಚದಾದ್ಯಂತದ ಎಲ್ಲಾ ಸಂಸ್ಕೃತಿಗಳ ಜನರಿಗೆ ಪ್ರಯೋಜನವನ್ನು ನೀಡುತ್ತಿದೆ.

ಒಂದು ದಶಕದ ನಂತರ, ಅರಬ್ ಸಂಯುಕ್ತ ಸಂಸ್ಥಾನ ಸರ್ಕಾರವು ಉಡುಗೊರೆಯಾಗಿ ನೀಡಿದ ಭೂಮಿಯಲ್ಲಿ ಪ್ರಧಾನಿ ಮೋದಿಯವರು ಮಧ್ಯಪ್ರಾಚ್ಯದ ಭವ್ಯ ದೇವಾಲಯವನ್ನು ಉದ್ಘಾಟಿಸಿದರು. ಇದಕ್ಕೂ ಮೊದಲು, ಪ್ರಧಾನಿಯವರು ಬಹ್ರೇನ್‌ನಲ್ಲಿ 200 ವರ್ಷ ಹಳೆಯದಾದ ದೇವಾಲಯದ ನವೀಕರಣ ಕಾರ್ಯಕ್ಕೆ ಚಾಲನೆ ನೀಡಿದ್ದರು. ಅವರು ನಿಯಮಿತವಾಗಿ ಅನಿವಾಸಿ ಭಾರತೀಯರೊಂದಿಗೆ ಸಂವಾದ ನಡೆಸುತ್ತಿದ್ದು, ಅವರನ್ನು ಭಾರತೀಯ ಸಾಂಸ್ಕೃತಿಕ ಪರಂಪರೆಯ ಹೆಮ್ಮೆಯ ರಾಯಭಾರಿಗಳನ್ನಾಗಿ ಮಾಡುತ್ತಿದ್ದಾರೆ.

ಆಯುಷ್ ಮತ್ತು ಯೋಗದ ಜಾಗತೀಕರಣ

ಭಾರತದ ಸಾಂಸ್ಕೃತಿಕ ಪರಂಪರೆಯನ್ನು ಉತ್ತೇಜಿಸುವುದು ಮತ್ತು ನಮ್ಮ ಸಾಂಪ್ರದಾಯಿಕ ಜ್ಞಾನ ವ್ಯವಸ್ಥೆಯ ವೃತ್ತಿಪರರಿಗೆ ಜಾಗತಿಕ ಅವಕಾಶಗಳನ್ನು ಸೃಷ್ಟಿಸುವುದು ಇತ್ತೀಚಿನ ವರ್ಷಗಳಲ್ಲಿ ಭಾರತವು ಅಭಿವೃದ್ಧಿ ಹೊಂದಿದ ದೇಶಗಳೊಂದಿಗೆ ಸಹಿ ಮಾಡಿರುವ ಮುಕ್ತ ವ್ಯಾಪಾರ ಒಪ್ಪಂದಗಳ ಪ್ರಮುಖ ಅಂಶವಾಗಿದೆ. ನಮ್ಮ ಕುಶಲಕರ್ಮಿಗಳು, ಕಾರ್ಮಿಕರು, ರೈತರು, ಮೀನುಗಾರರು, ಸಣ್ಣ ಉದ್ಯಮಗಳು ಮತ್ತು ನವೋದ್ಯಮಗಳಿಗೆ ಲಾಭದಾಯಕ ಜಾಗತಿಕ ಅವಕಾಶಗಳನ್ನು ಸೃಷ್ಟಿಸುವುದರ ಜೊತೆಗೆ, ಈ ವ್ಯಾಪಾರ ಒಪ್ಪಂದಗಳು ಪ್ರಧಾನಮಂತ್ರಿಯವರ ವಿಕಾಸ್ ಭಿ, ವಿರಾಸತ್ ಭಿ (ಅಭಿವೃದ್ಧಿಯೂ ಬೇಕು, ಪರಂಪರೆಯೂ ಬೇಕು) ಎಂಬ ದೃಷ್ಟಿಕೋನವನ್ನು ಮುಂದುವರಿಸುತ್ತಿವೆ.

ಇತ್ತೀಚೆಗೆ ನ್ಯೂಜಿಲೆಂಡ್ ಜೊತೆಗೆ ಮುಕ್ತಾಯಗೊಂಡ ವ್ಯಾಪಾರ ಒಪ್ಪಂದವು ಸಾಂಪ್ರದಾಯಿಕ ಔಷಧ ಮತ್ತು ಸಮಗ್ರ ಆರೋಗ್ಯ ರಕ್ಷಣೆಯಲ್ಲಿ ಭಾರತದ ಜಾಗತಿಕ ತಲುಪುವಿಕೆಯಲ್ಲಿ ಒಂದು ಪ್ರಮುಖ ಮೈಲಿಗಲ್ಲಾಗಿದೆ. ಇದು ಆಯುಷ್ ವೈದ್ಯರು ಮತ್ತು ಯೋಗ ತರಬೇತುದಾರರು ಹಾಗೂ ಇತರ ಭಾರತೀಯ ಸಾಂಸ್ಕೃತಿಕ ಮತ್ತು ಜ್ಞಾನ ವೃತ್ತಿಪರರಿಗೆ ನ್ಯೂಜಿಲೆಂಡ್‌ನಲ್ಲಿ ಕೆಲಸ ಮಾಡಲು ವೀಸಾ ಕೋಟಾಗಳನ್ನು ಒದಗಿಸುತ್ತದೆ.

ಈ ಒಪ್ಪಂದವು ಆಯುರ್ವೇದ, ಯೋಗ ಮತ್ತು ಇತರ ಸಾಂಪ್ರದಾಯಿಕ ವೈದ್ಯಕೀಯ ಸೇವೆಗಳ ವ್ಯಾಪಾರಕ್ಕೆ ಪೂರಕ ವಾತಾವರಣವನ್ನು ನಿರ್ಮಿಸುತ್ತದೆ ಮತ್ತು ಆಯುಷ್ ಅನ್ನು ಆಧುನಿಕ, ಜಾಗತಿಕವಾಗಿ ಪ್ರಸ್ತುತವಾಗಿರುವ ಆರೋಗ್ಯ ಪರಿಹಾರವಾಗಿ ಗುರುತಿಸುತ್ತದೆ. ಬ್ರಿಟನ್, ಐರೋಪ್ಯ ಒಕ್ಕೂಟ ಮತ್ತು ಆಸ್ಟ್ರೇಲಿಯಾದೊಂದಿಗಿನ ವ್ಯಾಪಾರ ಒಪ್ಪಂದಗಳೂ ಇಂತಹದೇ ನಿಬಂಧನೆಗಳನ್ನು ಹೊಂದಿವೆ. ಐರೋಪ್ಯ ಒಕ್ಕೂಟದೊಂದಿಗಿನ ಒಪ್ಪಂದವು ಆಯುಷ್ ವೈದ್ಯರು ಭಾರತದಲ್ಲಿ ಪಡೆದ ವೃತ್ತಿಪರ ಅರ್ಹತೆಗಳನ್ನು ಬಳಸಿಕೊಂಡು ಅಲ್ಲಿ ಸೇವೆಗಳನ್ನು ಒದಗಿಸಲು ಅನುವು ಮಾಡಿಕೊಡುತ್ತದೆ. ಇದು ಯುರೋಪಿನ ಸದಸ್ಯ ರಾಷ್ಟ್ರಗಳಲ್ಲಿ ಆಯುಷ್ ಸ್ವಾಸ್ಥ್ಯ ಕೇಂದ್ರಗಳು ಮತ್ತು ಚಿಕಿತ್ಸಾಲಯಗಳ ಸ್ಥಾಪನೆಗೆ ಸಹಕಾರಿಯಾಗಿದೆ.

ಹೊಸ ಬೆದರಿಕೆಗಳ ನಿರ್ಮೂಲನೆ ಭಾರತದ ಸಾಂಸ್ಕೃತಿಕ ಪರಂಪರೆಯು ಜಾಗತಿಕ ಗಮನ ಸೆಳೆಯುತ್ತಿರುವ ಈ ಹೊತ್ತಿನಲ್ಲೇ, ದೇಶವು ಈಗಲೂ ಕೆಲವು ಮತಾಂಧರ ಗುರಿಯಾಗಿದೆ. ಇವರು ಭಾರತದ ಸೌಹಾರ್ದಯುತ ಪರಂಪರೆಯನ್ನು ಕೆಡಿಸಲು ಭಯೋತ್ಪಾದನೆ ಮತ್ತು ನುಸುಳುವಿಕೆಯನ್ನು ಬಳಸಿಕೊಳ್ಳುತ್ತಿದ್ದಾರೆ.

ಪ್ರಧಾನಿ ಮೋದಿಯವರ ನೇತೃತ್ವದ ಈ 'ನವ ಭಾರತ' ಇಂತಹ ಬೆದರಿಕೆಗಳಿಗೆ ಪ್ರಬಲವಾಗಿಯೇ ಪ್ರತಿಕ್ರಿಯಿಸುತ್ತದೆ. 'ಆಪರೇಷನ್ ಸಿಂದೂರ್' ಮೂಲಕ ಭಾರತವು ಭಯೋತ್ಪಾದಕರಿಗೆ ಮತ್ತು ಗಡಿಯಾಚೆಗಿನ ಅವರ ಪೋಷಕರಿಗೆ ತಕ್ಕ ಪಾಠ ಕಲಿಸಿದೆ. ಇತ್ತೀಚಿನ ವಿಧಾನಸಭಾ ಚುನಾವಣೆಗಳಲ್ಲಿ, ಪಶ್ಚಿಮ ಬಂಗಾಳದ ಮತದಾರರು ನುಸುಳುವಿಕೆಯನ್ನು ಬೆಂಬಲಿಸುವ, ಮತಬ್ಯಾಂಕ್ ರಾಜಕಾರಣ ಮಾಡುವ ಮತ್ತು ಭಾರತದ ಸಾಂಸ್ಕೃತಿಕ ಪರಂಪರೆಯನ್ನು ಕುಗ್ಗಿಸುವ ಪಕ್ಷಗಳನ್ನು ತಿರಸ್ಕರಿಸಿದ್ದಾರೆ. ಗಮನಾರ್ಹವೆಂದರೆ, ಆಪರೇಷನ್ ಸಿಂದೂರ್‌ನ ವಾರ್ಷಿಕೋತ್ಸವ ಮತ್ತು ಸೋಮನಾಥ ದೇವಾಲಯದ ಪುನರ್ನಿರ್ಮಾಣದ ವಾರ್ಷಿಕೋತ್ಸವಗಳು ಕೇವಲ ಕೆಲವೇ ದಿನಗಳ ಅಂತರದಲ್ಲಿ ಬರುತ್ತವೆ. ಈ ಎರಡೂ ಘಟನೆಗಳು ಭಾರತದ ಚೇತರಿಸಿಕೊಳ್ಳುವ ಶಕ್ತಿ ಮತ್ತು ಸಾಮರ್ಥ್ಯವನ್ನು ಎತ್ತಿ ತೋರಿಸುತ್ತವೆ.

ಸೋಮನಾಥದ ಕಥೆ ರಾಜಕೀಯವನ್ನು ಮೀರಿದಂತದ್ದು. ಇದು ಶರಣಾಗಲು ಒಪ್ಪದ ಒಂದು ನಾಗರಿಕತೆಯ ಕಥೆ. ಪುನರ್ನಿ ರ್ಮಾಣಗೊಂಡು ಎಪ್ಪತ್ತೈದು ವರ್ಷಗಳ ನಂತರ, ಸೋಮನಾಥವು ಇಂದು ಕೇವಲ ಒಂದು ದೇವಾಲಯವಾಗಿ ಮಾತ್ರವಲ್ಲದೆ, ಭಾರತದ ಸ್ಥಿತಿಸ್ಥಾಪಕತ್ವ, ನಿರಂತರತೆ ಮತ್ತು ರಾಷ್ಟ್ರೀಯ ಆತ್ಮವಿಶ್ವಾಸದ ಶಾಶ್ವತ ಸಂಕೇತವಾಗಿ ಅಚಲವಾಗಿ ನಿಂತಿದೆ.

(ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವರು)

ಭಟ್ಟರ್ ಸ್ಕಾಚ್

- **ಹರೀಶ ಹಂಗಳ, ಮೈಸೂರು**
ಭಟ್ರೇ, ಸಂಸಾರ ಎಂಬ ನೌಕೆಯಲ್ಲಿ ಗಂಡನ ಪಾತ್ರವೇನು?
- **ಹೆಂಡತಿ ಹೇಳಿದ ಕಡೆಗೆ ಹುಟ್ಟು ಹಾಕುವ ವಿಧೇಯ ಅಂಬಿಗ!**

- **ಪೂಜಾ ಶಾಸ್ತ್ರಿ, ಸುರತ್ಕಲ್**
ಭಟ್ರೇ, ಕನ್ನಡಿಯ ಮುಂದೆ ನಿಂತಾಗ ನಮಗೆ ಏನು ಕಾಣಿಸುತ್ತದೆ?
- **ಜಗತ್ತಿನ ಅತ್ಯಂತ ಪ್ರಾಮಾಣಿಕ ವ್ಯಕ್ತಿ !**

- **ಗಣೇಶ ಭಗವಾನ, ರಾಯಚೂರು**
ಭಟ್ರೇ, ಸಾಲ ಕೊಟ್ಟವನು ಮತ್ತು ಸಾಲ ಪಡೆದವನ ನಡುವಿನ ವ್ಯತ್ಯಾಸವೇನು?
- **ಕೊಟ್ಟವನಿಗೆ ರಾತ್ರಿ ನಿದ್ದೆ ಬರಲ್ಲ, ಪಡೆದವನಿಗೆ ಬೆಳಿಗ್ಗೆ ಫೋನ್ ಎತ್ತಲು ಪುರುಸೊತ್ತಿರಲ್ಲ!**

- **ಬಸವಪ್ರಭು, ಗದಗ**
ಭಟ್ರೇ, ಇಂದಿನ ಕಾಲದಲ್ಲಿ ಸತ್ಯ ಹೇಳುವವನಿಗಿಂತ, ಸುಳ್ಳನ್ನು ಸತ್ಯದಂತೆ ನಟಿಸುವವನಿಗೇ ಬೆಲೆ ಹೆಚ್ಚು ಯಾಕೆ?
- **ಯಾಕಂದ್ರೆ ಸತ್ಯಕ್ಕೆ ಮೇಕಪ್ ಇಲ್ಲ, ಸುಳ್ಳಿಗೆ ಪಾರ್ಲರ್ ಖಾಲಿ ಇಲ್ಲ!**

- **ಘಂಟಿ ವರದಾಚಾರ್ಯ, ಮೈಸೂರು**
ಭಟ್ರೇ, ಚುನಾವಣೆ ಫಲಶ್ರುತಿಯನ್ನು ಒಂದೇ ಮಾತಲ್ಲಿ ಹೇಳುವಿರಾ?
- **ಕೊಂಗರ ನಾಡಲ್ಲಿ 'ವಿಜಯ'ಧ್ವಜ, ಪುದುಚೇರಿಯಲ್ಲಿ 'ರಂಗ'ಪ್ರವೇಶ, ಕೇರಳದಲ್ಲಿ 'ವೇಣು'ಗಾನ, ಅಸ್ಸಾಂನಲ್ಲಿ 'ಹಿಮ'ವೈಭವ, ವಂಗ ನಾಡಲ್ಲಿ 'ಮಮತಾ' ನಿಷ್ಕಾಸನ !**

- **ಚಂದ್ರು ಮನಸೂಳಿ, ಖಾನಾಪುರ**
ಭಟ್ರೇ, ಕೊಂಡ ಒಳಚಡ್ಡಿ ಅಳತೆ ಸಂಬಂಧಿಸಿದಂತೆ ವ್ಯಾಪಾರಿ ಬಳಿ ತಗಾದೆ ತೆಗೆದರೆ ಅವನು ಸುಮ್ಮನಾದನಲ್ಲ?
- **ಅದು ಎಷ್ಟೆಂದರೂ ಒಳ ಮಾತು, ಬಿಡು !**

- **ಶೀಲಾ ಒಂಟಿಕೊಪ್ಪಲು, ಮೈಸೂರು**
ಭಟ್ರೇ, ಹಾಲಿನಂತೆ ಮೈಬಣ್ಣ, ಮೊಸರಿನಂತೆ ಸಿಹಿ, ತುಪ್ಪದಂತೆ ಮನಸು ಕರಗುವ ಗುಣ ಇದ್ದವರಿಗೆ ಏನು ಭವಿಷ್ಯವಿದೆಯಾ?
- **ಖಂಡಿತ ಇದೆ...ಕೆಎಂಎಫ್ ರೂಪದರ್ಶಿ ಆಗಬಹುದು!**

- **ಅಮಾಸೆ ಸುಬ್ಬು, ಮೈಸೂರು**
ಭಟ್ರೇ, ಪ್ರಿವೆಡ್ಡಿಂಗ್ ಅವಧಿಯಲ್ಲಿ ಮಾವಂದಿರು ಭಾವಿ ಅಳಿಯಂದರಿಗೆ ಟೂ ವೀಲರ್ ಗಳನ್ನ ಗಿಫ್ಟ್ ಕೊಡುವ ಸಂಪ್ರದಾಯ ಬಂದಿಲ್ಲ ಯಾಕೆ?
- **ಹೆಣ್ಣುಮಕ್ಕಳು ಮದುವೆ ಮುಂಚೆಯೇ ನಜ್ಜು ಗುಜ್ಜಾಗಬಾರದಲ್ಲ ?!**

- **ಮಹೇಶ ಜೀರಿಗೆ, ಬೆಳಗಾವಿ**
ಭಟ್ರೇ ನೀವು ಮೊದಲ ಬಾರಿ 'ಎಡಕಲ್ಲು ಗುಡ್ಡದ ಮೇಲೆ' ಚಿತ್ರ ನೋಡುವ ಮುನ್ನ ಚಿತ್ರಶೀರ್ಷಿಕೆ ನೋಡಿ ಏನನ್ನು ಊಹಿಸಿದಿರಿ ?
- **ನಾಯಕಿ ಮೊದಲೇ ಕಲ್ಲು ತಾಕಿ ಎಡವಿ ಬೀಳಬಹುದಾ ಅಂತ!**

ತಮಿಳುನಾಡಿನಲ್ಲಿ ನಟರು ಸಿಎಂ ಆಗುವುದು ಏಕೆ?

ರಾಜಕೀಯದ ವಿಷಯ ಬಂದಾಗ, ಭಾರತದಲ್ಲಿ ಬೇರೆ ಯಾವ ರಾಜ್ಯವೂ ತಮಿಳುನಾಡಿನಂತೆ ಅಲ್ಲ. ತಮಿಳುನಾಡಿನಲ್ಲಿ ರಾಜಕೀಯ ಧುರೀಣರಿಗಿಂತಲೂ ಸಿನಿಮಾದ ನಾಯಕರೇ ರಾಜ್ಯವಾಳಿದ್ದು ಹೆಚ್ಚು. ಇದು ನಿನ್ನೆಮೊನ್ನೆಯ ಕಥೆಯಲ್ಲ. 60ರ ದಶಕದ ಕೊನೆಯ ಹಂತದಿಂದಲೇ ಇದು ಆರಂಭವಾಯಿತು. ಅಂದರೆ ಸುಮಾರು ಎಂಟು ದಶಕಗಳ ಕಾಲ ತಮಿಳುನಾಡಿನ ರಾಜಕೀಯ ಚಿತ್ರಣದಲ್ಲಿ ಚಲನಚಿತ್ರ ಪ್ರಮುಖ ಪಾತ್ರವನ್ನೇ ವಹಿಸಿದೆ.

ವಿದೇಶವಾಸಿ

ಕಿರಣ್ ಉಪಾಧ್ಯಾಯ ಬಹ್ರೈನ್
vveditoped@gmail.com

ತಮಿಳುನಾಡಿನಲ್ಲಿ 1967ರಿಂದ 2016ರ ವರೆಗೆ ಆದ ಎಲ್ಲ ಮುಖ್ಯಮಂತ್ರಿಗಳೂ ಚಲನಚಿತ್ರ ರಂಗದೊಂದಿಗೆ ನಂಟು ಇಟ್ಟುಕೊಂಡವರೇ ಆಗಿದ್ದಾರೆ. ಸಿ. ಎನ್. ಅಣ್ಣಾದೊರೈ, ಎಂ. ಕರುಣಾನಿಧಿ, ಎಂ. ಜಿ. ರಾಮಚಂದ್ರನ್, ಜೆ. ಜಯಲಲಿತಾ (ಈಗ ಜೋಸೆಫ್ ವಿಜಯ್ ಹೆಸರನ್ನೂ ಈ ಪಟ್ಟಿಗೆ ಸೇರಿಸಿಕೊಳ್ಳಬಹುದು) ಇವರೆಲ್ಲ ಬೆಳ್ಳಿ ತೆರೆಯಿಂದ ಬಂದು ತಮಿಳು ಭೂಮಿ ಆಳಿದವರು. ಇದರ ಹೊರತಾಗಿ ವಿಜಯಕಾಂತ್, ಕಮಲ್ ಹಾಸನ್ ತಮಿಳುನಾಡಿನ ಚುನಾವಣೆಯ ಪರೀಕ್ಷೆ ಬರೆದಿದ್ದಾರೆ. ಆದರೆ ನಿರೀಕ್ಷಿಸಿದ ಅಂಕ ಸಿಗದ ಕಾರಣ ಫೇಲ್ ಆಗಿ ಹಿಂತಿರುಗಿದ್ದಾರೆ. ತಮಿಳಿನ ಸೂಪರ್ ಸ್ಟಾರ್ ಎಂದು ಕರೆಸಿಕೊಂಡಿರುವ ರಜನಿಕಾಂತ್ ಪರೀಕ್ಷೆ ಬರೆಯುವುದಕ್ಕೆ ಮೊದಲೇ ಪರೀಕ್ಷಾ ಕೊಠಡಿಯಿಂದ ಹಿಂತಿರುಗಿದ್ದಾರೆ. ಬಹುಶಃ ಇಂದಿನ ರಾಜಕೀಯ ಪರಿಸ್ಥಿತಿ ಮತ್ತು ಅವರಿಗೆ ಆದ ವಯಸ್ಸು ಇದಕ್ಕೆ ಕಾರಣವಿದ್ದಿರಬಹುದು. ಅವರೇನಾದರೂ ಇಪ್ಪತ್ತು ಇಪ್ಪತ್ತೈದು ವರ್ಷ ಮೊದಲೇ ರಾಜಕೀಯ ಪ್ರವೇಶ ಮಾಡಿದ್ದಿದ್ದರೆ, ಅವರ ಹೆಸರು ಕೂಡ ತಮಿಳುನಾಡಿನ ಮುಖ್ಯಮಂತ್ರಿಗಳ ಪಟ್ಟಿಯಲ್ಲಿ ಸೇರುತ್ತಿತ್ತೋ ಏನೋ.

2016ರಲ್ಲಿ ಓ. ಪನ್ನೀರಸೆಲ್ವಂ, ನಂತರ ಇ. ಪಳನಿಸ್ವಾಮಿ ಈ ದಾಖಲೆ ಮುರಿದು ಇದಕ್ಕೆ ಹೊರತಾದರು. ಕರುಣಾನಿಧಿಯವರ ಮಗ, ಎರಡು ಸಿನಿಮಾ, ಒಂದು ಧಾರಾವಾಹಿಯಲ್ಲಿ ಅಭಿನಯಿಸಿದ, ಮಾಜಿ ಮುಖ್ಯಮಂತ್ರಿ ಎಂ. ಕೆ. ಸ್ಟಾಲಿನ್ ಅವರನ್ನು ಈ ಪಟ್ಟಿಗೆ ಸೇರಿಸಬೇಕೋ ಬೇಡವೋ ನೀವೇ ಯೋಚಿಸಿ ಹೇಳಿ.

ಹಾಗಂತ ಈ ಸ್ಥಿತಿ ಪಕ್ಕದ ಯಾವುದೇ ರಾಜ್ಯಗಳಲ್ಲಿಲ್ಲ. ಅಷ್ಟೇ ಏಕೆ, ಭಾರತದ ಯಾವ ರಾಜ್ಯದಲ್ಲಿಯೂ ಇಲ್ಲ. ಆಂಧ್ರಪ್ರದೇಶದಲ್ಲಿ ಎನ್. ಟಿ. ರಾಮರಾವ್ ಒಬ್ಬರೇ ಇದಕ್ಕೆ ಅಪವಾದ ಎನ್ನಬಹುದು. ಅವರೂ ಚಲನಚಿತ್ರದ ನಾಯಕರಾಗಿದ್ದುಕೊಂಡು ನಂತರ ತಮ್ಮದೇ ಪಕ್ಷ ಕಟ್ಟಿ ಮುಖ್ಯಮಂತ್ರಿಯಾದವರು. ಅವರಿಗೆ ಸಿಕ್ಕ ಪ್ರತಿಕ್ರಿಯೆ ತೆಲುಗಿನ ಸೂಪರ್ ಸ್ಟಾರ್ ಚಿರಂಜೀವಿಗೆ ಸಿಗಲಿಲ್ಲ. ಅವರಿಗೆ ಹೋಲಿಸಿದರೆ ಸಹೋದರ ಪವನ್ ಕಲ್ಯಾಣ್ ಆದೀತು. ಸದ್ಯ ಆಂಧ್ರ ಪ್ರದೇಶದ ಉಪಮುಖ್ಯಮಂತ್ರಿಯಾಗಿದ್ದಾರೆ. ಬಿಟ್ಟರೆ ಮತ್ಯಾರೂ ಕಣ್ಣಿಗೆ ಕಾಣುವುದಿಲ್ಲ. ಕರ್ನಾಟಕದಾದಿಯಾಗಿ ಹೆಚ್ಚು ಕಮ್ಮಿ ಪ್ರತಿ ರಾಜ್ಯದಲ್ಲೂ ಸಿನಿಮಾದಿಂದ ರಾಜಕೀಯಕ್ಕೆ ಬಂದು, ಜನಪ್ರತಿನಿಧಿಗಳಾಗಿ, ಮಂತ್ರಿಗಳಾದವರಿದ್ದಾರೆ. ಆದರೆ ಈ ರಾಜ್ಯಗಳಲ್ಲಿ ಆರಾಧ್ಯರಾಗಿ, ಮುಖ್ಯಮಂತ್ರಿಗಳಾದವರು ಇಲ್ಲ ಎಂದೇ ಹೇಳಬಹುದು. ವಿಚಿತ್ರ ಎಂದರೆ, ದೇಶದಾದ್ಯಂತ ಸೂಪರ್ ಸ್ಟಾರ್ ಎಂದೇ ಗುರುತಿಸಿಕೊಂಡಿದ್ದ ಅಮಿತಾಭ್ ಬಚ್ಚನ್, ರಾಜೇಶ್ ಖನ್ನಾ, ಧರ್ಮೇಂದ್ರಗೆ ಕೂಡ ಮಂತ್ರಿಯಾಗುವ ಅವಕಾಶ ದೊರಕಲಿಲ್ಲ. ಕರ್ನಾಟಕದಲ್ಲಿ ಅಂಬರೀಶ್, ಅನಂತ ನಾಗ್, ಉಮಾಶ್ರೀ, ಜಯಮಾಲಾರಂತವರು ಮಂತ್ರಿಗಳಾದರೂ, ಮುಖ್ಯಮಂತ್ರಿಗಳಾಗಲಿಲ್ಲ. ಜತೆಗೆ ಇವರೆಲ್ಲ ಆಗಲೇ ಇದ್ದ ಪಕ್ಷವನ್ನು ಸೇರಿಕೊಂಡು ಚುನಾವಣೆ ಗೆದ್ದವರೇ ಹೊರತು ಹೊಸ ಪಕ್ಷ ಕಟ್ಟುವ ಸಾಹಸಕ್ಕೆ ಹೋದವರಲ್ಲ. ಪಕ್ಷ ಕಟ್ಟಿದ ಉಪೇಂದ್ರ ಇದುವರೆಗೆ ಸ್ವತಃ ಚುನಾವಣೆಗೆ ನಿಲ್ಲಲಿಲ್ಲ. ಉಳಿದವರಿಗೆ ಹೊಸ ಪಕ್ಷ ಕಟ್ಟುವ ಚಿಂತನೆಯಾಗಲಿ, ಹುಮ್ಮಸ್ಸಾಗಲಿ ಇದ್ದಂತೆ ಕಾಣುತ್ತಿಲ್ಲ. ಡಾ. ರಾಜ್ ಕುಮಾರ್ ಮನಸ್ಸು ಮಾಡಿದ್ದರೆ ಕಥೆ ಬೇರೆ ಇರುತ್ತಿತ್ತೇನೋ!

ತಮಿಳುನಾಡಿನ ಚುನಾವಣೆ ಎಂದರೆ ಜನ ಮಾತಾಡಿಕೊಳ್ಳುವುದಿದೆ. 'ತಮಿಳರು ಯಾವತ್ತೂ ಚಲನಚಿತ್ರದ ಜನರಿಗೆ ಮತ ಹಾಕುವುದು', 'ತಮಿಳುನಾಡಿನಲ್ಲಿ ಚಿತ್ರರಂಗದವರೇ ರಾಜ್ಯಭಾರ ಮಾಡುವುದು', 'ತಮಿಳುನಾಡಿನ ಜನರಿಗೆ ಸಿನಿಮಾದವರ ಹೊರತಾಗಿ ಬೇರೆ ಯಾರೂ ಸಿಗುವುದಿಲ್ಲ', ಇತ್ಯಾದಿ, ಇತ್ಯಾದಿ. ಅದರಲ್ಲಿ ಕೆಲವರು ತಮಾಷೆಯ ದೃಷ್ಟಿಯಲ್ಲಿಯೂ, ಕೆಲವರು ಅದು ಆತಂಕಕಾರಿ ಎನ್ನುವ ಧಾಟಿಯಲ್ಲಿಯೂ ಮಾತನಾಡುತ್ತಾರೆ. ಹಾಗೆ ಆಡಿಕೊಳ್ಳುವವರಲ್ಲಿ ತಮಿಳುನಾಡಿನ ಜನರಿಗಿಂತ ಹೊರಗಿನವರೇ ಹೆಚ್ಚಾಗಿರುತ್ತಾರೆ. ಅಲ್ಲಿಯವರಿಗೆ ಯಾವ ತೊಂದರೆಯೂ ಇಲ್ಲ. ತಮಿಳುನಾಡಿನ ಜನರು ಪ್ರಜಾಪ್ರಭುತ್ವದ ನಿಯಮದಂತೆ ಮತ ಹಾಕಿ ಅವರನ್ನು ಆರಿಸಿರುತ್ತಾರೆ. ಅಷ್ಟಕ್ಕೂ ಸಿನಿಮಾದವರು ರಾಜಕೀಯಕ್ಕೆ ಬಂದು ಮುಖ್ಯಮಂತ್ರಿಗಳಾದರೆ ತಪ್ಪೇನು ಇಲ್ಲ ಎನ್ನುವುದನ್ನು ಅಲ್ಲಿಯ ಜನ ನಂಬಿದ್ದಾರೆ, ತೋರಿಸಿಕೊಟ್ಟಿದ್ದಾರೆ. ತಮಿಳುನಾಡು ಇಂದು ಭಾರತದ ಎರಡನೆಯ ಶ್ರೀಮಂತ ರಾಜ್ಯವಾಗಿರುವುದೇ ಇದಕ್ಕೆ ಸಾಕ್ಷಿ. ಹಾಗಾದರೆ ತಮಿಳುನಾಡಿನವರಿಗೆ ಸಿನಿಮಾದವರ ಮೇಲೆ ಇಷ್ಟು ಪ್ರೀತಿ ಯಾವ ಕಾರಣಕ್ಕೆ? ಎಲ್ಲಾ ರಾಜ್ಯದಲ್ಲೂ ಜನಪ್ರಿಯ ಸಿನಿಮಾ ನಟರಿದ್ದಾರೆ. ಆದರೆ ತಮಿಳುನಾಡು ಭಿನ್ನವಾಗಿರುವುದಕ್ಕೆ ಕಾರಣ ಹುಡುಕುತ್ತ ಹೊರಟರೆ ಒಂದೆರಡಲ್ಲ.

1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಾಗ, ತಮಿಳುನಾಡಿನಲ್ಲಿರುವ ಶೇಕಡ 85ರಷ್ಟು ಜನ ಅನಕ್ಷರಸ್ಥರಾಗಿದ್ದರು. ಆ ಕಾಲದಲ್ಲಿ ಸುದ್ದಿ ಪತ್ರಿಕೆಗಳು ಹಳ್ಳಿಗಳನ್ನು ತಲುಪುತ್ತಿರಲಿಲ್ಲ. ವಿದ್ಯುತ್ ತಲುಪದ ಹಳ್ಳಿಗಳಿಗೆ ರೇಡಿಯೋ ತಲುಪುವುದೂ ವಿರಳವಾಗಿತ್ತು. ಆದರೆ ಹಳ್ಳಿಗಳಿಗೆ ಹತ್ತಿರವಾಗಿರುವ ಪಟ್ಟಣ ಪ್ರದೇಶಗಳಲ್ಲಿ ನಾಟಕ ಮತ್ತು ಸಿನಿಮಾ ಥಿಯೇಟರ್ ಇದ್ದವು. ಆ ಕಾಲದಲ್ಲಿ ಪೆರಿಯರ್ ಇ. ವಿ. ರಾಮಸ್ವಾಮಿಯಂತವರು ದ್ರಾವಿಡ ಚಳುವಳಿ ಆರಂಭಿಸಿದ್ದರು. ಹಿಂದಿ ಭಾಷೆಯ ಹೇರಿಕೆ, ಜಾತಿ-ಧರ್ಮಗಳ ನಡುವೆ ಸಂಘರ್ಷದ ವಿರುದ್ಧ ಹೋರಾಟ ಆರಂಭಿಸಿದ್ದರು. ಅಣ್ಣಾದೊರೈ, ಕರುಣಾನಿಧಿ ಮತ್ತು ಎಂಜಿಆರ್ (ಎಮ್. ಜಿ. ರಾಮಚಂದ್ರನ್) ಎಲ್ಲರೂ ಚಿತ್ರಕಥೆ ಬರೆಯುತ್ತಿದ್ದರು, ಅಭಿನಯಿಸುತ್ತಿದ್ದರು. ಸಿನಿಮಾ ಮಾಧ್ಯಮ ಕೇವಲ ಜನರನ್ನು ರಂಜಿಸುವುದಕ್ಕೆ, ಪ್ರೇಮ ಕಥೆಗಳಿಗೆ ಸೀಮಿತವಲ್ಲ, ಬರೀ ಹಾಡು-ಕುಣಿತಗಳಿಗೆ ಇರುವಂತದ್ದಲ್ಲ ಎಂಬುದನ್ನು ಇವರು ಅರಿತಿದ್ದರು.

60ರ ದಶಕದಲ್ಲಿ ತೆರೆಕಂಡ 'ವೇಲೈಕರಿ', 'ಪರಾಶಕ್ತಿ', 'ಮನೋಹರ'ದಂತಹ ಚಲನಚಿತ್ರಗಳು ಕೇವಲ ಮನರಂಜನೆಗಾಗಿರದೆ, ರಾಜಕೀಯ ಪ್ರೇರಿತವಾಗಿದ್ದವು. ಚಿತ್ರಕಥೆ ಮತ್ತು ಹಾಡುಗಳು ರಾಜಕೀಯ ಪಕ್ಷದ ಚುನಾವಣಾ ಪ್ರಣಾಳಿಕೆಗಳಂತಿದ್ದವು. ಸಿನಿಮಾದಲ್ಲಿ ಬರುತ್ತಿದ್ದ ನ್ಯಾಯಾಲಯದ ಸನ್ನಿವೇಶಗಳನ್ನು ಜನ ನಿಜ ಎಂದು ನಂಬುತ್ತಿದ್ದರು. ಆ ಕಾಲದಲ್ಲಿಯೇ 'ಪರಾಶಕ್ತಿ' ಸಿನಿಮಾವನ್ನು ಎರಡು ಕೋಟಿ ಜನ ನೋಡಿದ್ದರಂತೆ. ಯಾವುದೇ ಚುನಾವಣಾ ಪ್ರಚಾರ ಸಭೆಗೆ ಈ ಪ್ರಮಾಣದ ಜನರನ್ನು ಸೇರಿಸುವ ಸಾಮರ್ಥ್ಯ ಆ ಕಾಲದಲ್ಲಿಯೂ ಇರಲಿಲ್ಲ, ಈಗಲೂ ಇಲ್ಲ. ಹಾಗಾಗಿ ಆ ತಲೆಮಾರಿನ ಜನರಿಗೆ ಚಿತ್ರಮಂದಿರಗಳು ಕೇವಲ ಮನರಂಜನೆಯ ತಾಣವಾಗಿರದೆ, ಶಿಕ್ಷಣ ನೀಡುವ ಕೇಂದ್ರಗಳಾದವು. ತೆರೆಯ ಮೇಲೆ, ಹಳ್ಳಿಯನ್ನು ಉಳಿಸುವ, ಜಮೀನ್ದಾರರ ವಿರುದ್ಧ ಹೋರಾಡುವ, ತಮಿಳು ಭಾಷೆ ಬಿಟ್ಟು ಬೇರೆ ಭಾಷೆ ಮಾತನಾಡದ, ಭರತನಾಟ್ಯ, ಜಲ್ಲಿಕಟ್ಟು ಮೊದಲಾದವುಗಳನ್ನು ವೈಭವೀಕರಿಸುವ, ದೇವಾಲಯದ ಉತ್ಸವಗಳಲ್ಲಿ ಪಾಲ್ಗೊಳ್ಳುವ, ಪ್ರಾಮಾಣಿಕ ವ್ಯಕ್ತಿ, ರೈತ, ರಿಕ್ಷಾ ಚಾಲಕ, ಮೀನು ಹಿಡಿಯುವ, ಮಹಿಳೆಯರನ್ನು ರಕ್ಷಿಸುವ, ಹಿರಿಯರನ್ನು ಗೌರವಿಸುವ, ಮಕ್ಕಳನ್ನು ಪ್ರೀತಿಸುವ, ಮದ್ಯಪಾನ-ಧೂಮಪಾನ ಮಾಡದವ, ಬಡವರಿಗೆ ದಾನ ಮಾಡುವವ, ಹೀಗೆ ಒಳ್ಳೆಯ ಪಾತ್ರಗಳನ್ನು ಮಾಡುತ್ತಿದ್ದ ನಾಯಕ ಜನರ ಮನಸ್ಸಿನಲ್ಲಿ ರಾಜಕಾರಣಿಗಳಿಗಿಂತ ಉನ್ನತ ಸ್ಥಾನದಲ್ಲಿ ಕುಳಿತುಕೊಳ್ಳಲು ಆರಂಭಿಸಿದ.

ಜನರಿಗೆ ರಾಜಕೀಯ ಮುಖಂಡರಿಗಿಂತ ಚಲನಚಿತ್ರದ ನಾಯಕರೇ ಹೆಚ್ಚು ಇಷ್ಟವಾಗಲು ಆರಂಭಿಸಿದ್ದರು. ನಾಯಕರ ಸಂಭಾಷಣೆಗಳನ್ನು ಅವರು ಕಂಠಪಾಠ ಮಾಡುತ್ತಿದ್ದರು. ದೇಶದಲ್ಲಿ ನಟರು ಸಿನಿಮಾದಿಂದ ರಾಜಕೀಯ ಪ್ರವೇಶ ಮಾಡಿದರೆ, ತಮಿಳುನಾಡಿನಲ್ಲಿ ರಾಜಕಾರಣಿಗಳಾಗಲು ಬಯಸುವವರು ಸಿನಿಮಾ ಪ್ರವೇಶ ಮಾಡಿದರು. ಅಣ್ಣಾದೊರೈ ತಮ್ಮ ಸಿನಿಮಾಗಳನ್ನು ರಾಜಕೀಯದ ಕರಪತ್ರದಂತೆ ಬಳಸಿಕೊಂಡರೆ, ಎಂಜಿಆರ್ ಆಡಳಿತವನ್ನು ಹೇಗೆ ನಡೆಸಬಹುದು ಎಂಬುದನ್ನು ತೋರಿಸಿಕೊಡಲು ಸಿನಿಮಾವನ್ನು ಬಳಸಿದರು. ಇಪ್ಪತ್ತೈದು ವರ್ಷದ ತಮ್ಮ ಚಲನಚಿತ್ರದ ಜೀವನದಲ್ಲಿ ಎಂಜಿಆರ್ ಸುಮಾರು 115 ಚಲನಚಿತ್ರಗಳನ್ನು ಮಾಡಿದರೆ, ಅದರಲ್ಲಿ ಬಹುತೇಕ ಚಿತ್ರಗಳು ಹೀಗೇ ಇರುತ್ತಿತ್ತು. ಎಂಜಿಆರ್ ಕೇವಲ ಪರದೆಯ ಮೇಲಷ್ಟೇ ಅಲ್ಲ ಹೊರಗೂ ಕೂಡ ಅದೇ

ರೀತಿ ವರ್ತಿಸಲು ಆರಂಭಿಸಿದ್ದರು. ಬಡ ಮಹಿಳೆಯರಿಗೆ ಚೆನ್ನದ ಸರಗಳನ್ನು ನೀಡುವುದು, ಬಡ ಮಕ್ಕಳಿಗೆ ಶಾಲಾ ಶುಲ್ಕವನ್ನು ಪಾವತಿಸುವುದು, ಅಭಿಮಾನಿಗಳಿಗೆ ಸಹಾಯ ಮಾಡಲು ಮಧ್ಯರಾತ್ರಿಯಲ್ಲಿ ಎದ್ದು ಬರುವುದು, ಚಿತ್ರೀಕರಣ ನಡೆಯುವಾಗ ಜನರ ದೂರನ್ನು ಸ್ವೀಕರಿಸುವುದು, ಅವರ ಮುಂದೆಯೇ ಓದಿ ಅದಕ್ಕೆ ಪರಿಹಾರ ಸೂಚಿಸುವುದು ಅಥವಾ ಅವರೊಂದಿಗೆ ತಾನಿದ್ದೇನೆ ಎಂಬ ಭರವಸೆ ಕೊಡುವುದು ಇತ್ಯಾದಿ. ಇದನ್ನೆಲ್ಲ ಅವರು ರಾಜಕೀಯದ ಉದ್ದೇಶ ಇಟ್ಟುಕೊಂಡು ಮಾಡಿದ್ದರೋ ಅಥವಾ ಇಲ್ಲವೋ ಗೊತ್ತಿಲ್ಲ, ಜನರಿಗಂತೂ ಬಹಳ ಹತ್ತಿರವಾದರು. ಸಿನಿಮಾದ ನಾಯಕ ನಟರು ತಮ್ಮ ಕಣ್ಣಿಗೆ ಕಾಣುವ ದೇವರಂತೆ ಕಂಡರು. ಹಾಗಾಗಿಯೇ ಒಂದೆರಡು ದೇವಾಲಯಗಳೂ ನಿರ್ಮಾಣಗೊಂಡವು. ಸಾಲದು ಎಂಬಂತೆ ರಾಷ್ಟ್ರೀಯ ಪಕ್ಷಗಳು ಇಲ್ಲಿ ಚಿಗುರಿಕೊಳ್ಳಲೇ ಇಲ್ಲ. ಸಿನಿಮಾದ ನಾಯಕರಿಗೆ ರಾಜಕೀಯ ನಾಯಕರಿಗಿಂತ ಹೆಚ್ಚಿನ ಅಭಿಮಾನಿಗಳು ಹುಟ್ಟಿಕೊಂಡರು, ಅವರನ್ನೇ ಒಪ್ಪಿಕೊಂಡರು.

ಹಾಗೆಯೇ ಅಭಿಮಾನಿಗಳ ಸಂಘಗಳು ಕೂಡ. ಅಭಿಮಾನಿಗಳು ಮತ್ತು ಅಭಿಮಾನಿ ಸಂಘಗಳು ಯಾವುದೇ ರಾಜಕೀಯ ಪಕ್ಷ ಮತ್ತು ಕಾರ್ಯಕರ್ತರಿಗಿಂತ ಹೆಚ್ಚು ಉತ್ತಮವಾಗಿದ್ದವು. ಈ ಅಭಿಮಾನಿ ಸಂಘಗಳು ತಮ್ಮ ನೆಚ್ಚಿನ ನಟನ ದೊಡ್ಡ ದೊಡ್ಡ ಕಟೌಟ್ ನಿಲ್ಲಿಸುವುದು, ಹಾಲಿನ ಅಭಿಷೇಕ ಮಾಡುವುದು, ತಮ್ಮ ನಾಯಕನ ಹೆಸರಿನಲ್ಲಿ ರಕ್ತದಾನ ಶಿಬಿರ ಏರ್ಪಡಿಸುವುದು, ಉಚಿತ ಬೋಧನೆ ಮತ್ತು ಭೋಜನ ನೀಡುವುದು, ಅಭಿಮಾನಿಗಳ ಹುಟ್ಟು ಹಬ್ಬದಂದು ಹೆಣ್ಣು ಮಕ್ಕಳಿಗೆ ಸೀರೆ, ಮಕ್ಕಳಿಗೆ ಪಠ್ಯ-ಪುಸ್ತಕ ನೀಡುವುದು, ಯಾವುದೇ ರೀತಿಯ ಸಭೆಗಳು, ಪ್ರತಿಭಟನೆಗಳು ಆಗಬೇಕೆಂದರೆ ಅತಿ ಶೀಘ್ರದಲ್ಲಿ ಜನರನ್ನು ಒಂದುಗೂಡಿಸುವುದು, ಇತ್ಯಾದಿಗಳನ್ನು ಮಾಡಲು ಆರಂಭಿಸಿದರು. ಚಿಕ್ಕದಾಗಿ ಒಂದೇ ಮಾತಿನಲ್ಲಿ ಹೇಳುವುದಾದರೆ, 'ಚಿತ್ರನಟರು ತಮ್ಮ ಸಾಂಸ್ಕೃತಿಕ ಬಂಡವಾಳವನ್ನು ರಾಜಕೀಯ ಬಂಡವಾಳವಾಗಿ ಪರಿವರ್ತಿಸಿಕೊಂಡರು'.

1972ರ ಹೊತ್ತಿಗೆ ಎಂಜಿಆರ್ ಅವರಿಗೆ 25,000 ಅಭಿಮಾನಿ ಸಂಘಗಳು ಇದ್ದವಂತೆ. ಆ ಪದ್ಧತಿ ಇಂದಿಗೂ ಮುಂದುವರಿದಿದೆ. (ನಿನ್ನೆ ಪ್ರಮಾಣವಚನ ಸ್ವೀಕರಿಸಿದ ವಿಜಯ್ ಅವರ 'ತಲಪತಿ ವಿಜಯ್ ಮಕ್ಕಳ್ ಇಯಕ್ಕಂ' ಸುಮಾರು 2 ಲಕ್ಷ ಸದಸ್ಯರನ್ನು ಹೊಂದಿದೆಯಂತೆ.) ಇದು ಇನ್ನೂ ಮುಂದುವರಿಯುತ್ತದೆ.

ಇರಲಿ, ಪಕ್ಷಗಳ, ಬೆಳ್ಳಿ ಪರದೆಯ ನಾಯಕ, ನಾಯಕಿಯರ ಇತಿಹಾಸಕ್ಕೆ ಬಂದರೆ, 1949ರಲ್ಲಿ ಅಣ್ಣಾದೊರೈ ಪೆರಿಯಾರ್ ಅವರ ದ್ರಾವಿರ್ಡ ಕಝುಗಮ್‌ನಿಂದ ಹೊರಗೆ ಬಂದು ದ್ರಾವಿಡ ಮುನ್ನೇತ್ರ ಕಝುಗಮ್ (ಡಿಎಂಕೆ) ಆರಂಭಿಸಿ ಪ್ರಧಾನ ಕಾರ್ಯದರ್ಶಿಯಾದರು. 1965ರಲ್ಲಿ ಹಿಂದಿ ವಿರೋಧಿ ಆಂದೋಲನ ಹಿಂಸಾತ್ಮಕವಾಗಿ ಎಪ್ಪತ್ತಕ್ಕೂ ಹೆಚ್ಚು ಜನ ಸತ್ತರು. ಆಗ ಡಿಎಂಕೆಯ ನಿಜವಾದ ಉದಯ ವಾಯಿತು. ಪಕ್ಷದ ಚಿನ್ಹೆ ಉದಯಿಸುತ್ತಿರುವ ಸೂರ್ಯ ಅದರದ್ದೇ ಸೂಚನೆ. 1967ರಿಂದ 69ರಲ್ಲಿ ತೀರಿಹೋಗುವವರೆಗೂ ಮುಖ್ಯಮಂತ್ರಿಯೂ ಆದರು. ಆಗ ಭಾರತದಲ್ಲಿ ಮೊದಲ ಬಾರಿ ರಾಷ್ಟ್ರೀಯ ಪಕ್ಷವಾದ ಕಾಂಗ್ರೆಸ್ ಪಕ್ಷದ ವಿರುದ್ಧ ಪ್ರಾದೇಶಿಕ ಪಕ್ಷವೊಂದು ಪೂರ್ತಿ ಬಹುಮತ ಪಡೆದು ಅಧಿಕಾರಕ್ಕೆ ಬಂದಿತು. ಅವರ ನಂತರ ಮುಖ್ಯಮಂತ್ರಿಯಾದ ಕರುಣಾನಿಧಿ 2018 ರಲ್ಲಿ ಕಾಲವಾಗುವವರೆಗೆ ಒಟ್ಟೂ ಐದು ಬಾರಿ ಮುಖ್ಯಮಂತ್ರಿಯಾಗಿದ್ದರು. ಎಂಜಿಆರ್ ನಂತರ ಜೆ. ಜಯಲಲಿತಾ 1991ರಿಂದ 2016ರ ಮಧ್ಯದಲ್ಲಿ ಆರು ಬಾರಿ ಮುಖ್ಯಮಂತ್ರಿಯಾಗಿದ್ದರು. 1972ರಲ್ಲಿ ಎಂಜಿಆರ್ ಎಐಎಡಿಎಂಕೆ ಪಕ್ಷವನ್ನು ಪ್ರಾರಂಭಿಸಿದಾಗ ಜನರು ಹಿಂದೆ ಮುಂದೆ ಯೋಚಿಸಲಿಲ್ಲ, ಯಾವ ವಿಶ್ಲೇಷಣೆಯನ್ನೂ ಮಾಡಲಿಲ್ಲ. ಅವರ ತರ್ಕ ಬಹಳ ಸರಳವಾಗಿತ್ತು. 'ಎಂಜಿಆರ್ ಅವರು ಚಲನಚಿತ್ರಗಳಲ್ಲಿ ಇಪ್ಪತ್ತೈದು ವರ್ಷಗಳ ಕಾಲ ವರ್ಷಗಳ ಕಾಲ ಹಳ್ಳಿಯನ್ನು ಉಳಿಸಿದ್ದಾರೆ, ನಿಜ ಜೀವನದಲ್ಲಿಯೂ ತಮಿಳುನಾಡನ್ನು ಉಳಿಸುತ್ತಾರೆ' ಎಂಬುದು ಅವರ ಮನಸ್ಸಿನಲ್ಲಿ ಕುಳಿತು ಹೋಗಿತ್ತು. ಆದ್ದರಿಂದ ಎಂಜಿಆರ್ ಅವರು 1977, 1980, 1984ರಲ್ಲಿ ಗೆದ್ದರು. 1984ರಲ್ಲಂತೂ ಅವರು ಅನಾರೋಗ್ಯದ ಕಾರಣ ಆಸ್ಪತ್ರೆಗೆ ಸೇರಿದ್ದರು. ಪ್ರಚಾರಕ್ಕೆ ಬರಲಾಗದಿದ್ದರೂ ಗೆದ್ದರು. ತಾವು ಅಭಿನಯಿಸಿದ ಚಿತ್ರದಲ್ಲಿ ಮುಖ್ಯಮಂತ್ರಿಯಾಗಿ ಪಾತ್ರ ಮಾಡದಿದ್ದರೂ ತಮಿಳುನಾಡಿನ ಮುಖ್ಯಮಂತ್ರಿಯಾದರು. ಈಗ ಚಿತ್ರರಂಗದಿಂದಲೇ ಬಂದ ಜೆ. ವಿಜಯ್ ಮುಖ್ಯಮಂತ್ರಿಯಾಗಿದ್ದಾರೆ.

ಚಿತ್ರರಂಗದಿಂದ ಬಂದ ಮುಖ್ಯಮಂತ್ರಿಗಳೆಲ್ಲ ಒಂದಲ್ಲ ಒಂದು ಪುಕ್ಕಟೆ ಭಾಗ್ಯಗಳನ್ನು ಘೋಷಿಸಿಕೊಂಡು ಬಂದರು. ಟಿವಿಯಿಂದ ಹಿಡಿದು ಇಡ್ಲಿಯವರೆಗೆ ಪುಕ್ಕಟೆ ನೀಡಿದರು. ಪುಕ್ಕಟೆ ಭಾಗ್ಯಗಳ ತವರೂರು ತಮಿಳುನಾಡು ಎಂದರೂ ತಪ್ಪಲ್ಲ. ಈಗ ಅಲ್ಲಿಯ ಹೊಸ ಮುಖ್ಯಮಂತ್ರಿ ಇನ್ನೂರು ಯುನಿಟ್ ವಿದ್ಯುತ್ ಪುಕ್ಕಟೆ ನೀಡುವುದಾಗಿ ಘೋಷಿಸಿದ್ದಾರೆ. ಜನರಿಗೂ ಅದೇ ಬೇಕಾಗಿದೆ. ಹೇಳಿ ಕೇಳಿ ಪ್ರಜಾಪ್ರಭುತ್ವ. ಏನೂ ಹೇಳುವಂತಿಲ್ಲ.

ಓದುಗರ ಓಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಶ್ರೀಗಂಧ ಬೆಳೆಗಾರರನ್ನು ರಕ್ಷಿಸಿ

ಪತ್ರಿಕೆಗಳಲ್ಲಿ ಬೃಹತ್ ಕೈಗಾರಿಕಾ ಸಚಿವರಾದ ಎಂಬಿ ಪಾಟೀಲ್ ಸಾಹೇಬರ ಶ್ರೀಗಂಧ ಮರ ಕಳವು ತಡೆಗೆ ಎಸ್‌ಡಿಎಲ್ ಉಪಕ್ರಮ ಎಂಬ ಶೀರ್ಷಿಕೆಯ ಸುದ್ದಿ ಓದಿ ಸಂತೋಷವಾಯಿತು. ಅದೊಂದು ದಿಟ್ಟ ಹೆಜ್ಜೆ. ಶ್ರೀಗಂಧದ ಬೆಳೆಗಾರರನ್ನು ಸಂತೈಸುವ ಶುಭ ಸುದ್ದಿ. ಅದನ್ನು ಇನ್ನೂ ಗಟ್ಟಿ ಮಾಡಬೇಕಾದರೆ ಈ ಕೆಳಕಂಡ ಸುಧಾರಣೆಗಳನ್ನು ಸೇರಿಸಬೇಕೆಂದು ಮಂತ್ರಿಗಳಲ್ಲಿ ನನ್ನ ಸವಿನಯ ಪ್ರಾರ್ಥನೆ.

1. ಯಾರು ಶ್ರೀಗಂಧದ ಮರಕ್ಕೆ ರಕ್ಷಣಾ ಕವಚವನ್ನು ಕಂಡುಹಿಡಿಯುತ್ತಾರೆಯೋ ಅದನ್ನು ರೈತರು ಒಪ್ಪಬೇಕು. 2. ಅಂತಹ ಪರಿಕ್ರಮಕ್ಕೆ ಸರ್ಕಾರ 50 ಲಕ್ಷ ರೂಪಾಯಿ ನಗದು ಬಹುಮಾನವನ್ನು ಘೋಷಿಸಬೇಕು. 3. ಜೊತೆಗೆ ಅರಣ್ಯ ಇಲಾಖೆಯಲ್ಲಿ ಮಂತ್ರಿಗಳ ಹಾಗೂ ಅಧಿಕಾರಿಗಳ ಉತ್ಸಾಹದಿಂದ ಆರಂಭಗೊಂಡ ಅರಣ್ಯ ಪ್ರೋತ್ಸಾಹ ಯೋಜನೆಯಲ್ಲಿ ಶ್ರೀಗಂಧದ ಬೆಳೆಗೆ ಇಲಾಖೆ ಇಮ್ಮಡಿ ಪ್ರೋತ್ಸಾಹ ಧನವನ್ನು ಪ್ರಾರಂಭಿಸಬೇಕು. 4. ರಕ್ಷಣಾ ಕವಚವನ್ನು ಕೊಡುವವರೆಗೂ ರೈತರಿಗೆ ಸನ್ಮಾನ ಮಾಡುವುದನ್ನು ಮುಂದೂಡಬೇಕು. ಆಕಸ್ಮಿಕವಾಗಿ ಈಗಲೇ ಮಾಡಿದರೆ 15 ವರ್ಷ ಕಷ್ಟಪಟ್ಟು ಬೆಳೆದ ಶ್ರೀಗಂಧದ ಮರಗಳು ಕಳ್ಳ ಕಾಕರ ಕಣ್ಣಿಗೆ ಬಿದ್ದು ರಾತ್ರೋರಾತ್ರಿ ರೈತ ಭಿಕಾರಿಯಾಗುವ ಅವಕಾಶಗಳು ಇವೆ. ಶ್ರೀಗಂಧ ಬೆಳೆದ ರೈತರನ್ನು ರಕ್ಷಿಸುವುದು ಸರ್ಕಾರದ ಕರ್ತವ್ಯ.

5.ಶ್ರೀಗಂಧದ ಮರಗಳನ್ನು ಸ್ವೀಕಾರ ಮಾಡಿದ 24 ಗಂಟೆಗಳಲ್ಲಿ, ಶೇಕಡ 33% ನಿಗದಿತ ಮೌಲ್ಯವನ್ನು ರೈತರಿಗೆ ಪಾವತಿ ಮಾಡಬೇಕು. 6. ಮರಗಳನ್ನು ಸ್ವೀಕಾರ ಮಾಡಿದ 12 ತಿಂಗಳಲ್ಲಿ ಉಳಿದ ನಿಗದಿತ ಮೌಲ್ಯವನ್ನು ರೈತರಿಗೆ ಪಾವತಿಸಬೇಕು. 7. ಪಾವತಿ ಮಾಡಲು ನಿಧಾನವಾದರೆ ರೈತರಿಗೆ ಶೇಕಡ 12% ಬಡ್ಡಿ ಸಮೇತ ಮೌಲ್ಯವನ್ನು ಪಾವತಿಸಬೇಕು. 8. ಪ್ರತಿ ವರ್ಷ 250 ಕೋಟಿ ರೂಪಾಯಿಗಳನ್ನು ಗಂಧದ ಸಂಶೋಧನೆ, ವಿಸ್ತರಣೆ ಹಾಗೂ ವಿಮೆಗೆ ಮೀಸಲಿಡಬೇಕು. ಈ ಸುಧಾರಣೆಗಳನ್ನು ಸರ್ಕಾರ ತಕ್ಷಣವೇ ಜಾರಿಗೆ ತರಬೇಕೆಂದು ಸಚಿವ ಪಾಟೀಲರನ್ನು ವಿನಂತಿಸುತ್ತೇನೆ.

- ಎಸಿ ಲಕ್ಷ್ಮಣ್, ವಿಶ್ರಾಂತ ಅರಣ್ಯ ಮತ್ತು ಪರಿಸರ ಕಾರ್ಯದರ್ಶಿ

ಮಲೆನಾಡು ಬಯಲು ಸೀಮೆಯತ್ತ

ಹಿಂದೆಂದೂ ಕಂಡರಿಯದ ಬೇಸಿಗೆಯ ಪ್ರಕೃತಿ ಹೊಯ್ದಾಟಕ್ಕೆ ನಿಜಕ್ಕೂ ಮಲೆನಾಡು ಬೆಂದು ಹೋಗುತ್ತಿದೆ. ಕೆರೆಗಳು ಬತ್ತಿ ಹೋಗುತ್ತಿವೆ, ಝರಿಗಳಲ್ಲಿ ನೀರಿಲ್ಲ, ಹಳ್ಳದಲ್ಲಿ ನೀರಿನ ಹರಿವಿಲ್ಲ, ಬಾವಿಗಳಲ್ಲಿಯೂ ವರ್ಷವಿಡೀ ಎಷ್ಟು ನೀರು ಉಪಯೋಗಿಸಿದರೂ ಕಡಿಮೆಯಾಗದೇ ಇದ್ದುದು, ಈಗ ಮಿತ ನೀರಿನ ಬಳಕೆಯ ಪಾಠ ಸುರುವಾಗಿದೆ. ಸುಡು ಬಿಸಿಲಿಗೆ ವಯೋವೃದ್ಧರು, ಮಕ್ಕಳು, ದೈಹಿಕವಾಗಿ ಕ್ಷೀಣ ಇದ್ದವರು ಸಾಕು ಬದುಕು ಎಂಬುದನ್ನು ಅನುಭವಿಸುತ್ತಿದ್ದಾರೆ. ಮಲೆನಾಡಿನ ಪ್ರಮುಖ ಬೆಳೆಯಾದ ಅಡಕೆಯ ಫಸಲಂತೂ ನೋಡದಷ್ಟು ಕಡಿಮೆಯಾಗಿದೆ. ಹಳದಿಚುಕ್ಕೆ ರೋಗದ ಬಾಧೆಯಿಂದ ಅಡಕೆ ತೋಟಗಳಲ್ಲಿ ಮುಂದೆ ಕೊನೆಯು ಬರುವ ಯಾವ ಲಕ್ಷಣಗಳೂ ಇಲ್ಲ. ಮಳೆಗಾಲದಲ್ಲಿ ಒಂದು ಸಮಸ್ಯೆಯಾದರೆ, ಬೇಸಿಗೆ ಹಲವು ಸಮಸ್ಯೆಗಳಿಂದ ಕೂಡಿದೆ. ಸದಾ ಕಂಗೊಳಿಸುವ, ಮನಕ್ಕೆ ಹಿತಕಾರಿಯಾದ ಹಸಿರು ಮಲೆನಾಡು ಬಯಲು ಸೀಮೆಯತ್ತ ಸಾಗಿದೆಯೇ ಅನಿಸಿದರೂ ಆಶ್ಚರ್ಯ ಇಲ್ಲ. ಹಲವು ಕಡೆ ಬತ್ತದ ಗದ್ದೆ ಗಳು ನಿವೇಶನಗಳಾಗಿ ಮಾರ್ಪಾಡಾಗುತ್ತಿದೆ. ಇಂತಹ ಲೇಔಟ್‌ಗಳಲ್ಲಿ ಮರಗಳು ಇಲ್ಲ, ಬಯಲಲ್ಲಿ ನೂರಾರು ನಿವೇಶನಗಳಿವೆ. ಎಲ್ಲ ಕಡೆ ವಾಸ್ತವ್ಯದ ಮನೆಗಳು, ಅಪಾರ್ಟಮೆಂಟ್‌ಗಳು ನಿರ್ಮಾಣಗೊಂಡರೆ, ಎಂತಹ ವಾತಾವರಣ ಉಂಟಾಗಬಹುದು? ಅಲ್ಲಿರುವವರಿಗೆ ಕುಡಿಯುವ ನೀರು ಪೂರೈಕೆ ಹೇಗೆ? ನಗರ, ಅರೆ ನಗರ, ಗ್ರಾಮಾಂತರ ಪ್ರದೇಶಗಳಲ್ಲಿ ದೂರದೃಷ್ಟಿಯ ಯೋಜನೆಗಳು ಕಾರ್ಯರೂಪಕ್ಕೆ ಬರುವದಾದರೂ ಯಾವಾಗ? ಹೀಗೆಯೇ ಮುಂದುವರಿದರೆ, ಇಲ್ಲಿಯ ನದಿ ನೀರನ್ನು ಬೇರೆಡೆಗೆ ಸಾಗಿಸಲು ಉತ್ಸಾಹವಾದರೂ ಆಡಳಿತಕ್ಕೆ ಯಾಕೆ? ಬರಿ ಪ್ರತಿಷ್ಠೆಯೇ? ಮಲೆನಾಡು ಕ್ರಮೇಣ ಬಯಲುಸೀಮೆಯಾಗುವ ಎಲ್ಲ ಲಕ್ಷಣಗಳೂ ಇವೆ. ಇದು ಪರಿಸರ ಕಾಳಜಿ ಇರುವವರನ್ನು ಆತಂಕಕ್ಕೆ ಈಡು ಮಾಡಿದೆ.

- ಮೋಹನ ಭಟ್ಟ, ಅಗಸೂರು

ರೇಣುಕಾಚಾರ್ಯರು ಯಾನೆ ರೇವಣಸಿದ್ಧರು ಕುರುಬರೇ!?

ಮನುಕುಲ ಔದ್ಯೋಗಿಕವಾಗಿ ವಿಕಾಸದ ಹಾದಿಯಲ್ಲಿ ಇಟ್ಟ ಮೊದಲ ಹೆಜ್ಜೆ, ಬೇಟೆ! ನಂತರ ಪಶುಪಾಲನೆ, ತದನಂತರ ಬಂದದ್ದು ಕೃಷಿ. ಇದನ್ನು ಇಡೀ ಮನುಕುಲ ಖಂಡಾತೀತವಾಗಿ ವರ್ಣಾತೀತವಾಗಿ, ಜಾತ್ಯತೀತವಾಗಿ ಮಾಡಿದೆ. ಹೀಗೆ ಮಾನವನ ಆದಿ ಉದ್ಯೋಗಗಳಾದ ಬೇಟೆ (ಅರಣ್ಯಕ) ಮತ್ತು ಪಶು ಸಾಕಾಣಿಕೆ (ಪಶುಪಾಲಕ)ಗಳಲ್ಲಿ ಮಾನವ ಜನಾಂಗವು ತೊಡಗಿಕೊಂಡು ಮುಂದೆ ನಾಗರಿಕತೆಯನ್ನು ವಿಕಾಸಗೊಳಿಸಿತು ಎಂಬುದು ಜಗಜ್ಜಾಹೀರಾದ ಸಿದ್ಧಾಂತ! ಇಂತಹ ಜಾಗತಿಕ ಮಾನವ ವಿಕಾಸವನ್ನು ಆಧುನಿಕ ಭಾರತದ ಜಾತಿಪದ್ಧತಿಯ ಮೋಹದ ಅಂಧಾಭಿಮಾನದ ಜಾತಿವಿಷದ ಹಿನ್ನೆಲೆಯಲ್ಲಿ ಇತಿಹಾಸವನ್ನು ತಿರುಚಿ ಸತ್ಯವನ್ನು ಮರೆಮಾಚಿ ಹೆಸರಾಂತ ಮಹಾಮಹಿಮರನ್ನು ವರ್ತಮಾನದ ಒಂದು ಜಾತಿಗೆ ಅಂಟಿಸುವುದು ಮಾನವ ವಿಕಾಸದ ಇತಿಹಾಸದ ಅಪಮಾನವಾಗಿದೆ.

ವಚನಾಮೃತ

ರವಿ ಹಂಜ್
vveditoped@gmail.com

ಇಂದು ಇಂತಹುದೇ ತಿರುಚುವಿಕೆ, ಮರೆಮಾಚುವಿಕೆ, ಗೋಬೆಲ್ಸ್ ತಂತ್ರದಲ್ಲಿ ಮುಳುಗಿ ಸಮಾಜವನ್ನೂ ಮುಳುಗಿಸಲಿದ್ದ ಲಿಂಗಾಹತ ಪ್ರತ್ಯೇಕವಾದಿಗಳು ವಿಶ್ವವಾಣಿ ಅಂಕಣದಿಂದ ಇಂದು ಕಂಗಾಲಾಗಿದ್ದಾರೆ. ಇವರ ಪ್ರಮುಖ ಮುಖಂಡರು ನನ್ನೊಟ್ಟಿಗೆ ಸವಾಲಿನಲ್ಲಿ ಸೋತು ಒಂದು ರೂಪಾಯಿ ಬಾಕಿ ಉಳಿಸಿಕೊಂಡಿದ್ದಾರೆ. ಏಕೆಂದರೆ ಇವರೆಲ್ಲರೂ ಕೂಪ ಮಂಡೂಕ ಭಂಡರು! ತಾತ್ಕಾಲಿಕವಾಗಿ ತಟಸ್ಥರಾಗಿದ್ದ ಇವರು ಈಗ ಭಕ್ತ ಭಂಡಾರವನ್ನು ಬಡಿದು ಕೆಲವು ಜಾತ್ಯಂಧರನ್ನು ಮಂಡೂಕ ಭಂಡರಾಗಿಸುವತ್ತ ಒತ್ತು ಕೊಟ್ಟು ಕ್ರಿಯಾಶೀಲರಾಗಿದ್ದಾರೆ. ಈ ಧರ್ಮ ಭಂಜಕರು ತಮ್ಮ ಪ್ರಾಯೋಜಕ ರಾಜಕಾರಣಿಯ ಜಾತ್ಯಂಧ ಅಭಿಮಾನಿಗಳನ್ನು ಬಳಸಿಕೊಂಡು ಈಗ ವೀರಶೈವರು ರೇಣುಕರು ಯಾನೆ ರೇವಣಸಿದ್ಧರು ಕುರುಬರು ಎಂಬ ಸಂಕಥನಕ್ಕೆ ಸಾಕ್ಷ್ಯ ಎನ್ನುವ ಸ್ಟೆರಾಯ್ಡ್ ಕೊಟ್ಟು ಬಡಿದೇಳಿಸುತ್ತಿದ್ದಾರೆ. ಇದಕ್ಕೆ ಪೂರಕವಾಗಿ ಸಾಮಾಜಿಕ ಮಾಧ್ಯಮದಲ್ಲಿ ಕೆಲವು ಸ್ವಘೋಷಿತ ಚಿಕಿತ್ಸಕ ಸಂಶೋಧಕರುಗಳು ಸ್ಟೆರಾಯ್ಡ್ ಚುಚ್ಚುಮದ್ದುಗಳನ್ನು ಧಾರಾಳವಾಗಿ ಕೊಡುತ್ತಿದ್ದಾರೆ.

ಭಾಗ-1

ಅವರ ವಾದ ಸರಿಯೇ? ಸ್ವಲ್ಪ ವಿಶ್ಲೇಷಿಸಿ ನೋಡೋಣ

ಹಾಲುಮತ ಕುಲಗುರು, ಶಾಂತ ಸಿಂಹಾಸನಾರೂಢ ಶ್ರೀ ರೇವಣಸಿದ್ದೇಶ್ವರ ಮಹಾಸಂಸ್ಥಾನ ಮಠ, ಸರವೂರು ಶಾಖಾ, ಅಣತಿ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ, ಇದಕ್ಕೆ ಸಂಬಂಧಿಸಿದ ತಾಮ್ರಪಟ್ಟಿಕೆ ಇದು ಎನ್ನುತ್ತಾ ತಾಮ್ರದ ಬಿಲ್ಲೆಯೊಂದನ್ನು ಸಾಕ್ಷಿಯಾಗಿಸಿ, ಚರಿತ್ರೆಯಲ್ಲಿ ಸುಳ್ಳನ್ನು ಕೂಡಾ ರಾಜತಸ್ವೆಯೊಂದಿಗೆ ನಿಜವೆಂದೇ ನಂಬಿಸುವ ಯಡವಟ್ಟುಗಳು ಕೂಡಾ ನಡೆದಿವೆ ಎಂಬುದಕ್ಕೆ ಈ ತಾಮ್ರದ ಬಿಲ್ಲೆಯೇ ಸಾಕ್ಷಿಯಾಗಿದೆ. ಕುರುಬರ ಕುಲಗುರು ರೇವಣಸಿದ್ಧರನ್ನು ಹೈಜಾಕ್ ಮಾಡಿಕೊಂಡು ಶ್ರೀ ರೇಣುಕಾಚಾರ್ಯ ಎಂದು ಅಯೋನಿಜ ಕಾಲ್ಪನಿಕ ವ್ಯಕ್ತಿಯನ್ನು ಸೃಷ್ಟಿಸಿ ಪುರಾಣವನ್ನೇ ಹೊಸೆಯಲಾಗಿದೆ. ದಕ್ಷಿಣ ಕರ್ನಾಟಕದ ಕುರುಬರ ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಸ್ಮಿತೆಗಳನ್ನು ವೀರಶೈವರ ಪಂಚಾಚಾರ್ಯರಿಗೆ ಪರಭಾರೆ ಮಾಡಿದ ಧರ್ಮಪೀಠದ ಸತ್ಯವನ್ನು ಈ ತಾಮ್ರಬಿಲ್ಲೆಯು ಅಡಗಿಸಿಕೊಂಡಿದೆ. ಹಾಲುಮತದ ಶ್ರೀ ರೇವಣಸಿದ್ದೇಶ್ವರರ ಮೂಲ ಗುರುಪೀಠದ ಅಸ್ಮಿತೆಗಳನ್ನು ವೀರಶೈವರು ಹೇಗೆಲ್ಲಾ ಹಾಳು ಮಾಡಿದ್ದಾರೆಂಬುದು ಸ್ವತಃ ಹಾಲುಮತ ಕುರುಬರಿಗೆ ಅರಿವಿಗಿಲ್ಲದಂತಾಗಿದೆ. ಕುರುಬರ ಇತಿಹಾಸವನ್ನು ನಾಡಿನಾದ್ಯಂತ ಪ್ರಚುರಪಡಿಸಬೇಕಾದವರು ತಮ್ಮದಲ್ಲದ ವೀರಶೈವ ಪಂಚಾಚಾರ್ಯರ ಇತಿಹಾಸವನ್ನು ಸಾರುವ ಸಾಂಸ್ಕೃತಿಕ ಹೇರಿಕೆಗೆ ಕುರುಬರು ಒಳಗಾಗಿದ್ದಾರೆ. ಹಾಲುಮತ ಕುರುಬ ಸಮುದಾಯದ ಲಿಂಗದಬೀರರ ಕುಣಿತವು ವೀರಶೈವರ ಕೈವಶವಾಗಿ ಬಿನ್ನಾಯ ಮಾಡುವ ಜಂಗಮರ ಪುರವಂತಿಕೆಯಾಯಿತು. ಕುರುಬರ ಬೀರಲಿಂಗನು ವೀರಭದ್ರನಾಗಿ ಹಾಗೂ ಲಿಂಗದಬೀರರ ಕುಣಿತವು ವೀರಗಾಸೆಯಾಗಿ ವೀರಶೈವರಿಂದ ಉನ್ನಯನಗೊಂಡಿತು. ಹೀಗಾಗಿ ವೀರಗಾಸೆಯ ವಚನ ಪಲುಕುಗಳು ಲಿಂಗಿಬ್ರಾಹ್ಮಣರ ಶ್ಲೋಕಗಳೇ ಆಗಿರುತ್ತವೆ. ಕನ್ನಡ ಜಾಯಮಾನಕ್ಕೆ ಎರವಾಗಿ ಸಂಸ್ಕೃತದ ಸಿದ್ಧಾಂತ ಶಿಖಾಮಣಿಯ ಪ್ರಭಾವಲಯದಲ್ಲಿ ಶರಣರ ವಚನಗಳನ್ನು ಕೂಡಾ ಪ್ರಕ್ಷಿಪ್ತಗೊಳಿಸಿದ ಬ್ರಾಹ್ಮಣ್ಯವನ್ನು ನಾವಿಲ್ಲಿ ನೋಡಬಹುದು. ಹೆಸರುಗಳೇ ಸೂಚಿಸುವಂತೆ ರೇವಣಸಿದ್ಧ ಮತ್ತು ಮರುಳಸಿದ್ಧರು ಸಿದ್ಧ ಪರಂಪರೆಗೆ ಸೇರಿದವರು. ಸಿದ್ಧ ಪರಂಪರೆಯ ಸಿದ್ಧರನ್ನು, ವೀರಶೈವರು ಆಚಾರ್ಯ ಪರಂಪರೆಗೆ ಪಲ್ಲಟಿಸಿಕೊಂಡಿದ್ದರಿಂದಾಗಿ ಕುರುಬರ ಕುಲಗುರು ರೇವಣಸಿದ್ಧನು ವೀರಶೈವರ ರೇಣುಕಾಚಾರ್ಯನಾಗಿದ್ದಾನೆ. ಶ್ರೀ ರೇಣುಕಾಚಾರ್ಯ ಎಂಬುವವನು ಆಂಧ್ರಪ್ರದೇಶದಿಂದ ಬಂದ ತೆಲುಗು ಬಾಳು ಆರಾಧ್ಯ ಜಂಗಮರ ಸುಳ್ಳು ಸೃಷ್ಟಿಯ ಕಾಲ್ಪನಿಕ ನಾಯಕ. ಕುರುಬ ಜಾತಿ ಮೂಲದ ಘನಶರಣ ರೇವಣಸಿದ್ಧನನ್ನು ವೀರಶೈವರು ರೇಣುಕಾಚಾರ್ಯನನ್ನಾಗಿ ಹೈಜಾಕ್ ಮಾಡಿದ್ದಾರೆಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕಿದೆ. ಈ ತಾಮ್ರಬಿಲ್ಲೆಯು, 'ಶ್ರೀಮತ್ಕುರುಬ ಮತಸ್ಥಾಪಕ ಶ್ರೀ ರೇಣುಕಾಚಾರ್ಯ ವಂಶೀಯ ಶ್ರೀ ಸರವೂರ ಮಹಾಸಂಸ್ಥಾನ ಶಾಖಾ, ಶ್ರೀ ಅಣತಿ ಮಠ ಸಿಂಹಾಸನ, ಮೈಸೂರು ದೇಶ- 109' ಎಂದು ಹೇಳುತ್ತದೆ. ಇಲ್ಲಿ ಕುರುಬ ಕುಲದ ಸ್ಥಾಪಕ ಶ್ರೀ ರೇಣುಕಾಚಾರ್ಯ ಎಂದು ಹೇಳಲಾಗಿದೆಯೇ ಹೊರತು ಅಸಲಿ ಕುರುಬರ ಕುಲಗುರು ರೇವಣಸಿದ್ಧನ ಹೆಸರು ಇರುವುದಿಲ್ಲ. ಮೈಸೂರು ಒಡೆಯರ್ ಅವರ ಆಳ್ವಿಕೆಯ ಕಾಲದಲ್ಲಿ ಕರ್ನಾಟಕವನ್ನು ಮೈಸೂರು ದೇಶ ಎಂದು ಕರೆಯಲಾಗಿದೆ. ಆ ಕಾಲದ ಮೈಸೂರು ಒಡೆಯರು ಅಣತಿ ಮಠಕ್ಕೆ ನೀಡಿದ್ದ 109ನೇ ಸಂಖ್ಯೆಯ ತಾಮ್ರದ ಸರ್ಕೀಟು ಬಿಲ್ಲೆ ಇದು. ಇಂತಹ ಬಿಲ್ಲೆಗಳನ್ನು ಯಾವ ಯಾವ ಮಠಗಳಿಗೆ ಒದಗಿಸಲಾಗಿತ್ತೋ ಅಂತಹ ಮಠಗಳಿಗೆ ರಾಜಮರ್ಯಾದೆಯೂ ಇರುತ್ತಿತ್ತು. ಹಾಲುಮತ ಕುಲಗುರು ಶ್ರೀ ರೇವಣಸಿದ್ಧೇಶ್ವರನ ಅಣತಿ ಮಠ ಮೈಸೂರು ಒಡೆಯರ ಕಾಲದಲ್ಲಿ ರಾಜಮರ್ಯಾದೆಗೆ ಪಾತ್ರವಾಗಿತ್ತು. ಈಗ ಕುರುಬರ ಕುಲಗುರು ಶ್ರೀ ರೇವಣಸಿದ್ಧನೇ ಹೊರತು ವೀರಶೈವ ಪಂಚಾಚಾರ್ಯರ ಶ್ರೀ ರೇಣುಕಾಚಾರ್ಯನಲ್ಲ ಎಂಬುದನ್ನು ಮನಗಾಣುವಂತಾಗಲಿ

ಎಂದು ವಡ್ಡಗೆರೆ ನಾಗರಾಜಯ್ಯ ಎನ್ನುವವರು ಉಗ್ರವಾಗಿ ಕ್ರಾಂತಿಗೆ ಕರೆ ನೀಡಿದ್ದಾರೆ. ಇನ್ನೋರ್ವ ಸ್ವಘೋಷಿತ ಸಂಶೋಧಕ, ಜ್ಯೋತಿಷಿ, ಸಮ್ಮೋಹನಾ ಚತುರ, ಗುರೂಜಿ ಎಂಬೆಲ್ಲಾ ವಿಶೇಷಣಗಳ ಚಂದ್ರಕಾಂತ ಬಿಜ್ಜರಗಿಯವರು, ಹಾಲುಮತದ ಉಗಮ ಹನ್ನೊಂದನೇ ಶತಮಾನದ ಪದ್ಮಗೊಂಡನಿಂದ ಆಯಿತು. ಅವನು ಗಳೆ ಹೊಡೆಯುವಾಗ ಹುತ್ತವೊಂದು ಒಡೆದು ಅದರಿಂದ ಕುರಿಗಳು ಬಂದವು ಎಂಬ ಜನಪದ ಕತೆ ಹೇಳುತ್ತಾ ಕುರುಬ ರೇವಣಸಿದ್ಧರು ನಾಥಪಂಥಕ್ಕೆ ಹೋಗಿ ನಂತರ ನವನಾಥ ಪಂಥಕ್ಕೆ ಹೋಗಿ ಕೊಲ್ಲಿಪಾಕಿಗೆ ಬಂದರು ಎನ್ನುತ್ತ ಇದೆಲ್ಲವೂ ಕಲ್ಪಿತ ಎನ್ನುತ್ತಲೇ ಇದಕ್ಕೆ ಇತಿಹಾಸವಿದೆ ಎನ್ನುತ್ತಾ ಸಿರಿವಾಳ ಶಾಸನವನ್ನು ಉಲ್ಲೇಖಿಸುತ್ತಾರೆ. ಈ ಶಾಸನದ ಪ್ರಕಾರ ರೇವಣಸಿದ್ಧರು ತಮ್ಮ ತಂದೆಯ ಹೆಸರಿಗೆ ದೇವಸ್ಥಾನ ಕಟ್ಟಿಸಿದ್ದರು ಎನ್ನುತ್ತಾರೆ.

ಅದೇ ರೀತಿ ಇನ್ನೋರ್ವ ಉದಯೋನ್ಮುಖ ಸಂಶೋಧಕರು, ವೇದಗಳಲ್ಲಿ, ವ್ಯಾಸನ ಪುರಾಣಗಳಲ್ಲಿ ವೀರಶೈವ, ರೇಣುಕಾಚಾರ್ಯ ಅಥವಾ ಪಂಚಪೀಠ ಎಂಬ ಶಬ್ದಗಳು ಸಿಗುವದಿಲ್ಲ ಎನ್ನುತ್ತಾ, ಕ್ರಿ.ಶ. 11ನೇ -12ನೇ ಶತಮಾನದಲ್ಲಿ ಕುರುಬರ ಕುಲಗುರು ರೇವಣಸಿದ್ದರು ಬದುಕಿದ್ದ ಕಾಲ. ಇವರು ವೈದಿಕ ಧರ್ಮದ ಜಾತಿವ್ಯವಸ್ಥೆ, ಮೂಢನಂಬಿಕೆಗಳನ್ನು ಕಂಡು ವೈದಿಕ ಧರ್ಮವನ್ನು ತ್ಯಜಿಸಿದವರು. ರೇವಣಸಿದ್ದರು ಹನ್ನೆರಡನೇ ಶತಮಾನದಲ್ಲಿ ಇಂದಿನ ಶಹಾಪೂರ ತಾಲೂಕಿನ ಶಿರವಾಳ ಗ್ರಾಮದಲ್ಲಿ ಬರುವ ಶಾಸನದ ಪ್ರಕಾರ ಲಿಂಗದೀಕ್ಷೆಯನ್ನು ಪಡೆದರು. ಗುರು ರೇವಣಸಿದ್ಧರ ಮಗ ರುದ್ರಮುನಿಯು ಸಹ ಹನ್ನೆರಡನೇ ಶತಮಾನದ ಕಲ್ಯಾಣದಲ್ಲಿ ಮಹಾನ ಶರಣನಾಗಿ ಬದುಕಿದವನು. ಈ ರೇವಣಸಿದ್ಧರನ್ನು ಹಾಗೂ ಅವರ ಮಗ ರುದ್ರಮುನಿಯನ್ನು ಹೈಜಾಕ್ ಮಾಡಿಕೊಂಡು ಹಾಲುಮತದ ರೇವಣಸಿದ್ದರೇ ರೇಣುಕಾಚಾರ್ಯ ಎಂಬ ಕಾಲ್ಪನಿಕ ಹೆಸರು ಕೊಟ್ಟು ಜನರನ್ನು ಕತ್ತಲೆಯಲ್ಲಿ ಇಟ್ಟಿದ್ದರು. ಇಂದು ಅನೇಕ ಸಂಶೋಧನೆಗಳು ನಡೆದು ವಿಶ್ವವಿದ್ಯಾಲಯ ಸಂಶೋಧನಕಾರರು ಸಹ ಗುರು ರೇವಣಸಿದ್ದರು ಹಾಲುಮತದ ಕುರುಬರ ಕುಲಗುರು ಎಂದು ಸಾಬೀತಾಗಿದೆ. ಇಂದಿನ ಬಾಳೆಹೊನ್ನೂರು ರೇವಣಸಿದ್ಧ ಪರಂಪರೆಯ ಮಠವಾಗಿದ್ದು ಹನ್ನೆರಡನೇ ಶತಮಾನದಲ್ಲಿ ಬಸವಣ್ಣನವರ ಹಿರಿಯ ಸಹೋದರಿ ಅಕ್ಕನಾಗಮ್ಮ ಕೆಲಕಾಲ ಇಲ್ಲಿ ತಂಗಿದ್ದರೆಂಬ ಐತಿಹಾಸಿಕ ಸತ್ಯ ಹೊರಬಂದಿದೆ ಎಂದಿದ್ದಾರೆ.

ಈ ಮೂವರ ಅಭಿಪ್ರಾಯವನ್ನೇ ಬಹುಪಾಲು ಪುಟಾಣಿ ಪೀಠಾಧಿಪತಿಗಳು/ಸಂಶೋಧಕರು/ಜಾತ್ಯಭಿಮಾನಿಗಳು ಭಜಿಸುತ್ತಿದ್ದಾರೆ. ಹಾಗಾಗಿ ಈ ಹಿನ್ನೆಲೆಯಲ್ಲಿ ರೇವಣಸಿದ್ಧರ ಇತಿಹಾಸ, ಪುರಾಣ, ಶಾಸನಗಳನ್ನು ವಿಶ್ಲೇಷಿಸಿ ಇದರ ಸತ್ಯಾಸತ್ಯತೆಯನ್ನು ಕಂಡುಕೊಳ್ಳೋಣ.

ಅಂದ ಹಾಗೆ ಬಸವಣ್ಣನೇ ಇಷ್ಟಲಿಂಗ ಜನಕ, ಲಿಂಗಾಯತ ಮತಸ್ಥಾಪಕ ಎಂದೇ ಪ್ರತಿಪಾದಿಸುವ ತೋಂಟದ ಶ್ರೀಗಳು ಬಸವಣ್ಣನಿಗೂ ಮುಂಚೆ ಇಷ್ಟಲಿಂಗ ಧರಿಸಿದ್ದ ರೇವಣಸಿದ್ಧ ಎಂದು ಪುಸ್ತಕ ಬರೆದ ಶ್ರೀಮಾನ್ ಚಂದ್ರಕಾಂತ ಬಿಜ್ಜರಗಿಯವರಿಗೆ, ಡಾ.ಫ.ಗು.ಹಳಕಟ್ಟಿಯವರ ನಂತರ ಸಂಶೋಧನೆಯಲ್ಲಿ ನಿಮ್ಮ ಹೆಸರು ಎದ್ದು ಕಾಣುವಂತಹುದು ಎಂದು ಪ್ರಶಂಸನಾ ಪತ್ರ ಕೊಟ್ಟಿದ್ದಾರೆ! ಏಕೆ...?

ಐತಿಹಾಸಿಕ ಗ್ರಾಂಥಿಕ ದಾಖಲೆಗಳ ಪ್ರಕಾರ ರೇವಣಸಿದ್ಧ ಎನ್ನುವ ನಾಲ್ಕು ವೀರಶೈವ ಯತಿಗಳು ಹನ್ನೆರಡನೇ ಶತಮಾನಕ್ಕೂ ಮುಂಚೆಯೇ ಆಗಿಹೋಗಿದ್ದಾರೆ. ಒಂದನೇ ಶತಮಾನದ ಸ್ವಯಂಭೂವ ಆಗಮ ಮತ್ತು ಐದನೇ ಶತಮಾನದ ಸುಪ್ರಭೇಧಾಗಮದಲ್ಲಿರುವಂತೆ ರೇವಣಸಿದ್ಧರೇ ರೇಣುಕರ ಅವತಾರ ಎಂದಾಗುತ್ತದೆ. ಇದು ಮೊದಲನೇ ರೇವಣಸಿದ್ಧರು ಉರ್ಫ್ ರೇಣುಕಾಚಾರ್ಯರು ಎನ್ನಬಹುದು.

ಇನ್ನು ಏಳನೇ ಶತಮಾನದ ಗುರುವಂಶಕಾವ್ಯ ಗ್ರಂಥದಲ್ಲಿ ಉಲ್ಲೇಖಿಸಿರುವಂತೆ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗ ಕೊಟ್ಟವರು ಸಹ ರೇವಣಸಿದ್ಧರು. ಶೃಂಗೇರಿ ಪೀಠದ ಆಸ್ಥಾನ ವಿದ್ವಾನರಾಗಿದ್ದ ಕಾಶಿ ಲಕ್ಷ್ಮಣಶಾಸ್ತ್ರಿಗಳು ಕ್ರಿಸ್ತಶಕ 1735ರಲ್ಲಿ ಸಂಸ್ಕೃತದಲ್ಲಿ ಪುನರ್‌ರಚಿಸಿದ್ದ ಮತ್ತು ವಿದ್ಯಾ ವಿಶಾರದ, ವಿದ್ವತ್ ಶಿರೋಭೂಷಣ ಮೈಸೂರು ರಾಜ್ಯದ ಧರ್ಮಾಧಿಕಾರಿ ಎನ್ನಲಾಗಿರುವ ಕುಣಿಗಲ್ ರಾಮಶಾಸ್ತ್ರಿಗಳು ಎರಡು ಶತಮಾನಗಳ ನಂತರ ಸಂಪಾದಿಸಿ ಪ್ರಕಟಿಸಿರುವ ಗುರುವಂಶ ಕಾವ್ಯ, ಸಂಪುಟ 1, ಭಾಗ 1-7, ತೃತೀಯ ಸರ್ಗ ಪುಟ 109 ಮತ್ತು 110ರಲ್ಲಿ, ...ಶ್ರೀತಿ । ಸ ಆಚಾರ್ಯಃ ಅಸ್ಮೈ ವಿಶ್ವರೂಪಾಚಾರ್ಯಾಯ ಸುಸಿದ್ಧದತ್ತೇ ಸುಭಿದೇನ ರೇವಣಾಸಿದ್ಧಮಹಾಯೋಗಿನಾ ದತ್ತಂ ಶ್ರೀ ಚಂದ್ರಮೌಳೀಶ್ವರಲಿಂಗಂ ಸದ್ರತ್ನ ಗರ್ಭೇ ಸತ್ವರಾಭಿ ಸತ್ವರಂ ಮಾಣಿಕ್ಯಂ ಗರ್ಭೇ ಯಸ್ಯ ಸ ತಥೋಕ್ತಸ್ತಂ ಗಣನಾಯಕಂ ವಿಶ್ವೇಶ್ವರಂ ಚ ದತ್ವಾ ಚಿರಂ ಬಹುಕಾಲಂ ಅಚಿಂತ್ಯ ಪೂಜ್ಯ ಇತಿ ನ್ಯಯಾದೀತ್ । ಅಬೋಚತ್ ।। ಎಂದಿದೆ.

ಇಲ್ಲಿ ಸ್ಪಷ್ಟವಾಗಿ ಶಂಕರಾಚಾರ್ಯರಿಗೆ ರೇವಣಸಿದ್ಧರು ಚಂದ್ರಮೌಳೀಶ್ವರ ಲಿಂಗವನ್ನು ಕೊಟ್ಟರು ಎಂದು ತಿಳಿದುಬರುತ್ತದೆ. ಶಂಕರರು ಕಾಲವಾದದ್ದು ಕ್ರಿಸ್ತಶಕ 820ರಲ್ಲಿ ಎನ್ನಲಾಗಿದೆ.

ಇದಕ್ಕೆ ಪೂರಕವಾಗಿ ಆನಂದಗಿರಿ ರಚಿಸಿರುವ 'ಆನಂದಗಿರೀಯ ಶಂಕರ ವಿಜಯ' ಕೃತಿಯಲ್ಲಿ ಶಿರಸ್ಯೆ ಪಾಷಾಣಲಿಂಗಂಚ ಧಾರಿಣಃ ಜಂಗಮಾಃ ಅಂದರೆ ಶಂಕರಾಚಾರ್ಯರು ಶಿರಸ್ಸಿನಲ್ಲಿ ಲಿಂಗ ಕಟ್ಟಿಕೊಂಡವರ ಜೊತೆ ವಾದಿಸಿದ್ದರು ಎಂದಾಗುತ್ತದೆ. ಈ ಕೃತಿಯ ಕರ್ತೃ ಆನಂದಗಿರಿಯು ಶಂಕರಾಚಾರ್ಯರ ಸಮಕಾಲೀನನು ಮತ್ತು ಅವರ ಶಿಷ್ಯನೂ ಆಗಿದ್ದನು. ಅಂದರೆ ಸ್ಪಷ್ಟವಾಗಿ ಅಂದು ಕೊರಳಲ್ಲಿ ಲಿಂಗಧಾರಣೆಯ ಆಚರಣೆಯಿತ್ತು ಮತ್ತು ಶಂಕರರೊಂದಿಗೆ ರೇವಣಸಿದ್ಧರು ಸಂವಾದದಲ್ಲಿ ತೊಡಗಿದ್ದರು ಎಂಬುದು ಸಾಬೀತಾಗುತ್ತದೆ. ಇನ್ನು ಮೂರನೇ ಮತ್ತು ನಾಲ್ಕನೇ ರೇವಣಸಿದ್ಧರ ಕುರಿತು ಕ್ರಿಸ್ತಶಕ ಕಲ್ಯಾಣ ಚಾಲುಕ್ಯರ ಆಡಳಿತದ ಕ್ರಿ.ಶ.1026ರಿಂದ ಕ್ರಿ.ಶ.1208ರವರೆಗೆ ಹಲವಾರು ಶಾಸನಗಳಿವೆ.

ಕ್ರಿ.ಶ.1170ರ ಸಿರಿವಾಳ ಶಾಸನದಲ್ಲಿ ಶಾಂತಿಮಯ್ಯದೇವರ ಪುತ್ರ ರೇವಣಸಿದ್ಧಯ್ಯ/ಸಿದ್ಧರೇವಯ್ಯ ಎಂದಿದೆ. ಸಿರಿವಾಳದ ಕ್ರಿ.ಶ.1175 ಇನ್ನೊಂದು ಶಾಸನದಲ್ಲಿ ಸಹ ರೇವಣಯ್ಯ ಎಂದಿದೆ. ಕ್ರಿ.ಶ.1120ರ ಕುಕ್ಕೇರಿ ಶಾಸನದಲ್ಲಿ, ಕ್ರಿಯಾಪರ್ಷೆ ಕಾಳಾಮುಖಾಚಾರ್ಯನಾದ ಬ್ರಹ್ಮರಾಶಿ ಪಂಡಿತನು ರೇವಣಸಿದ್ಧರ ಶಿಷ್ಯನೆಂದು ಉಲ್ಲೇಖವಿದೆ. ಕುಕ್ಕೇರಿಯ ಕ್ರಿ.ಶ.1172ರ ಇನ್ನೊಂದು ಶಾಸನದಲ್ಲಿಯೂ ರೇವಣಸಿದ್ಧ ಎಂಬ ಹೆಸರಿದೆ.

ಕ್ರಿ.ಶ.1175 ಹೋತಗಲ್ಲ ಶಾಸನದಲ್ಲಿ, ಶಾಂತಿಮಯ್ಯ ಮತ್ತು ಸಿದ್ಧರೇವಣಯ್ಯ ಎಂಬ ಉಲ್ಲೇಖವಿದೆ. ಕ್ರಿ.ಶ. 1208ರ ಇನ್ನೊಂದು ಹೋತಗಲ್ಲ ಶಾಸನದಲ್ಲಿ ರೇವಣೇಶ್ವರರು ಗದ್ದುಗೆ ಪೂಜೆಯನ್ನು ಕಾಳಾಮುಖಾಚಾರ್ಯನಾದ ನಾಗರಾಶಿ ಎಂಬವನಿಗೆ ವಹಿಸಿಕೊಟ್ಟ ಪ್ರಸ್ತಾಪವಿದೆ. ಹೀಗೆ ಶಾಸನಗಳ ಪ್ರಕಾರ ಕಲ್ಯಾಣ ಚಾಲುಕ್ಯರ ಕ್ರಿ.ಶ.1026ರಲ್ಲಿ ವಯಸ್ಕ (ಇಪ್ಪತ್ತರ ಹರೆಯ ಎಂದು ಊಹಿಸಿ) ರೇವಣಸಿದ್ಧರು ಕ್ರಿ.ಶ.1208ರಲ್ಲಿ ಲಿಂಗೈಕ್ಯನಾಗಿ ಸಮಾಧಿ ಗದ್ದುಗೆ ಕಟ್ಟಿಸಿಕೊಂಡ ಶಾಸನದವರೆಗೆ ಸುಮಾರು 202 ವರ್ಷ ಕಾಲ ಜೀವಿಸಿದ್ದರು ಎಂದಾಗುತ್ತದೆ!!

ಡಾ. ಎಂ.ಎಂ. ಕಲಬುರ್ಗಿಯವರು, ರೇವಣಸಿದ್ಧನು ಕಲ್ಯಾಣ ಚಾಳುಕ್ಯ ವಿಕ್ರಮಾದಿತ್ಯ, ಮೂರನೆಯ ಸೋಮೇಶ್ವರ, ಕಲಚೂರಿ ತೈಲಪ ಬಿಜ್ಜಳನ ಕಾಲದವರೆಗೆ ಬಾಳಿದ್ದರು ಎಂದು ಶಾಸನ ಮತ್ತು ಪುರಾಣಗಳ ಹಿನ್ನೆಲೆಯಲ್ಲಿ ಹೇಳುತ್ತಾರೆ. ಅಂದರೆ ವಿಕ್ರಮಾದಿತ್ಯನ ಕ್ರಿ.ಶ.1008ರಿಂದ ಬಿಜ್ಜಳನ ಕ್ರಿ.ಶ.1167ರವರೆಗೆ ಎಂದುಕೊಂಡರೂ 159 ವರ್ಷ ಬದುಕಿದ್ದರು ಎಂದಾಗುತ್ತದೆ!!

ಅಂದರೆ ನಿಸ್ಸಂಶಯವಾಗಿ ವಿಕ್ರಮಾದಿತ್ಯನ ಕಾಲದ ರೇವಣರೇ ಬೇರೆ, ಬಿಜ್ಜಳನ ಕಾಲದ ರೇವಣರೇ ಬೇರೆ! ಹಾಗಾಗಿಯೇ ನಾನು ನಾಲ್ಕು ರೇವಣಸಿದ್ಧರಿದ್ದಾರೆ ಎಂದದ್ದು. ಇದಕ್ಕೆ ಜಾನಪದದಲ್ಲಿ ಸಾಕ್ಷಿ ಇದೆ. ಅಲ್ಲದೆ ರೇವಣಸಿದ್ಧರು ಕುರುಬರು ಎನ್ನುವವರ ವಾದದಲ್ಲಿಯೇ ಸಾಕ್ಷ್ಯ ಇದೆ. ಆದರೆ ಅದೆಲ್ಲವೂ ರೇವಣಸಿದ್ಧರು ಕುರುಬರು ಎಂಬ ವಾದವನ್ನು ಲವಲೇಶದಷ್ಟೂ ಸಾಬೀತು ಮಾಡುವುದಿಲ್ಲ.

ಮುಂದಿನ ಭಾಗದಲ್ಲಿ ಸಿರಿವಾಳ ಶಾಸನದ ಬಗ್ಗೆ ನೋಡೋಣ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue:115

ಸಮಾಚಾರ ಸಣ್ಣದಲ್ಲ

ಪಾಕ್‌ನ ಸುನ್ನಿ ಮುಸ್ಲಿಂ ಯುಎಇ ಗಡಿಪಾರು

ಅಬುಧಾಬಿ: ಇರಾನ್‌ಗೆ ಬೆಂಬಲ ನೀಡುತ್ತಿದ್ದ ಪಾಕಿಸ್ತಾನದ ವಿರುದ್ಧ ಸಿಟ್ಟಿಗೆದ್ದ ಯುನೈಟೆಡ್ ಅರಬ್ ಎಮಿರೇಟ್ಸ್, ತಾನು ಸಾಲವಾಗಿ ನೀಡಿದ್ದ 350 ಕೋಟಿ ಡಾಲರ್ ಸಾಲವನ್ನು ಪಟ್ಟು ಹಿಡಿದು ವಸೂಲಿ ಮಾಡಿತ್ತು. ಆ ಮೂಲಕ ಪಾಕ್ ಮೇಲಿನ ಸಿಟ್ಟನ್ನು ತೀರಿಸಿಕೊಂಡಿತ್ತು. ಈಗ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಅಬುಧಾಬಿ ಸೇರಿದಂತೆ 'ಯುಎಇ'ಯ ವಿವಿಧ ನಗರಗಳಲ್ಲಿ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವ ಪಾಕಿಸ್ತಾನ ಮೂಲದ ಸುನ್ನಿ ಪಂಗಡದ ಮುಸ್ಲಿಮರನ್ನೆಲ್ಲಾ ಹುಡುಕಿ ಗಡಿಪಾರು ಮಾಡಲು ಆರಂಭಿಸಿದೆ. ಯುಎಇ ಆಡಳಿತದ ಈ ಕಠಿಣ ಕ್ರಮದಿಂದಾಗಿ ದೇಶದ ವಿವಿಧೆಡೆ ನೆಲೆಸಿದದ 20 ಲಕ್ಷ ಪಾಕಿಸ್ತಾನಿ ಸುನ್ನಿ ಮುಸ್ಲಿಮರು ದೇಶ ತೊರೆಯಬೇಕಾಗಿ ಬಂದಿದೆ.

ವಿಜಯ್‌ಗೆ ತೆಲಂಗಾಣ ಸಿಎಂ ಅಭಿನಂದನೆ

ಹೈದರಾಬಾದ್: ತೆಲಂಗಾಣದ ಕಾಂಗ್ರೆಸ್ ಸರಕಾರದ ಮುಖ್ಯಮಂತ್ರಿ ಎ.ರೇವಂತ್ ರೆಡ್ಡಿ ಅವರು ತಮಿಳುನಾಡಿನ ನೂತನ ಟಿವಿಕೆ ಸರಕಾರದ ಮುಖ್ಯಮಂತ್ರಿ ಸಿ.ಜೋಸೆಫ್ ವಿಜಯ್ ಅವರಿಗೆ ಅಭಿನಂದನೆ ಸಲ್ಲಿಸಿದ್ದಾರೆ. 'ಆತ್ಮೀಯ ಶ್ರೀ ವಿಜಯ್, ರಾಹುಲ್ ಗಾಂಧಿ ಅವರ ಉಪಸ್ಥಿತಿಯಲ್ಲಿ ತಮಿಳುನಾಡು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ನಿಮಗೆ ಹೃತ್ಪೂರ್ವಕ ಅಭಿನಂದನೆಗಳು' ಎಂದು ಶುಭಕೋರಿದ್ದಾರೆ.

ಸೋಭಾಂದೇಬ್ ಪ.ಬಂ. ಪ್ರತಿಪಕ್ಷ ನಾಯಕ

ಪಶ್ಚಿಮ ಬಂಗಾಳ: ಬಲ್ಲಿಗುಂಜ್ ಕ್ಷೇತ್ರದ ಶಾಸಕ ತೃಣಮೂಲ ಕಾಂಗ್ರೆಸ್‌ನ(ಟಿಎಂಸಿ) ಸೋಭಾಂದೇಬ್ ಚಟ್ಟೋಪಾಧ್ಯಾಯ ಪಶ್ಚಿಮ ಬಂಗಾಳ ವಿಧಾನಸಭೆಯಲ್ಲಿ ಪ್ರತಿಪಕ್ಷ ನಾಯಕರಾಗಿ ಪಕ್ಷದಿಂದ ನೇಮಕಗೊಂಡಿದ್ದಾರೆ. ಅಷ್ಟೇ ಅಲ್ಲದೇ, ಧನೇಖಾಲಿ ಕ್ಷೇತ್ರದ ಶಾಸಕ ಅಸಿಮಾ ಪತ್ರ ಮತ್ತು ಚೌರಂಗಿ ಕ್ಷೇತ್ರದ ಶಾಸಕಿ ನೈನಾ ಬಂಡೋಪಾಧ್ಯಾ ಯರನ್ನು ಪ್ರತಿಪಕ್ಷ ಉಪ ನಾಯಕರಾಗಿ ನೇಮಿಸ ಲಾಗಿದೆ. ಕೊಲ್ಕತ್ತಾ ಪೋರ್ಟ್ ಕ್ಷೇತ್ರದ ಪ್ರತಿನಿಧಿ ಫಿರ್ಹದ್ ಹಕಿಮ್‌ರನ್ನು ವಿಧಾನಸಭೆಯಲ್ಲಿ ಟಿಎಂಸಿ ಪಕ್ಷದ ಮುಖ್ಯ ಸಚೇತಕರಾಗಿ ಶನಿವಾರ ಸಂಜೆ ನೇಮಕ ಮಾಡಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾ ಗಿದೆ. ಹಕೀಂ ಕೋಲ್ಕತ್ತ ಮುನಿಸಿಪಲ್ ಕಾರ್ಪೊ ರೇಶನ್ ಮೇಯರ್ ಆಗಿಯೂ ಕಾರ್ಯನಿರ್ವಹಿ ಸುತ್ತಿದ್ದಾರೆ. ಹೊಸದಾಗಿ ನೇಮಕಗೊಂಡ ನಾಯ ಕರು ಪಶ್ಚಿಮ ಬಂಗಾಳದ ಜನರ ಹಿತಕ್ಕಾಗಿ ಬದ್ಧತೆಯಿಂದ ಕೆಲಸ ಮಾಡುತ್ತಾರೆ ಎಂದು ಟಿಎಂಸಿ ತಿಳಿಸಿದೆ.

14-15ಕ್ಕೆ ಇಸ್ರೇಲ್, ಲೆಬನಾನ್ ಮಾತುಕತೆ

ವಾಷಿಂಗ್ಟನ್: ಇಸ್ರೇಲ್ ಮತ್ತು ಲೆಬನಾನ್ ನಡುವೆ ಮುಂದಿನ ಸುತ್ತಿನ ಮಾತುಕತೆ ಮೇ 14-15ರಂದು ನಡೆಯಲಿವೆ. ಈ ಬಾರಿಯ ಮಾತುಕತೆ ಗಡಿ ಭದ್ರತೆ, ಕದನ ವಿರಾಮ ಪಾಲನೆ, ಪ್ರಾದೇಶಿಕ ಸ್ಥಿರತೆ ಹಾಗೂ ಶಸ್ತ್ರಸಜ್ಜಿತ ಸಂಘಟನೆಗಳ ಚಟುವಟಿಕೆ ಕುರಿತಾಗಿರಲಿವೆ. ಹಲವು ಸೂಕ್ಷ್ಮ ವಿಷಯಗಳ ಬಗೆಗೂ ಚರ್ಚೆಯಾಗಲಿದೆ ಎಂದು ಅಮೆರಿಕದ ವಿದೇಶಾಂಗ ಇಲಾಖೆ ತಿಳಿಸಿದೆ. ಇಸ್ರೇಲ್-ಲೆಬ ನಾನ್ ನಡುವೆ ಯುದ್ಧ ವಿಸ್ತರಿಸದಂತೆ ತಡೆಯಲು ಅಮೆರಿಕ ರಾಜತಾಂತ್ರಿಕ ಮಟ್ಟದಲ್ಲಿ ಸಕ್ರಿಯವಾಗಿ ಮಧ್ಯವರ್ತಿ ಕೆಲಸ ಮಾಡುತ್ತಿದೆ. ದೇಶದ ಭದ್ರತೆಗೆ ಮತ್ತೇನಾದರೂ ಧಕ್ಕೆಯಾದ 'ರೆ ಲೆಬನಾನ್ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಇಸ್ರೇಲ್ ಎಚ್ಚರಿಕೆ ನೀಡಿದೆ. ಪ್ರತಿಯಾಗಿ ಲೆಬನಾನ್ ಕೂಡಾ, ಗಡಿ ಮತ್ತು ಪ್ರಭುತ್ವದ ರಕ್ಷಣೆಗೆ ಬದ್ಧವಾಗಿರುವುದಾಗಿ ಹೇಳಿಕೊಂಡಿದೆ.

ದಂಪತಿ ಕೊಲೆ: ಮೂರು ಭಾರತೀಯರು ದೋಷಿ

ಅಬಾಟ್ಸ್‌ಫೋರ್ಡ್: ಕೆನಡಾ ದೇಶದ ಅಬಾಟ್ಸ್‌ಫೋರ್ಡ್ ನಗರದಲ್ಲಿ 2022ರಲ್ಲಿ ಅರ್ನಾಲ್ಡ್ ಮತ್ತು ಜೋವಾನ್ನೆ ಡಿ.ಜೊಂಗ್ ದಂಪತಿ ಕೊಲೆಯಾಗಿತ್ತು. ಆ ಅಪರಾಧ ಪ್ರಕರಣದಲ್ಲಿ ಭಾರತದ ಪಂಜಾಬ್ ಮೂಲದ ಗುರ್‌ಕರಣ್ ಸಿಂಗ್, ಅಭಿಜಿತ್ ಸಿಂಗ್, ಖುಷ್‌ವೀರ್ ತೂರ್ ಎಂಬವರನ್ನು ಬಂಧಿಸಿ ಜೋಡಿ ಕೊಲೆ ದೋಷಾರೋಪ ಹೊರಿಸಿ ವಿಚಾರಣೆಗೆ ಒಳಪಡಿಸಲಾಗಿತ್ತು. ದಂಪತಿ ಮನೆಯಲ್ಲಿ ಹೌಸ್‌ಕೀಪಿಂಗ್ (ಮನೆ ಸ್ವಚ್ಛತೆ) ಕೆಲಸಕ್ಕೆ ತೆರಳಿದ್ದ ಮೂವರೂ ಹಂತಕರು, ಹಣ, ಒಡವೆ ದೋಚುವ ಸಲುವಾಗಿಯೇ ಮೂವರೂ ಸಂಚು ಹೂಡಿ ದಂಪತಿಯನ್ನು ಕಟ್ಟಿಹಾಕಿ ಬರ್ಬರವಾಗಿ ಕೊಂದಿದ್ದಾರೆ ಎಂದು ಆರೋಪಿಸಲಾಗಿತ್ತು. ಮೂವರನ್ನೂ ದೋಷಿಗಳು ಎಂದು ತೀರ್ಪು ನೀಡಿದೆ.

{ಅಸಿಮ್ ಮುನೀರ್ } ಪಾಕ್ ಫೀಲ್ಡ್ ಮಾರ್ಷಲ್

2025ರ ಮೇ 7ರ ನಸುಕಿನಿಂದ 10ರ ಸಂಜೆವರೆಗೂ ಪಾಕಿಸ್ತಾನದ ಸಾರ್ವಭೌಮತ್ವ-ಗಡಿ ಪ್ರದೇಶದ ಮೇಲೆ ಭಾರತ ಹಸ್ತಕ್ಷೇಪ ಮಾಡಿದೆ. ಪಾಕ್ ಪೂರ್ಣ ರಾಷ್ಟ್ರೀಯ ಏಕತೆ ಮತ್ತು ಸೇನಾಬಲ ಪ್ರಯೋಗಿಸಿ ಪ್ರತಿಕ್ರಿಯಿಸಿದೆ. ಇದು 'ಎರಡು ಭಿನ್ನ ಸಿದ್ಧಾಂತಗಳ ನಡುವಿನ ಯುದ್ಧ'. ಈ ಸಂಘರ್ಷದಲ್ಲಿ ಪಾಕ್ ತಂತ್ರಗಾರಿಕೆ ಭಾರತಕ್ಕಿಂತ ಶ್ರೇಷ್ಠವಾಗಿತ್ತು.

10 ಸದಸ್ಯರ ಸಂಪುಟದಲ್ಲಿ ಒಬ್ಬರೇ ವನಿತೆ, ಸಂಪುಟದಲ್ಲೇ ಅತಿ ಕಿರಿಯರು। ಟಿವಿಕೆ ಪ್ರ.ಕಾರ್ಯದರ್ಶಿ, ಖಜಾಂಚಿ, ಎಐಎಡಿಎಂಕೆ ಮಾಜಿ ನಾಯಕಗೆ ಸ್ಥಾನ

ಸಿಎಂ ವಿಜಯ್ ಸಚಿವ ಸಂಪುಟಕ್ಕೆ ಮಾಜಿ ಐಆರ್‌ಎಸ್ ಅಧಿಕಾರಿ, ಇಬ್ಬರು ವೈದ್ಯರು





ಚೆನ್ನೈ: ಖ್ಯಾತ ತಮಿಳು ಚಿತ್ರನಟ-ತಮಿಳಗ ವೆಟ್ರಿ ಕಳಗಂ(ಟಿವಿಕೆ) ಪಕ್ಷದ ಸಂಸ್ಥಾಪಕ ಸಿ.ಜೋಸೆಫ್ ವಿಜಯ್, ಭಾನುವಾರ ಬೆಳಗ್ಗೆ ತಮಿಳುನಾಡು ರಾಜ್ಯದ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ.

ಅವರ ಜತೆಗೇ ಟಿವಿಕೆ ಪಕ್ಷದ 9 ಮಂದಿಯೂ ಸಚಿವರುಗಳಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ವಿಜಯ್ ಸೇರಿದಂತೆ ನೂತನ ಸಚಿವ ಸಂಪುಟದ ಗಾತ್ರ ಸದ್ಯ 10ರಷ್ಟಿದೆ. ವಿಜಯ್ ಮೊದಲ ಸಂಪುಟದ 9 ಸದಸ್ಯರಲ್ಲಿ ಒಬ್ಬ ಮಹಿಳೆಗಷ್ಟೇ ಸ್ಥಾನ ಸಿಕ್ಕಿದೆ. ಉಳಿದಂತೆ 9 ಸಚಿವರಲ್ಲಿ ಇಬ್ಬರು ವೈದ್ಯರಿದ್ದಾರೆ. ಅವರಲ್ಲಿ ಒಬ್ಬರಾದ ಡಾ.ಕೆ.ಜಿ.ಅರುಣ್‌ರಾಜ್ ಎಂಬಿಬಿಎಸ್ ಪದವೀಧರರಾಗಿದ್ದರೆ, ಮತ್ತೊಬ್ಬರು ಡಾ. ಟಿ.ಕೆ.ಪ್ರಭು, ದಂತವೈದ್ಯರು, ಟಿವಿಕೆ ಪಕ್ಷದ ಪ್ರಮುಖ ನಾಯಕರಲ್ಲೊಬ್ಬರು. ಡಾ.ಪ್ರಭು, ಬಿಡಿಎಸ್, ಎಂಎಸ್‌ಸಿ ಡಿ, ಎಂಎಸ್‌ಸಿ, ಐಸಿಡಿಐ, ಎಫ್‌ಐಸಿಒಐ ವ್ಯಾಸಂಗ ಮಾಡಿದ್ದಾರೆ. ಕಾರೈಕುಡಿ ಕ್ಷೇತ್ರದಿಂದ ಗೆದ್ದುಬಂದಿದ್ದಾರೆ.

ಇಲ್ಲಿ ಇನ್ನೊಂದು ಗಮನಾರ್ಹ ಸಂಗತಿಯೆಂದರೆ, ಡಾ.ಕೆ.ಜಿ. ಅರುಣ್ ರಾಜ್, ಮಾಜಿ ಐಆರ್‌ಎಸ್ ಅಧಿಕಾರಿ. ತಿರುಚೆಂಗೋಡ್ ಕ್ಷೇತ್ರದಿಂದ ಗೆದ್ದು ಬಂದಿದ್ದಾರೆ. ಬ್ರಾಹ್ಮಣ ಸಮುದಾಯದ ಪಿ.ವೆಂಕಟರಮಣನ್ ಎಂಬಿಎ ಪದವೀಧರ, ಜತೆಗೆ ಎಂಕಾಂ, ಎಂಎಲ್ ಕೂಡಾ ವ್ಯಾಸಂಗ ಮಾಡಿದ್ದಾರೆ. ಇವರು ಸಿಎಂ ವಿಜಯ್‌ಗೆ ಅತ್ಯಾಪ್ತರು. ಟಿವಿಕೆ ಪಕ್ಷದ ಖಜಾಂಚಿಯೂ ಆಗಿದ್ದಾರೆ. ಸದ್ಯ ಚೆನ್ನೈನ ಮೈಲಾಪುರ ವಿಧಾನಸಭಾ ಕ್ಷೇತ್ರದಲ್ಲಿ ಗೆದ್ದಿದ್ದಾರೆ. ಸಚಿವೆಯಾಗಿರುವ ಎಸ್.ಕೀರ್ತನಾ ಎಂಎಸ್‌ಸಿ ಪದವೀಧರೆ ಆಗಿದ್ದಾರೆ. ವಿರುಧು ನಗರ ಜಿಲ್ಲೆಯ ಶಿವಕಾಶಿ ವಿಧಾನಸಭಾ ಕ್ಷೇತ್ರದಲ್ಲಿ ಗೆದ್ದಿದ್ದಾರೆ. 29 ವರ್ಷದ ಕೀರ್ತನಾ, 10 ಸದಸ್ಯರ ಸಚಿವ ಸಂಪುಟದಲ್ಲಿ ಎಲ್ಲರಿಗಿಂತ ಕಿರಿಯರು. ಈ ಹಿಂದೆ ಡಿಎಂಕೆ ನಾಯಕ ಸ್ಟಾಲಿನ್ ಸಿಎಂ ಆಗಿದ್ದಾಗ ಅವರಿಗೆ ರಾಜಕೀಯ ಸಲಹೆಗಾರ್ತಿಯಾಗಿದ್ದರು. ತಮಿಳು ಮಾಧ್ಯಮದಲ್ಲಿ ಶಾಲಾ ವ್ಯಾಸಂಗ ಮಾಡಿರುವ ಕೀರ್ತನಾ, ಚುನಾವಣೆ ಗೆದ್ದ ಬಳಿಕ ರಾಷ್ಟ್ರೀಯ ನಾಯಕರ ಗಮನ ಸೆಳೆಯಲು ಹಿಂದಿಯಲ್ಲಿ ಭಾಷಣ ಮಾಡಿದ್ದರು. ಉಳಿದ ಸಚಿವರುಗಳ ಶೈಕ್ಷಣಿಕ ಅರ್ಹತೆ ಇನ್ನಷ್ಟೇ ತಿಳಿದುಬರಬೇಕಿದೆ.

ಸಚಿವ ಸಂಪುಟ ಸೇರಿರುವ 9 ಶಾಸಕರಲ್ಲಿ ಎನ್. ಆನಂದ್ ಅಲಿಯಾಸ್ 'ಬ್ಯುಸಿ' ಆನಂದ್ ನೂತನ ಸಿಎಂ ಜೋಸೆಫ್ ವಿಜಯ್‌ಗೆ ಬಹಳ ಅತ್ಯಾಪ್ತರು. ಅಲ್ಲದೇ, ಟಿವಿಕೆ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿದ್ದಾರೆ. ಚೆನ್ನೈನ ಟಿ.ನಗರ ಕ್ಷೇತ್ರದಲ್ಲಿ ಗೆದ್ದಿದ್ದಾರೆ. ಬೂತ್ ಮಟ್ಟದಲ್ಲಿ ಪಕ್ಷ ಕಟ್ಟಿಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

ನೂತನ ಸಚಿವ ಕೆ.ಎ.ಸೆಂಗೊಟ್ಟಯ್ಯನ್ ಅನುಭವಿ ರಾಜಕಾರಣಿ, ಈ ಹಿಂದೆ ಎಐಎಡಿಎಂಕೆ ಪಕ್ಷದಲ್ಲಿದ್ದರು. ಮುಖ್ಯಮಂತ್ರಿಗಳಾಗಿದ್ದ ಎಂಜಿ ರಾಮಚಂದ್ರನ್ ಮತ್ತು ಜಯಲಲಿತಾ ಅವರೊಂದಿಗೆ ದಶಕಗಳ ಕಾಲ ಕೆಲಸ ಮಾಡಿದ ಅನುಭವಿ ಆಡಳಿತಗಾರ ಎನಿಸಿಕೊಂಡಿದ್ದಾರೆ. ಈ ಅಂಶ ವಿಜಯ್ ಅವರ ಹೊಸ ಸರಕಾರದ ನೆರವಿಗೆ ಬರಲಿದೆ ಎನ್ನಲಾಗಿದೆ. ಎಡಪ್ಪಾಡಿ ಪಳನಿಸ್ವಾಮಿ ನಾಯಕತ್ವವನ್ನು ಬಹಿರಂಗವಾಗಿ ಟೀಕಿಸಿದ ಬಳಿಕ ಎಐಎಡಿಎಂಕೆ ಪಕ್ಷದಿಂದ ಸೆಂಗೊಟ್ಟಯ್ಯನ್ ಅವರನ್ನು ಹೊರಹಾಕಲಾಗಿತ್ತು. ಆಧವ್ ಅರ್ಜುನ್(ಎ.ಅರ್ಜುನ್) ಟಿವಿಕೆ ಪಕ್ಷದ ಪ್ರಮುಖ ನಾಯಕ. ಸಿಎಂ ವಿಜಯ್ ಅವರ ಅತ್ಯಾಪ್ತ. ಟಿವಿಕೆ ಪಕ್ಷದ ಸಂಘಟನೆ ಮತ್ತು ಯೋಜನೆಗಳಲ್ಲಿ ಪ್ರಮುಖ ಪಾತ್ರ ವಹಿಸಿದವರು. ಚೆನ್ನೈನ ವಿಲ್ಲಿವಕ್ಕಂ ಕ್ಷೇತ್ರದಲ್ಲಿ ಗೆದ್ದು ಶಾಸಕರಾಗಿದ್ದಾರೆ. ಲಾಟರಿ ಉದ್ಯಮಿ ಸ್ಯಾಂಟಿಯಾಗೊ ಮಾರ್ಟಿನ್ ಅವರ ಅಳಿಯ ಅರ್ಜುನ್. ಆರ್.ನಿರ್ಮಲ್ ಕುಮಾರ್ ಬಿಜೆಪಿ ಪಕ್ಷದ ಮಾಜಿ ಕಾರ್ಯಕರ್ತ. ಈಗ ಟಿವಿಕೆಯ ಪ್ರಮುಖ ನಾಯಕ. ಪಕ್ಷದ ಮಾಹಿತಿ ತಂತ್ರಜ್ಞಾನ ಮತ್ತು ಸಾಮಾಜಿಕ ಮಾಧ್ಯಮ ವಿಭಾಗದಲ್ಲಿ ಉಪ ಪ್ರಧಾನ ಕಾರ್ಯದರ್ಶಿ ಯಾಗಿದ್ದಾರೆ. ಮಧುರೈನ ತಿರುಪರಂಕುಂದ್ರಂ ಕ್ಷೇತ್ರದಿಂದ ಟಿವಿಕೆ ಪಕ್ಷದಿಂದ ಗೆಲುವು ಸಾಧಿಸಿದ್ದಾರೆ.

ರಾಜಮೋಹನ್, ನಟ ಮತ್ತು ಪ್ರೇರಣಾದಾಯಕ ಭಾಷಣಕಾರರಾಗಿದ್ದಾರೆ. ವಾಕ್ಚಾತುರ್ಯದ ಕಾರಣಕ್ಕೆ ಜನಪ್ರಿಯರಾಗಿದ್ದಾರೆ.

ಸಚಿವ ಸಿ.ಟಿ.ಆರ್.ನಿರ್ಮಲ್ ಕುಮಾರ್	ವಿದ್ಯುತ್
ಸಚಿವ ಅಧವ್ ಅರ್ಜುನ	ಕ್ರೀಡೆ
ಸಚಿವ ರಾಜಮೋಹನ್	ಆದಿ ದ್ರಾವಿಡರ್ ಕಲ್ಯಾಣ ಇಲಾಖೆ
ಸಚಿವ ಅರುಣ್ ರಾಜ್	ನೋಂದಣಿ ಮತ್ತು ವಾಣಿಜ್ಯ ತೆರಿಗೆ ಇಲಾಖೆ
ಸಚಿವ ಸೆಂಗೊಟ್ಟೆಯನ್	ಲೋಕೋಪಯೋಗಿ ಇಲಾಖೆ
ಸಚಿವ ಆನಂದ್	ಪೌರಾಡಳಿತ ಇಲಾಖೆ
ಸಚಿವ ವೆಂಕಟ್ರಮಣನ್	ಶಾಲಾ ಶಿಕ್ಷಣ ಇಲಾಖೆ

9 ಸಚಿವರಿಗೆ ಖಾತೆ ಹಂಚಿಕೆ

ಮುಖ್ಯಮಂತ್ರಿ ಸಿ.ಜೋಸೆಫ್ ವಿಜಯ್ ಪ್ರಮಾಣ ವಚನ ಸ್ವೀಕಾರ ಬಳಿಕ ಟಿವಿಕೆ ಪಕ್ಷದ 9 ಹಿರಿಯ-ಕಿರಿಯ ಶಾಸಕರು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು. ಅವರಲ್ಲಿ ಪ್ರಮುಖರೆಂದರೆ ಆನಂದ್, ಅಧವ್ ಅರ್ಜುನ, ಅರುಣ್ ರಾಜ್, ಸೆಂಗೊಟ್ಟಯ್ಯನ್, ವೆಂಕಟರಮಣನ್, ನಿರ್ಮಲ್ ಕುಮಾರ್, ರಾಜಮೋಹನ್ ಅವರಿಗೆ ಖಾತೆಗಳ ಹಂಚಿಕೆ ಆಗಿದೆ. ಪ್ರಭು ಮತ್ತು ಕೀರ್ತನಾ ಅವರಿಗೆ ಯಾವ ಖಾತೆ ಸಿಗಲಿದೆ ಎಂಬುದು ಸದ್ಯದಲ್ಲೇ ತಿಳಿಯಲಿದೆ.

ಸೆಂಗೊಟ್ಟಯ್ಯನ್ ಪ್ರಮಾಣ ವೇಳೆ ಎದ್ದುನಿಂತ ವಿಜಯ್

ಟಿವಿಕೆ ಪಕ್ಷದ ಶಾಸಕರುಗಳಲ್ಲೇ ಹಿರಿಯರಾದ ಸೆಂಗೊಟ್ಟಯ್ಯನ್ ಅವರು ವೇದಿಕೆಗೆ ಬಂದು ಪ್ರಮಾಣ ವಚನ ಸ್ವೀಕರಿಸುವ ವೇಳೆ ಸಿಎಂ ಜೋಸೆಫ್ ವಿಜಯ್ ಕುರ್ಚಿಯಿಂದ ಮೇಲೆದ್ದು ನಿಂತು ಕರತಾಡನ ಮಾಡಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಎಐಎಡಿಎಂಕೆ ಪಕ್ಷದ ಮಾಜಿ ಸಚಿವ ಮತ್ತು ಉಚ್ಚಾಟಿತ ನಾಯಕ ಕೆ. ಎಸೆಂಗೊಟ್ಟಯ್ಯನ್ ಅವರು ವಿಜಯ್ ಅವರ ಟಿವಿಕೆ ಸೇರಿ ಪಕ್ಷದ ಗೆಲುವಿಗಾಗಿ ಬಹಳವಾಗಿ ಶ್ರಮಿಸಿದ್ದಾರೆ. ದಶಕಗಳ ಕಾಲದ ತಮ್ಮ ಚುನಾವಣಾ ರಾಜಕೀಯದ ಅನುಭವವನ್ನು ಧಾರೆ ಎರೆದಿದ್ದಾರೆ. ಆ ಕಾರಣಕ್ಕಾಗಿ ಸಿಎಂ ವಿಜಯ್, ಹಿರಿಯ ನಾಯಕನಿಗೆ ಎದ್ದು ನಿಂತು ಗೌರವ ಸಲ್ಲಿಸಿದ್ದಾರೆ ಎನ್ನಲಾಗಿದೆ.

ಸಂಪುಟ ಸೇರದ ಕಾಂಗ್ರೆಸ್ ವಿಜಯ್-ರಾಹುಲ್ ಸೆಲ್ಫಿ

ಲೋಕಭವನ ಬಿಡುಗಡೆ ಮಾಡಿದ ಪ್ರಕಟಣೆ ಪ್ರಕಾರ ಸಿಎಂ ಸಿ.ಜೋಸೆಫ್ ವಿಜಯ್ ನೇತೃತ್ವದ ಸಚಿವ ಸಂಪುಟಕ್ಕೆ ಕಾಂಗ್ರೆಸ್‌ನ ಯಾವುದೇ ಶಾಸಕರು ಸೇರ್ಪಡೆಯಾಗಿಲ್ಲ. ಸರಕಾರ ರಚನೆಗೆ ಬೇಕಿದ್ದ ಬಹುಮತಕ್ಕಾಗಿ ಕಾಂಗ್ರೆಸ್ ಐವರು ಶಾಸಕರು ಬೆಂಬಲ ನೀಡಿದ್ದಾರೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಸಿಎಂ ಆಗಿ ಜೋಸೆಫ್ ವಿಜಯ್ ಪ್ರಮಾಣ ವಚನ ಸ್ವೀಕರಿಸುವ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ವಿಜಯ್ ಜತೆಗೆ ಸೆಲ್ಫಿ ಕೂಡಾ ತೆಗೆಸಿಕೊಂಡರು. ಪ್ರಮಾಣವಚನ ಸ್ವೀಕಾರದ ನಂತರ ವಿಜಯ್ ಅವರನ್ನು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅಭಿನಂದಿಸಿದರು. ಬಳಿಕ ನಟ ವಿಜಯ್ ತಮ್ಮ ಫೋನ್ ತೆಗೆದು ರಾಹುಲ್ ಗಾಂಧಿ ಜತೆ ಸೆಲ್ಫಿ ತೆಗೆದುಕೊಂಡರು. ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಹಾಜರಿದ್ದ ಜನಸಮೂಹದ 360-ಡಿಗ್ರಿ ವಿಡಿಯೊ ರೆಕಾರ್ಡ್ ಕೂಡಾ ಮಾಡಿಕೊಂಡರು.

ವಿಜಯ್ ಪ್ರಮಾಣ ವಚನದಲ್ಲಿ ಚಿತ್ರನಟಿ ತ್ರಿಶಾ ಕೃಷ್ಣನ್ ಮಿಂಚು



ಚೆನ್ನೈ: ತಮಿಳಿಗ ವೆಟ್ರಿ ಕಳಗಂ(ಟಿವಿಕೆ) ಪಕ್ಷದ ಮುಖ್ಯಸ್ಥ ಸಿ.ಜೋಸೆಫ್ ವಿಜಯ್ ಅವರು ತಮಿಳುನಾಡು ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕಾರ ಮಾಡುವ ಸಮಾರಂಭಕ್ಕೆ ಅವರ ಗೆಳತಿ-ನಟಿ ತ್ರಿಶಾ ಕೃಷ್ಣನ್ ಭಾನುವಾರ ಬೆಳಗ್ಗೆ ಚೆನ್ನೈನ ಜವಾಹರಲಾಲ್ ನೆಹರೂ ಕ್ರೀಡಾಂಗಣಕ್ಕೆ ಆಗಮಿಸಿದಾಗ ಎಲ್ಲರ ಕಣ್ಣುಗಳೂ ಮತ್ತು ಕ್ಯಾಮೆರಾಗಳು ಅವರ ಮೇಲೆಯೇ ಕೇಂದ್ರೀಕೃತವಾದವು.

- **ಐಸ್-ಬ್ಲೂ ಕಾಂಜೀವರಂ ಸೀರೆ ಧರಿಸಿ, ಮಲ್ಲಿಗೆ ಮುಡಿದು ನಗುತ್ತಾ ಬಂದ ಖ್ಯಾತನಟಿ**

ಮದುವೆ ಸಮಾರಂಭಕ್ಕೆ ಬರುವಂತೆ, ಹಿಮನೀಲಿ ಬಣ್ಣದ ರೇಷ್ಮೆ ಸೀರೆ ಮತ್ತು ವಜ್ರಾಭರಣ ಧರಿಸಿ ಮಲ್ಲಿಗೆ ಮುಡಿದು ನಗುತ್ತಾ ನಿಧಾನವಾಗಿ ಹೆಜ್ಜೆ ಹಾಕುತ್ತಾ ಬಂದ ತ್ರಿಶಾ ಅವರು ಬಲು ಆಕರ್ಷಕವಾಗಿ ಕಾಣಿಸಿಕೊಂಡರು. ಅವರ ತಾಯಿ ಉಮಾ ಕೃಷ್ಣನ್ ಜತೆಗಿದ್ದರು.

ಚುನಾವಣೆ ಫಲಿತಾಂಶ ಪ್ರಕಟವಾದ ದಿನ(ಮೇ 4) ತ್ರಿಶಾ ಜನ್ಮದಿನ. ತಿರುಪತಿ ದೇವಸ್ಥಾನಕ್ಕೆ ಭೇಟಿ ನೀಡಿದ ತ್ರಿಶಾ, ಗೆಳೆಯ ವಿಜಯ್ ಚುನಾವಣಾ ಗೆಲುವಿಗಾಗಿಯೂ ಪ್ರಾರ್ಥಿಸಿದ್ದರು. ದೇವರ ದರ್ಶನ ನಂತರ ಪ್ರಸಾದದ ಸಮೇತ ದೇಗುಲದಿಂದ ನೇರವಾಗಿ ವಿಜಯ್ ಅವರ ಮನೆಗೆ ಭೇಟಿ ನೀಡಿದ್ದು ದೊಡ್ಡ ಸುದ್ದಿಯಾಗಿತ್ತು. ಈಗ ಪ್ರಮಾಣವಚನ ಸಮಾರಂಭದಲ್ಲಿಯೂ ಹಾಜರಾಗಿ ಜನರ ಗಮನ ಸೆಳೆದಿದ್ದಾರೆ.

ವಂದೇ ಮಾತರಂ ಎಂದ ನೂತನ ಸಿಎಂ

ಚೆನ್ನೈ: ತಮಿಳುನಾಡಿನ ನೂತನ ಮುಖ್ಯಮಂತ್ರಿಯಾಗಿ ಭಾನುವಾರ ಬೆಳಗ್ಗೆ ಪ್ರಮಾಣವಚನ ಸ್ವೀಕರಿಸಿದ ನಟ, ಸಿ. ಜೋಸೆಫ್ ವಿಜಯ್, ಸಮಾರಂಭದಲ್ಲಿ ರಾಷ್ಟ್ರೀಯ ಗೀತೆಯ ಪೂರ್ಣ ಆರೂ ಚರಣಗಳನ್ನು ಹಾಡುವ ಮೂಲಕ ಅಚ್ಚರಿಗೆ ಕಾರಣವಾದರು. ಆ ಮೂಲಕ ಪಶ್ಚಿಮ ಬಂಗಾಳದಲ್ಲಿನ ಬಿಜೆಪಿ ಸರಕಾರ ರಚನೆ ಕಾರ್ಯಕ್ರಮವನ್ನೇ ಹಿಂದೆ ಹಾಕಿದರು. ಸುವೇಂದು ಅಧಿಕಾರಿ ಪಶ್ಚಿಮ ಬಂಗಾಳ ಸಿಎಂ ಆಗಿ ಪ್ರಮಾಣ ವಚನ ಸ್ವೀಕರಿಸಿದ ಕಾರ್ಯಕ್ರಮದಲ್ಲಿ ವಂದೇ ಮಾತರಂ ಗೀತೆಯ ಆರೂ ಚರಣಗಳನ್ನು ಪೂರ್ಣವಾಗಿ ಹಾಡಿರಲಿಲ್ಲ. ಕೇಂದ್ರದ ಗೃಹ ಸಚಿವಾಲಯ ಇತ್ತೀಚೆಗಷ್ಟೇ ವಂದೇ ಮಾತರಂ ರಾಷ್ಟ್ರೀಯ ಗೀತೆಯಾಗಿದೆ. ಅದು ರಾಷ್ಟ್ರಗೀತೆ ಜನ ಗಣ ಮನಕ್ಕೆ ಸಮಾನ. ಹಾಗಾಗಿ ವಂದೇಮಾತರಂ ಗೀತೆಯ ಎಲ್ಲಾ ಆರೂ ಚರಣಗಳನ್ನು ಹಾಡುವುದು ಕಡ್ಡಾಯ ಎಂದು ಅಧಿಸೂಚನೆ ಹೊರಡಿಸಿತ್ತು. ಈ ನಿಯಮ ಸಿಎಂ ಪ್ರಮಾಣವಚನ ಸ್ವೀಕಾರದ ಚೆನ್ನೈನಲ್ಲಿನ ಸಮಾರಂಭದಲ್ಲಿ ಪಾಲನೆಯಾಯಿತು, ಕೋಲ್ಕತ್ತದಲ್ಲಿ ಪಾಲನೆ ಆಗಲಿಲ್ಲ ಎಂಬುದು ಗಮನಾರ್ಹ.

ವಿಜಯ್ ಸಿನಿಶೈಲಿ, 2 ಬಾರಿ ಪ್ರಮಾಣ

ಚೆನ್ನೈ: ಟಿವಿಕೆ ಪಕ್ಷದ ಮುಖಂಡ ಜೋಸೆಫ್ ವಿಜಯ್ ಅವರು ಭಾನುವಾರ ಬೆಳಗ್ಗೆ ವೇದಿಕೆಯಲ್ಲಿ ಎರಡು ಬಾರಿ ಪ್ರಮಾಣ ವಚನ ಸ್ವೀಕರಿಸುವ ಎಲ್ಲರೂ ಅಚ್ಚರಿ ಪಡುವಂತೆ ಮಾಡಿದರು. ಆ ಮೂಲಕ ಸಾಂವಿಧಾನಿಕ ಬಿಕ್ಕಟ್ಟಿನ ಬಗ್ಗೆ ರಾಜಭವನದ ಅಧಿಕಾರಿಗಳು ಆತಂಕಪಡುವಂತೆ ಮಾಡಿದರು.

ವಿಜಯ್ ವೇದಿಕೆಯಲ್ಲಿ ಮೈಕ್ ಅಳವಡಿಸಿದ್ದ ಡಯಾಸ್ ಎದುರು ನಿಂತ ಬಳಿಕ ರಾಜ್ಯಪಾಲ ರಾಜೇಂದ್ರ ಅರ್ಲೇಕರ್ ಅವರು ನೀಡಿದ್ದ ಮುದ್ರಿತ ಪತ್ರವನ್ನು ಓದುವ ಬದಲು 'ಜೋಸೆಫ್ ವಿಜಯ್ ಎಂಬ ಹೆಸರಿನ ನಾನು...' ಎಂದು ಸಿನಿಮಾ ಶೈಲಿಯಲ್ಲಿ ಪ್ರಮಾಣವಚನ ಆರಂಭಿಸಿ ಭಾವೋದ್ವೇಗಕ್ಕೆ ಒಳಗಾದರು. ತಮಿಳುನಾಡು ಜನರ ಮೇಲೆ ಆಣೆ ಮಾಡಿದರು. ಸಭಿಕರು ವಿಷಲ್ ಊದಿ(ಟಿವಿಕೆ ಪಕ್ಷದ ಚಿಹ್ನೆ), ಚಪ್ಪಾಳೆ ತಟ್ಟಿ ಮೆಚ್ಚುಗೆ ವ್ಯಕ್ತಪಡಿಸಿದರು. 'ಹೀಗೆ ಸಿನಿಮಾ ಶೈಲಿಯ ಪ್ರತಿಜ್ಞಾವಿಧಿ ಅಧಿಕೃತವಲ್ಲ. ಸಂವಿಧಾನದ ಪ್ರಕಾರ ನಿಗದಿತ ಪತ್ಯವನ್ನಷ್ಟೇ ಪ್ರತಿಜ್ಞಾವಿಧಿಯಲ್ಲಿ ಓದಬೇಕು' ಎಂದು ರಾಜ್ಯಪಾಲ ರಾಜೇಂದ್ರ ಅವರು, ವಿಜಯ್‌ಗೆ ಸ್ಪಷ್ಟಸೂಚನೆ ನೀಡಿದರು. ಬಳಿಕ ಸಿನಿಮಾ ಶೈಲಿ ಬದಲಿಸಿದ ವಿಜಯ್ ಕೈಯಲ್ಲಿದ್ದ ಮುದ್ರಿತ ಪ್ರತಿಯನ್ನೇ ಓದಿದರು. ಆ ಮೂಲಕ ವಿಜಯ್ 2 ಬಾರಿ ಪ್ರಮಾಣ ವಚನ ಸ್ವೀಕರಿಸಿದಂತಾಯಿತು. ನೆರೆದಿದ್ದ ಅಭಿಮಾನಿಗಳು 'ನಮ್ಮ ದಳಪತಿ ಸಿಎಂ ಆದ್ರು' ಎಂದು ಜೈಕಾರ ಹಾಕಿದರು. ಗಂಭೀರವಾಗಿ ಸಾಗಬೇಕಾದ ಪ್ರಮಾಣವಚನ ಕಾರ್ಯಕ್ರಮ ಅಭಿಮಾನಿಗಳ 'ವಿಜಯೋತ್ಸವ'ದಂತೆ ಸಾಗಿ ಆಭಾಸಕ್ಕೀಡು ಮಾಡಿತು.

ಪ.ಬಂ. ಮತ್ತೊಬ್ಬ ಬಿಜೆಪಿ ಕಾರ್ಯಕರ್ತ ನಿಗೂಢ ಸಾವು

ಕೋಲ್ಕತ್ತ: ಪಶ್ಚಿಮ ಬಂಗಾಳದ ಪುರುಲಿಯಾ ಜಿಲ್ಲೆಯಲ್ಲಿನ ಬಿಜೆಪಿಯ ಮತ್ತೊಬ್ಬ ಕಾರ್ಯಕರ್ತ ನಿಗೂಢವಾಗಿ ಸಾವಿಗೀಡಾಗಿದ್ದಾರೆ. ಮದುವೆಗೆ ತೆರಳಿದ್ದ ಹಬುಲಾಲ್ ಗೋಪ್ ಮರುದಿನ ಬೆಳಗ್ಗೆ ಶವವಾಗಿ ಪತ್ತೆಯಾಗಿ ಬಂದಿದ್ದಾರೆ.

ಬೆಲ್ಡಿ ಗ್ರಾಮದ ನಿವಾಸಿ ಹಬುಲಾಲ್ ಗೋಪ್(45) ಗುರುವಾರ ಸಂಬಂಧಿಕರ ಮದುವೆಗೆಂದು ತೆರಳಿದ್ದರು. ಆದರೆ, ಅವರು ಮನೆಗೆ ಮರಳಿರಲಿಲ್ಲ. ಅವರ ಮೃತದೇಹ ಶುಕ್ರವಾರ ಬೆಳಗ್ಗೆ ಪುರುಲಿಯಾ ಮುಫಾಸಿಲ್ ಪೊಲೀಸ್ ಠಾಣೆ ವ್ಯಾಪ್ತಿಯ ಕನಾಲಿ ಗ್ರಾಮದ ಬಳಿ ಪತ್ತೆಯಾಗಿದೆ. ಗೋಪ್ ಸಕ್ರಿಯ ಬಿಜೆಪಿ ಕಾರ್ಯಕರ್ತನಾಗಿ ಗುರುತಿಸಿಕೊಂಡಿದ್ದರು. ಪಕ್ಷಕ್ಕಾಗಿ ಹಗಲಿರುಳು ಶ್ರಮಿಸಿದ್ದರು ಎಂದು ಸ್ಥಳೀಯ ಬಿಜೆಪಿ ನಾಯಕರು ತಿಳಿಸಿದ್ದಾರೆ. ಗೋಪ್ ಸಾವು ಜಿಲ್ಲೆಯ ಬಿಜೆಪಿ ಕಾರ್ಯಕರ್ತರಲ್ಲಿ ಆಕ್ರೋಶ ಹುಟ್ಟುಹಾಕಿದೆ. ಬೆಂಬಲಿಗರು ಗ್ರಾಮದ ಬಳಿ ಜಮಾಯಿಸಿ ಪ್ರತಿಭಟನೆ ನಡೆಸಿದ್ದಾರೆ. 'ರಾಜಕೀಯ ಕಾರಣಕ್ಕೆ ಹತ್ಯೆ ಮಾಡಿದ್ದಾರೆ' ಎಂದು ಗೋಪ್ ಕುಟುಂಬದವರು ಆರೋಪಿಸಿದ್ದಾರೆ. ಪೊಲೀಸರು ಸ್ಥಳಕ್ಕೆ ಧಾವಿಸಿ ತನಿಖೆ ಆರಂಭಿಸಿದ್ದಾರೆ. ಮರಣೋತ್ತರ ಪರೀಕ್ಷೆ ಬಳಿಕ ಸಾವಿಗೆ ನೈಜ ಕಾರಣ ತಿಳಿಯಲಿದೆ.

ಆಡಳಿತಕ್ಕೆ ನೆಪವಲ್ಲ, ಇಚ್ಛಾಶಕ್ತಿ ಅಗತ್ಯ: ಸ್ಟಾಲಿನ್

ಚೆನ್ನೈ: ಸರಕಾರ ನಡೆಸಲು ಹಣಕಾಸಿನ ಕುರಿತ ನೆಪಗಳ ಬದಲು ಆಡಳಿತಾತ್ಮಕ ಇಚ್ಛಾಶಕ್ತಿ ಮತ್ತು ಆಡಳಿತ ನಡೆಸುವ ಸಾಮರ್ಥ್ಯದ ಅಗತ್ಯವಿದೆ ಎಂದು ಡಿಎಂಕೆ ಪಕ್ಷದ ಅಧ್ಯಕ್ಷ, ಮಾಜಿ ಸಿಎಂ ಎಂ.ಕೆ. ಸ್ಟಾಲಿನ್ ಅವರು ಭಾನುವಾರ ಹೇಳಿದ್ದಾರೆ.

ರಾಜ್ಯದಲ್ಲಿನ ಸದ್ಯದ ಹಣಕಾಸು ಪರಿಸ್ಥಿತಿ ಬಹಳ ದುಃಸ್ಥಿತಿಯಲ್ಲಿದೆ. ರಾಜ್ಯದ ಹಿಂದಿನ ಸರಕಾರ ಖಜಾನೆ ಖಾಲಿ ಮಾಡಿದೆ. ಅಷ್ಟೇ ಅಲ್ಲ, 10 ಕೋಟಿ ರು. ಸಾಲದ ಹೊರೆಯನ್ನು ಹೊರಿಸಿ ಹೋಗಿದೆ. ರಾಜ್ಯದ ಆರ್ಥಿಕ ಪರಿಸ್ಥಿತಿ ಕುರಿತು ಸದ್ಯದಲ್ಲೇ ಶ್ವೇತಪತ್ರ ಹೊರಡಿಸಲಾಗುವುದು ಎಂದು ತಮಿಳುನಾಡಿನ ನೂತನ ಮುಖ್ಯಮಂತ್ರಿ ವಿಜಯ್ ಅವರು ಮೊದಲ ಸಚಿವ ಸಂಪುಟ ಸಭೆ ಬಳಿಕ ಹೇಳಿಕೆ ನೀಡಿದ್ದರು. ಅದಕ್ಕೆ ಪ್ರತಿಕ್ರಿಯೆ ನೀಡಿರುವ ಸ್ಟಾಲಿನ್, 'ಫೆಬ್ರವರಿಯಲ್ಲಿ ವಿಧಾನಸಭೆಯಲ್ಲಿ ಮಂಡಿಸಲಾದ ಬಜೆಟ್‌ನಲ್ಲೇ ರಾಜ್ಯದ ಹಣಕಾಸು ಸ್ಥಿತಿಯ ವಿವರಗಳನ್ನು ಸಾರ್ವಜನಿಕವಾಗಿ ನೀಡಲಾಗಿದೆ. ರಾಜ್ಯದ ಸಾಲದ ಪ್ರಮಾಣ ಹಣಕಾಸು ನೀತಿ ನಿಯಮಗಳ ಮಿತಿಯಲ್ಲೇ ಇದೆ. ರಾಜ್ಯದ ಆಡಳಿತ ನಡೆಸುವುದಕ್ಕೆ ಆಗದೇ ಇದ್ದರೆ ಕಾರಣಗಳನ್ನು ನೀಡುವುದಲ್ಲ, ಆಡಳಿತ ನಡೆಸುವುದಕ್ಕೆ ಬಲವಾದ ಇಚ್ಛಾಶಕ್ತಿ ಬೇಕು. ವೃಥಾ ಜನರಿಗೆ ತಪ್ಪು ಸಂದೇಶ ನೀಡಬಾರದು' ಎಂದು ತಿರುಗೇಟು ನೀಡಿದ್ದಾರೆ.

ಸಿಎಂ ಆದ ತಮಿಳು-ತೆಲುಗು ಚಿತ್ರರಂಗದ ಖ್ಯಾತನಾಮರು

ಮುತ್ತುವೇಲು ಕರುಣಾನಿಧಿ

- ತಮಿಳು ಚಿತ್ರಸಾಹಿತಿ/ಸಂಭಾಷಣೆಗಾರ
- ಕಲೈಂಗರ್ ಎಂದೇ ಪ್ರಸಿದ್ಧಿ
- ಹಿಂದಿ ವಿರೋಧಿ ಚಳವಳಿ ಮೂಲಕ ರಾಜಕೀಯ ಪ್ರವೇಶ
- 1949 ಸೆ.17ರಂದು ದ್ರಾವಿಡ ಮುನ್ನೇತ್ರ ಕಳಗಂ(ಡಿಎಂಕೆ) ಪಕ್ಷ ಸ್ಥಾಪನೆ
- 1957ರಲ್ಲಿ ಮೊದಲ ಬಾರಿಗೆ ಶಾಸಕರಾಗಿ ತಮಿಳುನಾಡು ವಿಧಾನಸಭೆ ಪ್ರವೇಶ
- 1967ರ ಮಾರ್ಚ್ ಮೊದಲ ಬಾರಿಗೆ ಸಚಿವ(ಲೋಕೋಪಯೋಗಿ)
- 1969 ಫೆ.10 ಮೊದಲ ಬಾರಿಗೆ ತಮಿಳುನಾಡು ಸಿಎಂ ಆಗಿ ಪ್ರಮಾಣ.
- 1971ರಲ್ಲಿ ಕಾಂಗ್ರೆಸ್ ಜತೆಗೂಡಿ 2ನೇ ಬಾರಿ ಸಿಎಂ
- 1996ರಲ್ಲಿ 4ನೇ ಬಾರಿ. 2006ರಲ್ಲಿ 5ನೇ ಬಾರಿ ಸಿಎಂ
- ಸರಕಾರಿ ಶಾಲೆ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ಘೋಷಣೆ.

ಎಂ.ಜಿ.ರಾಮಚಂದ್ರನ್ (ಎಂಜಿಆರ್)

- ತಮಿಳು ಸೂಪರ್ ಸ್ಟಾರ್ ಉಚಿತ ಶಿಕ್ಷಣ, ಶಾಲೆಗಳಲ್ಲಿ ಬಿಸಿಯೂಟ ಆರಂಭಿಸಿದ ಸಿಎಂ
- ಪುರುಚ್ಚಿ ತಲೈವರ್ ಎಂದೇ ಜನಪ್ರಿಯ
- 2 ಅವಧಿಗೆ ತಮಿಳುನಾಡು ಸಿಎಂ
- 1977-1987

ವಿ.ಎನ್.ಜಾನಕಿ

- ಎಂಜಿಆರ್ ಪತ್ನಿ
- ತಮಿಳು ಚಿತ್ರನಟಿ
- 1988ರಲ್ಲಿ 23 ದಿನಗಳಷ್ಟು ಅಲ್ಪಾವಧಿ ತಮಿಳುನಾಡು ಸಿಎಂ

ಜೆ.ಜಯಲಲಿತಾ

- 140ಕ್ಕೂ ಅಧಿಕ ಚಿತ್ರಗಳಲ್ಲಿ ನಟಿಸಿದ ಜನಪ್ರಿಯ ನಟಿ
- ಒಟ್ಟು 14 ವರ್ಷಗಳ ಕಾಲ ಸಿಎಂ, 1991ರಿಂದ 2016ರವರೆಗೆ
- ಹಲವು ಅವಧಿಗೆ ತಮಿಳುನಾಡು ಸಿಎಂ ತಮಿಳು ಜನರ ಪಾಲಿಗೆ 'ಅಮ್ಮಾ' ಎಂದೇ ಪ್ರಸಿದ್ಧಿ.
- ಅಮ್ಮಾ ಕ್ಯಾಂಟೀನ್, ಬಡವರಿಗೆ ಟಿವಿ ಮತ್ತಿತರ ಉಡುಗೊರೆ
- ದಕ್ಷಿಣ ಭಾರತದ ಅತ್ಯಂತ ಪ್ರಭಾವಶಾಲಿ ರಾಜಕಾರಣಿ

ಎನ್.ಟಿ.ರಾಮರಾವ್

- ಹೆಸರಾಂತ ಚಿತ್ರನಟ
- ಪೌರಾಣಿಕ(ರಾಮ-ಕೃಷ್ಣ) ಪಾತ್ರಗಳಲ್ಲಿ ಜನಪ್ರಿಯ ತೆಲುಗು ದೇಶಂ ಪಕ್ಷದ ಸಂಸ್ಥಾಪಕ
- ಮೊದಲ ಯತ್ನದಲ್ಲೇ ಆಂಧ್ರ ಸಿಎಂ
- 7 ವರ್ಷ ಗಳ ಅವಧಿಗೆ ಅವಿಭಜಿತ ಆಂಧ್ರಪ್ರದೇಶದ ಸಿಎಂ
- 1983-89 ಮತ್ತು 1994-1995 2 ಅವಧಿಯಲ್ಲಿ ಆಂಧ್ರ ಸಿಎಂ

ಸಿ.ಜೋಸೆಫ್ ವಿಜಯ್

- ಖ್ಯಾತ ತಮಿಳು ಚಿತ್ರನಟ, ಬಾಲನಟನಾಗಿ ಚಿತ್ರರಂಗ ಪ್ರವೇಶ
- 2024ರಲ್ಲಿ 'ತಮಿಳಗ ವೆಟ್ರಿ ಕಳಗಂ'(ಟಿವಿಕೆ) ಪಕ್ಷ ಸ್ಥಾಪನೆ, 2026ರಲ್ಲಿ ಮೊದಲ ಚುನಾವಣೆ.
- ಮೊದಲ ಯತ್ನದಲ್ಲೇ ಗೆಲುವು, 2026 ಮೇ 10ರಂದು ತಮಿಳುನಾಡು ಸಿಎಂ

ದಶಕಗಳ ಕಾಲ ತಮಿಳುನಾಡನ್ನಾಳಿದ ತಮಿಳು ಚಿತ್ರರಂಗದ ತ್ರಿವಳಿಗಳಾದ ಎಂಜಿಆರ್, ಎಂ.ಕರುಣಾನಿಧಿ ಮತ್ತು ಜೆ.ಜಯಲಲಿತಾ ಒಂದೇ ಫ್ರೇಮ್‌ನಲ್ಲಿ...

ಪ್ರಸ್ತುತ ರಾಜಕೀಯ ರಂಗದಲ್ಲಿ ಚಿತ್ರನಟ-ನಟಿಯರ ಮಿಂಚು

ಶತೃಘ್ನ ಸಿನ್ಹಾ
- ಬಾಲಿವುಡ್ ಚಿತ್ರ ನಟ-ಖಳನಾಯಕ
- ಬಿಜೆಪಿ ಮೂಲಕ ರಾಜಕೀಯ ಪ್ರವೇಶ
- ಕೇಂದ್ರ ಸರಕಾರದಲ್ಲಿ ಕೆಲ ಕಾಲ ಸಚಿವ
- ಸದ್ಯ ತೃಣಮೂಲ ಕಾಂಗ್ರೆಸ್ ಸಂಸದ

ಹೇಮಮಾಲಿನಿ
- ಬಾಲಿವುಡ್ ಚಿತ್ರತಾರೆ ಬಿಜೆಪಿ ಸಂಸದೆ

ಸುರೇಶ್ ಗೋಪಿ
- ಮಲಯಾಳಂ ಚಿತ್ರ ನಟ
- ಬಿಜೆಪಿ ಸಂಸದ
- ಹಾಲಿ ಕೇಂದ್ರ ಸಚಿವ

ಪವನ್ ಕಲ್ಯಾಣ್
- ಜನಪ್ರಿಯ ತೆಲುಗು ಚಿತ್ರನಟ
- ಜನಸೇನಾ ಪಕ್ಷದ ಸಂಸ್ಥಾಪಕ
- ಮೊದಲ ಯತ್ನದಲ್ಲಿ ಸೋಲು
- ಟಿಡಿಪಿ ಜತೆ ಮೈತ್ರಿ
- 2ನೇ ಯತ್ನದಲ್ಲಿ ಚುನಾವಣಾ ಯಶಸ್ಸು
- ವಿಭಜಿತ ಆಂಧ್ರಪ್ರದೇಶ ಉಪ ಮುಖ್ಯಮಂತ್ರಿ

ಕಂಗನಾ ರಾಣಾವತ್
- ಬಾಲಿವುಡ್ ಅಭಿನೇತ್ರಿ-ನಿರ್ಮಾಪಕಿ-ನಿರ್ದೇಶಕಿ
- ಬಿಜೆಪಿ ಮೂಲಕ ರಾಜಕೀಯ ಪ್ರವೇಶ
- ಲೋಕಸಭಾ ಸದಸ್ಯೆ

ಕಮಲಹಾಸನ್
- ಬಹುಭಾಷಾ ನಟ-ಚಿತ್ರ ನಿರ್ಮಾಪಕ
- ಮಕ್ಕಳ್ ನೀದಿ ಮೈಯಂ ಪಕ್ಷ ಸ್ಥಾಪನೆ
- ಡಿಎಂಕೆ ಬೆಂಬಲ ಪಡೆದು 2025 ರಾಜ್ಯಸಭೆಗೆ ಆಯ್ಕೆ

ಜಯಾ ಬಚ್ಚನ್
- ಬಾಲಿವುಡ್ ಅಭಿನೇತ್ರಿ
- ಸಮಾಜವಾದಿ ಪಕ್ಷದ ನಾಯಕಿ
- ರಾಜ್ಯಸಭಾ ಸದಸ್ಯೆ

ಉದಯನಿಧಿ
- ತಮಿಳು ಚಿತ್ರ ನಟ-ನಿರ್ಮಾಪಕ
- ಡಿಎಂಕೆ ಪಕ್ಷದ ಯುವ ನಾಯಕ
- ತ.ನಾಡು ಮಾಜಿ ಸಿಎಂ-ಹಾಲಿ ಶಾಸಕ

ಸನ್ನಿ ಡಿಯೋಲ್
- ಬಾಲಿವುಡ್ ಚಿತ್ರನಟ
- ಬಿಜೆಪಿ ಲೋಕಸಭಾ ಸದಸ್ಯ

ಮನೋಜ್ ತಿವಾರಿ
- ಜನಪ್ರಿಯ ಬೋಜ್‌ಪುರ ಚಿತ್ರನಟ
- ಬಿಜೆಪಿ ನಾಯಕ, ಲೋಕಸಭಾ ಸದಸ್ಯ

ಜಗ್ಗೇಶ್
- ಕನ್ನಡ ಚಿತ್ರನಟ
- ಬಿಜೆಪಿ ರಾಜ್ಯಸಭಾ ಸದಸ್ಯ

ಕಾಂಗ್ರೆಸ್ ವಿರುದ್ಧ ಹೋರಾಟ ಕೊರತೆ ಬಗ್ಗೆ ಬೇಸರ

ಬಿಎಸ್‌ವೈ ಅಭಿಮಾನೋತ್ಸವ ಲಾಭ, ನಷ್ಟ ಲೆಕ್ಕದಲ್ಲಿ ಬಿಜೆಪಿ

ಶಿವಕುಮಾರ್ ಬೆಳ್ಳಿತಟ್ಟೆ ಬೆಂಗಳೂರು



ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಅಭಿಮಾನೋತ್ಸವ ಹತ್ತು ಹಲವು ಟೀಕೆಗಳ ನಡುವೆಯೂ ಅರ್ಥಪೂರ್ಣವಾಗಿಯೇ ನಡೆದಿದೆ. ಆದರೆ ಬಿಜೆಪಿ ಆಂತರ್ಯದಲ್ಲಿ ಈ ಅತಿ ಅಪರೂಪದ ಸಮಾವೇಶದ ಲಾಭ, ನಷ್ಟಗಳ ಚರ್ಚೆ ಶುರುವಾಗಿದೆ.

ಸರಕಾರದ ವಿರುದ್ಧ ಬಿಜೆಪಿ ನಡೆಸಿದ ಎಲ್ಲಾ ಸಮಾವೇಶಗಳಿಗೆ ಹೋಲಿಸಿದೆ ಲಕ್ಷಾಂತರ ಮಂದಿ ಒಂದೆಡೆ ಸೇರಿದ್ದು, ಅದರಲ್ಲೂ ರಾಜ್ಯದ ಉತ್ತರ, ದಕ್ಷಿಣ ಭಾಗಗಳ ಕೇಂದ್ರ ಸ್ಥಾನ ಚಿತ್ರದುರ್ಗದಲ್ಲಿ ಆಯೋಜಿಸಿದ್ದು ಇದೇ ಮೊದಲ ಬಾರಿಯಾಗಿದೆ.

ಯಡಿಯೂರಪ್ಪ ಅವರ ರಾಜಕೀಯ ಜೀವನದ ಸುವರ್ಣ ಸಂಭ್ರಮದಲ್ಲಿ ಅಭಿಮಾನ ಪ್ರವಾಹವಿದ್ದ ಜನ ಸಾಗರವನ್ನು ರಾಜಕೀಯವಾಗಿ ಬಳಸಿಕೊಳ್ಳಲಾಗಿದೆಯೇ ? ಇದನ್ನು ಸರಕಾರದ ವಿರುದ್ಧ ಸಮರ ಸಾರಲು ಬಳಸಿಕೊಳ್ಳಬಹುದಿತ್ತಲ್ಲವೇ? ಹಾಗಾದರೆ ಇದರಿಂದ ಯಾರಿಗೆ ಲಾಭವಾಗಿದೆ? ಎಂಬ ಇತ್ಯಾದಿ ಪ್ರಶ್ನೆಗಳೊಂದಿಗೆ ಪಕ್ಷದ ನಾಯಕರಲ್ಲೇ ಚರ್ಚೆಯಾಗಿದೆ ಎನ್ನಲಾಗಿದೆ.

ಲಕ್ಷಾಂತರ ಮಂದಿ ತುಂಬಿದ್ದ ಈ ಸಮಾವೇಶದಲ್ಲಿ ನಿರೀಕ್ಷೆಗೂ ಮೀರಿ ಭಾಗವಹಿಸಿದ್ದ ಮಠಾಧಿಪತಿಗಳು, ಸ್ವಾಮೀಜಿಗಳು, ಪಕ್ಷದ ಅನೇಕ ನಾಯಕರು ಹಾಗೂ ಪಕ್ಷದ ಎರಡನೇ ಅಗ್ರ ನಾಯಕ, ಕೇಂದ್ರ ಸಚಿವ ಅಮಿತ್ ಶಾ ಅವರು ಭಾಗವಹಿಸಿದ್ದು, ಅವರೆಲ್ಲರೂ ಯಡಿಯೂರಪ್ಪ ಅವರ ಗುಣಗಾನ ಮಾಡಿದ್ದನ್ನು ನೋಡಿದರೆ ಮುಂಬರುವ 2028ರ ವಿಧಾನಸಭಾ ಚುನಾವಣೆಯನ್ನೂ ಬಿಜೆಪಿ ರಾಜ್ಯದ ಪ್ರಥಮ ಮುಖ್ಯಮಂತ್ರಿ ಯಡಿಯೂರಪ್ಪ ಅವರನ್ನೇ ತೋರಿಸಿ (ಮಾರ್ಗದರ್ಶನ) ಹೋಗಬೇಕಾದ ಅನಿವಾರ್ಯವನ್ನು ಒತ್ತಿ ಹೇಳಿದಂತಾಗಿದೆ. ಇದನ್ನು ಅಮಿತ್ ಶಾ ತಮ್ಮ ಭಾಷಣದಲ್ಲಿ ಸ್ಪರ್ಶ ಕೂಡ ಮಾಡಿದ್ದು ಗಮನಾರ್ಹ.

ಹಾಗೆಯೇ ಮಠಾಧಿಪತಿಗಳು ಹಾಗೂ ಬಿಎಸ್ ವೈ ಅಭಿಮಾನದ ಸಮಾವೇಶದ ಮೂಲಕ ಮುಂದಿನ ಚುನಾವಣೆಗಳಲ್ಲಿ ಲಿಂಗಾಯತರಿಗೆ ಸಾರಥ್ಯವಿಲ್ಲದೆ ಅಧಿಕಾರ ಸುಲಭವಲ್ಲ ಎನ್ನುವ ಸಂದೇಶವನ್ನೂ ರವಾನಿಸಿದಂತಾಗಿದೆ. ಒಟ್ಟಾರೆ ಇದರ ಹಿಂದಿನ ಉದ್ದೇಶ ಬಿ.ವೈ. ವಿಜಯೇಂದ್ರ ಅವರನ್ನು ಎರಡನೇ ಬಾರಿಗೆ ಬಿಜೆಪಿ ಅಧ್ಯಕ್ಷರಾಗಿ ಮುಂದುವರಿಸುವಂತೆ ಮಾಡುವುದು ಎಂಬ ಟೀಕೆಗಳಂತೂ ಇದ್ದವು. ಹೀಗೆಂದು ಶಾಸಕ ಬಸನಗೌಡ ಯತ್ನಾಳ್ ಬಹಿರಂಗವಾಗಿಯೇ ಟೀಕಿಸಿದ್ದೂ ಉಂಟು.

ಮೂಲಗಳ ಪ್ರಕಾರ, ಸೂಕ್ತ ಸಂಪನ್ಮೂಲಗಳನ್ನು ಹೊಂದಿಸಿ ಪಕ್ಷವನ್ನು ಮುನ್ನಡೆಸುವವರು ಲಭಿಸುವವರೂ ಹಾಲಿ ಅಧ್ಯಕ್ಷರೇ ಇರಬೇಕೆಂಬ ಚಿಂತನೆ ಕೂಡ ಬಿಜೆಪಿಯದು ಎನ್ನಲಾಗಿದೆ. ಇದು ಮುಂದುವರಿದು ವಿಜಯೇಂದ್ರ ಅವರು ಎರಡನೇ ಅವಧಿಗೂ ಮುಂದುವರಿಯಲೂ ಬಹುದು. ಆದರೆ ಕಾಂಗ್ರೆಸ್ ವಿರುದ್ಧ ಹೋರಾಟ ನಡೆಸಿ ಬಿಜೆಪಿಯನ್ನು ಮತ್ತೆ ಅಧಿಕಾರಕ್ಕೆ ತರುವುದು ಹೇಗೆ ಎನ್ನುವ ಚಿಂತನೆಗಳಿಗೆ ಪಕ್ಷದ ಹಿರಿಯ ನಾಯಕರಲ್ಲಿ ಉತ್ತರವಿಲ್ಲ. ಹೀಗಾಗಿ ಚಿತ್ರದುರ್ಗದ ಅಭಿಮಾನೋತ್ಸವ ಸಮಾವೇಶದಿಂದ ಪಕ್ಷಕ್ಕೆ ಹಾಗೂ ಸಂಘಟನೆಗೆ ಅಷ್ಟೇನೂ ಲಾಭವಾಗಿಲ್ಲ ಎನ್ನುವ ಬೇಸರ ಪಕ್ಷದ ಅನೇಕ ನಾಯಕರಲ್ಲಿ ಮೂಡಿರುವುದು ಉಂಟು ಎನ್ನಲಾಗಿದೆ.

ಅಷ್ಟಕ್ಕೂ ಈ ಸಮಾವೇಶ ಯಡಿಯೂರಪ್ಪ ಅವರ ಜೀವನ ಸಾಧನೆಗಳನ್ನು ಸ್ಮರಿಸುವ ಅಭಿಮಾನೋತ್ಸವವಾಗಿದ್ದರಿಂದ ಇಲ್ಲಿ ರಾಜಕೀಯ ಲಾಭವನ್ನಾಗಲಿ, ಸರಕಾರದ ವಿರುದ್ಧ ಬಾಣ, ಬಿರುಸು ಹೂಡುವುದಕ್ಕೆ ಸಾಧ್ಯವಿರಲಿಲ್ಲ. ಹೀಗಾಗಿಯೇ ಅಮಿತ್ ಶಾ ಸಾಂದರ್ಭಿಕವಾಗಿ ಮಾತನಾಡಿ ನಿರ್ಗಮಿಸಿದ್ದರು. ಆದರೆ ಇಡೀ ಸಮಾವೇಶ ಯಾವುದೇ ಅನ್ಯಪಕ್ಷಗಳಿಗೆ ಅವಕಾಶವಿಲ್ಲದ ಸಂಪೂರ್ಣ ಕೇಸರಿಮಯವಾಗಿದ್ದರಿಂದ ನಾಯಕರು, ಕಾಂಗ್ರೆಸ್ ಸರಕಾರ ಮತ್ತು ಸಚಿವರ ಅಕ್ರಮಗಳ ವಿರುದ್ಧ ಗುಡುಗು, ಸಿಡಿಲು ಉದುರಿಸಬಹುದಿತ್ತು ಎನ್ನುವುದೂ ಬಿಜೆಪಿಯ ಕೆಲವು ಶಾಸಕರ ವಾದ.

ಹೈಕಮಾಂಡ್‌ಗೂ ಗೊತ್ತಿದೆ

ಹಾಗೆ ನೋಡಿದರೆ ಬಿಜೆಪಿಯಲ್ಲಿ ಪ್ರಥಮ ಬಾರಿಗೆ ದಕ್ಷಿಣ ಭಾರತದಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತಂದಿದ್ದ ಯಡಿಯೂರಪ್ಪ ಅವರೇ ಮುಂದಿನ ಚುನಾವಣೆಗೂ ಸಾರಥ್ಯ ವಹಿಸುವುದು ಅನೇಕರಿಗೆ ಹೆಮ್ಮೆ ವಿಚಾರ. ಆದರೆ ಮೂರು ವರ್ಷಗಳಿಂದ ಹತ್ತುಹಲವು ಅಕ್ರಮಗಳನ್ನು ಹೊತ್ತ ಸರಕಾರದ ವಿರುದ್ಧ ಪರಿಣಾಮಕಾರಿ ಹೋರಾಟ ನಡೆಸದಿರುವುದು ಹಾಗೂ ನಡೆಸುವ ನಾಯಕರಿಲ್ಲದಿರುವುದು ನಮ್ಮ ಅಸಹಾಯಕತೆ ಎನ್ನುತ್ತಾರೆ ಸಮಾವೇಶದಿಂದ ದೂರ ಉಳಿದಿದ್ದವರು. ಇವರು ರಾಜ್ಯದ ಕೆಲವು ಅಸಹಾಯಕ ಸ್ಥಿತಿಯನ್ನು ಹೈಕಮಾಂಡ್ ಗಮನಕ್ಕೂ ತಂದಿದ್ದಾರೆ ಎನ್ನಲಾಗಿದೆ. ಈ ಮಧ್ಯೆ, ಉತ್ತರದಲ್ಲಿ ಬಿಜೆಪಿ ನಿರೀಕ್ಷಿತ ಗೆಲವು ದಾಖಲಿಸಿರುವ ಕಾರಣ, ಈಗ ಕರ್ನಾಟಕದ ಕಡೆ ಗಮನ ಹರಿಸುವ ಸಾಧ್ಯತೆ ಇದೆ. ಈಗಾಗಲೇ ಕೇರಳ ಮತ್ತು ತಮಿಳುನಾಡಿನಲ್ಲಿ ನಿರೀಕ್ಷಿತ ಫಲ ಲಭಿಸದ ಕಾರಣ, ರಾಜ್ಯ ಬಿಜೆಪಿಯಲ್ಲಿರುವ ಸಂಘಟನಾ ಸಮಸ್ಯೆ ಮತ್ತು ಆಂತರಿಕ ಭಿನ್ನಾಭಿಪ್ರಾಯಗಳನ್ನು ಸರಿಪಡಿಸುವ ಸಾಧ್ಯತೆ ಹೆಚ್ಚಾಗಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಸದ್ಯ ರಾಜ್ಯದಲ್ಲಿ ಸರಕಾರಕ್ಕೆ ತಕ್ಕ ಪಾಠ ಕಲಿಸುವ ಹೋರಾಟಗಳು ಮತ್ತು ಸಮರ್ಥ ಸಂಘಟನೆಗಳನ್ನ ಮಾಡುವ ಪ್ರಧಾನ ಕಾರ್ಯದರ್ಶಿಗಳಲ್ಲೇ ಸಮಸ್ಯೆ ಇರುವುದು ಪಕ್ಷದ ಹೈಕಮಾಂಡ ಗಮನಕ್ಕೆ ಬಂದಿದೆ ಎನ್ನಲಾಗಿದೆ. ಅಂದರೆ ಪ್ರಧಾನ ಕಾರ್ಯದರ್ಶಿಗಳಾದ ಮಾಜಿ ಸಚಿವ ಸುನೀಲ್ ಕುಮಾರ್ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ. ಉಳಿದಂತೆ ಪ್ರೀತಂ ಗೌಡ, ನಂದೀಶ್ ರೆಡ್ಡಿ ಹಾಗೂ ರಾಜೀವ್ ಅವರಿಗೆ ಪಕ್ಷ ಸಂಘಟನೆಗಿಂತ ತಮ್ಮದೇ ಉದ್ದೇಶಿತ ಅಜೆಂಡಾಗಳಿಗಾಗಿ ಹೋರಾಡುವವರು ಎನ್ನುವುದನ್ನು ಪಕ್ಷದ ಹಿರಿಯರ ಗಮನಕ್ಕೆ ತಂದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಹೋರಾಟಗಳಿಲ್ಲದೆ ಸೊರಗಿದ ಪಕ್ಷ

ಹೀಗಾಗಿ ಇಡೀ ಸಮಾವೇಶದಿಂದ ಪಕ್ಷಕ್ಕೆ ಹೇಳಿಕೊಳ್ಳುವ ಲಾಭವೇನೂ ಆಗಿಲ್ಲ ಎಂದು ಪಕ್ಷದ ಕೆಲವು ಹಿರಿಯ ಮುಖಂಡರು ಬೇಸರ ವ್ಯಕ್ತಪಡಿಸಿದ್ದಾರೆ. ರಾಜ್ಯದಲ್ಲಿ ಸರಕಾರದ ವಿರುದ್ಧ ಪರಿಣಾಮಕಾರಿ ಹೋರಾಟಗಳನ್ನು ರೂಪಿಸಬೇಕಿದ್ದು ಇದಕ್ಕಾಗಿ ಪಕ್ಷದ ನಾಯಕರು ಒಂದಾಗಿ ಶ್ರಮಿಸದಿರುವುದು ಕಾಂಗ್ರೆಸ್ ಗೆ ಲಾಭವಾಗಿದೆ ಎಂದು ಹೇಳುತ್ತಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್ ಸರಕಾರದ ಸಣ್ಣ ನೀರಾವರಿ ಇಲಾಖೆ, ಗೃಹ ಇಲಾಖೆ, ವಸತಿ ಇಲಾಖೆ ಸೇರಿದಂತೆ ಅನೇಕ ಇಲಾಖೆಗಳು ಬಿಜೆಪಿಗೆ ಬೇಕಾದಷ್ಟು ಅಕ್ರಮಗಳ ಅಸ್ತ್ರಗಳನ್ನು ನೀಡಿದರೂ ತುಟಿ ಬಿಚ್ಚುತ್ತಿಲ್ಲ. ಇದಕ್ಕೆ ಕಾರಣ, ರಾಜ್ಯದಲ್ಲಿ ಪಕ್ಷ ಸಂಘಟನೆ ಇಲ್ಲದಿರುವುದು. ಅಂದರೆ ಸಂಘಟನಾ ಕಾರ್ಯದರ್ಶಿಯಾಗಿದ್ದ ಬಿ.ಎಲ್. ಸಂತೋಷ್, ಅರುಣ್ ಹಾಗೂ ರಾಜೇಶ್ ನಂತರ ಕಳೆದ ಮೂರು ವರ್ಷಗಳಿಂದ ಯಾರನ್ನೂ ನೇಮಿಸದಿರುವುದು ಎಂದು ಆರ್ ಎಸ್ ಎಸ್ ನಲ್ಲಿ ಸುಧೀರ್ಘ ಕಾಲ ದುಡಿದ ಅನೇಕ ನಾಯಕರು ನೊಂದು ಹೇಳಿದ್ದಾರೆ. ಹಿಂದಿನ ಸಂಘಟನಾ ಕಾರ್ಯದರ್ಶಿ ರಾಜೇಶ್ ವಿರುದ್ಧ ಸಾಕಷ್ಟು ದೂರುಗಳಿದ್ದ ಕಾರಣ, ಪಕ್ಷ ಮತ್ತು ಸಂಘಟನೆಗಾಗಿ ಬದ್ಧತೆಯಿಂದ ದುಡಿಯುವವರನ್ನು ನೇಮಿಸಬೇಕೆಂದು ಹಿರಿಯ ನಾಯಕರು ಪಕ್ಷದ ವರಿಷ್ಠರನ್ನು ಒತ್ತಾಯಿಸಿದ್ದಾರೆ.

ಸಿಎಂಆರ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ 23ನೇ ಪದವಿ ಪ್ರದಾನ

ಎಐ ಸವಾಲು ಎದುರಿಸುವ ಸಾಮರ್ಥ್ಯ ಬೇಕು: ರಿಷಿ

ಬೆಂಗಳೂರು: ನಗರದ ಐಟಿಪಿಎಲ್ ರಸ್ತೆಯಲ್ಲಿರುವ ಪ್ರತಿಷ್ಠಿತ ಎಂಜಿನಿಯರಿಂಗ್ ಕಾಲೇಜು ಸಿಎಂಆರ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಶನಿವಾರ 23ನೇ ಪದವಿ ಪ್ರದಾನ ಸಮಾರಂಭ ಕಾರ್ಯಕ್ರಮ ಜರುಗಿತು.

ಸಿಎಂಆರ್‌ಐಟಿ ಸಭಾಂಗಣದಲ್ಲಿ ನಡೆದ ಪದವಿ ಪ್ರಮಾಣ ಪತ್ರ ಪ್ರದಾನ ಸಮಾರಂಭದಲ್ಲಿ 2025-26ನೇ ಸಾಲಿನಲ್ಲಿ ಎಂಜಿನಿಯರಿಂಗ್ ಮತ್ತು ಎಂಸಿಎ ಪದವಿ ಪೂರೈಸಿದ 1222 ವಿದ್ಯಾರ್ಥಿಗಳು ಪದವಿ ಪ್ರಮಾಣ ಪತ್ರ ಸ್ವೀಕರಿಸಿದರು. ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳು ಹಾಗೂ ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಫಲಕ ಮತ್ತು ಪ್ರಮಾಣ ಪತ್ರ ನೀಡಿ ಸನ್ಮಾನಿಸಲಾಯಿತು. ತಮ್ಮ ಮಕ್ಕಳ ಶೈಕ್ಷಣಿಕ ಸಾಧನೆಯನ್ನು ಕಣ್ತುಂಬಿಕೊಂಡ ಪೋಷಕರು ಸಂಭ್ರಮಿಸಿದರು.

ಕಾರ್ಯಕ್ರಮದಲ್ಲಿ ಬಯೋಪೀಕ್‌ನ ಸಂಸ್ಥಾಪಕ ಮತ್ತು ಸಿಇಒ ರಿಷಿ ಪರ್ದಲ್ ಮಾತನಾಡಿ, ವಿದ್ಯಾರ್ಥಿಗಳು ಜೀವನ ಪರ್ಯಂತ ಕಲಿಕೆ, ನಾಯಕತ್ವದ ಗುಣಗಳು ಮತ್ತು ಕೌಶಲ ವೃದ್ಧಿಗೆ ಸದಾ ಸಿದ್ಧರಿರಬೇಕು. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಸಹಯೋಗದ ಮನೋಭಾವದ ಜತೆಗೆ ಹವಾಮಾನ ಬದಲಾವಣೆ ಮತ್ತು ಕೃತಕ ಬುದ್ಧಿಮತ್ತೆಯ (ಎಐ) ಸವಾಲುಗಳನ್ನು ಸಮರ್ಥವಾಗಿ ಎದುರಿಸುವ ಹೊಂದಾಣಿಕೆಯ ಗುಣವನ್ನು ಬೆಳೆಸಿಕೊಳ್ಳುವುದು ಅತ್ಯಗತ್ಯ ಎಂದು ಹೇಳಿದರು.

ಮಾಜಿ ರಾಜ್ಯ ಸಭಾ ಸದಸ್ಯ ಡಾ.ಕೆ.ಸಿ ರಾಮಮೂರ್ತಿ ಮಾತನಾಡಿ, ಸಿಎಂಆರ್ ತಾಂತ್ರಿಕ ಮಹಾವಿದ್ಯಾಲಯ 25ನೇ ವರ್ಷದ ರಜತ ಮಹೋತ್ಸವ ಆಚರಿಸಿಕೊಳ್ಳುತ್ತಿರುವ 2025-26ನೇ ಶೈಕ್ಷಣಿಕ ವರ್ಷದಲ್ಲಿ 1222 ವಿದ್ಯಾರ್ಥಿಗಳು ಪದವಿ ಪಡೆಯುತ್ತಿರುವುದು ಅತ್ಯಂತ ಹೆಮ್ಮೆಯ ವಿಷಯ. ಕಳೆದ 26 ವರ್ಷಗಳ ಸುದೀರ್ಘ ಶೈಕ್ಷಣಿಕ ಪಯಣದಲ್ಲಿ ನಮ್ಮ ಸಂಸ್ಥೆಯು ಸಾವಿರಾರು ಸಾಧಕರನ್ನು ಹೊರಜಗತ್ತಿಗೆ ಪರಿಚಯಿಸಿದೆ. ನಮ್ಮ ಶೇ. 95ರಷ್ಟು ವಿದ್ಯಾರ್ಥಿಗಳು ಇಂದು ಜಾಗತಿಕ ಮಟ್ಟದ ಉನ್ನತ ಹುದ್ದೆಗಳನ್ನು ಅಲಂಕರಿಸುವ ಮೂಲಕ ದೇಶಕ್ಕೆ ಹಾಗೂ ಸಿಎಂಆರ್ ಐಟಿ ಸಂಸ್ಥೆಗೆ ಕೀರ್ತಿ ತಂದಿದ್ದಾರೆ. ನೇಪಾಳ ಸೇರಿದಂತೆ ದೇಶ-ವಿದೇಶಗಳ ವಿವಿಧ ಭಾಗಗಳಿಂದ ಬಂದ ವಿದ್ಯಾರ್ಥಿಗಳು ಇಲ್ಲಿ ಶಿಕ್ಷಣ ಪಡೆದು, ಇಂದು ಉನ್ನತ ವೇತನದೊಂದಿಗೆ ವೃತ್ತಿಜೀವನದಲ್ಲಿ ಅತ್ಯುತ್ತಮ ಸಾಧನೆ ಮಾಡುತ್ತಿರುವುದು ನಮಗೆ ಹೆಮ್ಮೆಯ ವಿಷಯ. ವಿದ್ಯಾರ್ಥಿಗಳ ಈ ಯಶಸ್ಸಿನ ಹಿಂದೆ ನಮ್ಮ ಪ್ರಾಧ್ಯಾಪಕರ ಗುಣಮಟ್ಟದ ಬೋಧನೆ, ಸಂಶೋಧನಾ ಆಧಾರಿತ ಕಲಿಕಾ ವಿಧಾನ ಹಾಗೂ ನಿರಂತರ ಪರಿಶ್ರಮ ಅಡಗಿದೆ ಎಂದು ಅವರು ಶ್ಲಾಘಿಸಿದರು

ಸಿಎಂಆರ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಪದವಿ ಪ್ರದಾನ ಸಮಾರಂಭ ಕಾರ್ಯಕ್ರಮ ಜರುಗಿತು. ಕಾರ್ಯಕ್ರಮದಲ್ಲಿ ಬಯೋಪೀಕ್‌ನ ಸಂಸ್ಥಾಪಕ ರಿಷಿ ಪರ್ದಲ್, ಡಾ.ಕೆ.ಸಿ ರಾಮಮೂರ್ತಿ, ಡಾ.ತ್ರಿಸ್ತಾ ರಾಮಮೂರ್ತಿ ಇದ್ದರು.

ವಾರ್ಷಿಕ 3.39 ಕೋ. ಜನರಿಗೆ ರೈಲು ಮಿಸ್

ದೆಹಲಿ: ಭಾರತದಲ್ಲಿನ ರೈಲು ಪ್ರಯಾಣಿಕರಲ್ಲಿ 3.39 ಕೋಟಿ ಮಂದಿ 2025-26ನೇ ಸಾಲಿನಲ್ಲಿ ರೈಲು ಟಿಕೆಟ್ ಕಾಯ್ದಿರಿಸುವಿಕೆ ಪ್ರಕ್ರಿಯೆಯಲ್ಲಿ ವೇಟಿಂಗ್ ಲಿಸ್ಟ್‌ನಲ್ಲಿದ್ದು, ಪ್ರಯಾಣದ ವೇಳೆ ಸಮೀಪಿಸಿದರೂ ಟಿಕೆಟ್ ಖಾತರಿ ಆಗದ ಕಾರಣಕ್ಕೆ ಪ್ರಯಾಣದ ಅವಕಾಶ ಕಳೆದುಕೊಂಡಿದ್ದಾರೆ.

ರೈಲು ಮಿಸ್ ಆಯಿತು ಎಂಬ ಕಾರಣಕ್ಕೆ ಬದಲಾಗಿ ಟಿಕೆಟ್ ಖಾತರಿ ಆಗದೇ ಇದ್ದ ಕಾರಣಕ್ಕೆ ಇಷ್ಟೊಂದು ದೊಡ್ಡ ಸಂಖ್ಯೆಯ ಪ್ರಯಾಣಿಕರು ರೈಲು ಪ್ರಯಾಣವನ್ನು ಕಳೆದ ವರ್ಷ ತಪ್ಪಿಸಿಕೊಂಡಿದ್ದಾರೆ ಎಂಬ ಅಂಕಿ ಅಂಶವನ್ನು ನೀಮುಚ್ ಮೂಲದ ಆರ್‌ಟಿಐ ಕಾರ್ಯಕರ್ತ ಚಂದ್ರಶೇಖರ್ ಗೌರ್ ಎಂಬವರಿಗೆ ಭಾರತೀಯ ರೈಲ್ವೆ ಶನಿವಾರ ನೀಡಿದೆ.

ಪಾಕ್ ಜವಾಬ್ದಾರಿಯುತ ರಾಷ್ಟ್ರವಾಗಿದೆ: ಶಹಬಾಜ್



ಇಸ್ಲಾಮಾಬಾದ್: ಭಾರತ 2025ರ ಮೇ 7ರಿಂದ 10ರವರೆಗೆ ಪಾಕ್ ಮತ್ತು ಪಿಒಕೆ ಮೇಲೆ ನಡೆಸಿದ ಆಪರೇಷನ್ ಸಿಂದೂರ್ ಸೇನಾ ಕಾರ್ಯಾಚರಣೆಯ ವರ್ಷಾ ಚರಣೆ ಭಾರತದಲ್ಲಿ ನಡೆದಿದ್ದರೆ, ಅದಕ್ಕೆ ಪ್ರತಿಯಾಗಿ ಪಾಕ್ ಸೇನಾಪಡೆಗಳು ಕೂಡಾ ಇಸ್ಲಾಮಾಬಾದ್‌ನಲ್ಲಿ 'ಮರ್ಕಾ-ಎ-ಹಕ್' ಹೆಸರಿ ನಲ್ಲಿ ವಾರ್ಷಿಕೋತ್ಸವ ಆಚರಿಸಿವೆ. ಇದೇ ವೇಳೆ, ಪ್ರಧಾನಿ ಕಚೇರಿ ಯಿಂದ ಶನಿವಾರ ತಡರಾತ್ರಿ, ಪ್ರಕಟವಾಗಿರುವ ಶಹಬಾಜ್ ಸಂದೇಶದಲ್ಲಿ, ದೇಶದ ಸಶಸ್ತ್ರ ಪಡೆಗಳನ್ನು ಶ್ಲಾಘಿಸಿದ್ದಾರೆ.

ಪಾಕಿಸ್ತಾನ ಈಗ 'ಜವಾಬ್ದಾರಿಯುತ' ರಾಷ್ಟ್ರವಾಗಿದೆ. ತನ್ನನ್ನು ಹೇಗೆ ರಕ್ಷಿಸಿಕೊಳ್ಳಬೇಕೆಂದು ಅದಕ್ಕೆ ತಿಳಿದಿದೆ. ಜಾಗತಿಕ ಶಾಂತಿ ಮತ್ತು ಸ್ಥಿರತೆಯ ಖಾತರಿಯ ದೇಶವಾಗಿಯೂ ಹೊರಹೊಮ್ಮಿದೆ ಎಂದು ಪ್ರಧಾನಿ ಶಹಬಾಜ್ ಹೇಳಿಕೊಂಡಿದ್ದಾರೆ. ವಾಸ್ತವದಲ್ಲಿ ಭಾರತದ ವಾಯುಪಡೆಯ ಪ್ರಬಲ ದಾಳಿಯಿಂದ ಪಾಕ್ ತತ್ತರಿಸಿಹೋಗಿತ್ತು. 9 ಉಗ್ರರ ನೆಲೆಗಳು ಧ್ವಂಸವಾಗಿ ನೂರಾರು ಉಗ್ರರು ಹತರಾ ಗಿದ್ದರು. ಪಾಕ್ ವಾಯುಪಡೆಯ 13 ವಿಮಾನ ಗಳನ್ನು ಭಾರತದ ವಾಯುಪಡೆ ಧ್ವಂಸಗೊಳಿಸಿತ್ತು. ಪಾಕ್‌ನ ವಾಯುನೆಲೆಗಳು, ರನ್‌ವೇಗಳು ಕೂಡಾ ಬಹಳಷ್ಟು ಹಾನಿಗೀಡಾಗಿದ್ದವು. ಹಾಗಿದ್ದೂ ಮುಖ ಉಳಿಸಿಕೊಳ್ಳುವ ಪ್ರಯತ್ನದ ಭಾಗವಾಗಿ ಪಾಕ್ ತನ್ನದೇ ಗೆಲುವು ಎಂಬಂತೆ ವರ್ಷಾಚರಣೆ ಮಾಡಿದೆ. ಅದಕ್ಕೆ ಬೆಂಬಲ ವಾಗಿ ಪ್ರಧಾನಿ ಶಹಬಾಜ್ ಹೇಳಿಕೆ ಬಿಡುಗಡೆ ಮಾಡಿ ಜಾಗತಿಕ ಮಟ್ಟದಲ್ಲಿ ದೇಶದ ಮರ್ಯಾದೆ ಕಾಪಾಡುವುದಕ್ಕೆ ವ್ಯರ್ಥ ಪ್ರಯತ್ನ ಮಾಡಿದ್ದಾರೆ.

ವರ್ಕ್ ಫ್ರಂ ಹೋಮ್‌ಗೆ ಪ್ರಧಾನಿ ಮೋದಿ ಸಲಹೆ

ಹೈದರಾಬಾದ್: ಪೆಟ್ರೋಲ್, ಡೀಸೆಲ್ ಸದ್ಬಳಕೆಗೆ ಮನೆಯಿಂದಲೇ ಕೆಲಸ ಮಾಡುವಂತೆ ಪ್ರಧಾನಿ ನರೇಂದ್ರ ಮೋದಿ ಸಲಹೆ ನೀಡಿದ್ದಾರೆ. ಹೈದರಾಬಾದ್‌ನ ಕಾರ್ಯಕ್ರಮವೊಂದರಲ್ಲಿ ಭಾನುವಾರ ಮಾತಾಡಿದ ಅವರು, ಆಮದು ಮಾಡಿಕೊಂಡ ಪೆಟ್ರೋಲ್, ಡೀಸೆಲ್ ಸದ್ಬಳಕೆಯಾಗಬೇಕು ಎಂದು ಒತ್ತಿ ಹೇಳಿ ದರು. ಪೆಟ್ರೋಲ್, ಡೀಸೆಲ್ ಉತ್ಪನ್ನಗಳ ಮಿತ ಬಳಕೆ ಈಗಿನ ಅಗತ್ಯವಾಗಿದೆ. ನಾವು ಆಮದು ಮಾಡಿಕೊಂಡ ಪೆಟ್ರೋಲ್ ಉತ್ಪನ್ನಗಳನ್ನು ಅಗತ್ಯಕ್ಕೆ ತಕ್ಕಂತೆ ಮಾತ್ರ ಬಳಸಬೇಕಾಗಿದೆ. ಮನೆಯಿಂದಲೇ ಕೆಲಸ ಮಾಡಿ, ವಿದ್ಯುತ್ ವಾಹನಗಳನ್ನು ಬಳಸಿ, ಚಿನ್ನ ಖರೀದಿ ಕಡಿಮೆ ಮಾಡಿ, ವಿದೇಶಗಳಲ್ಲಿ ಮದುವೆ ಕಾರ್ಯಕ್ರಮ ಮಾಡದಂತೆ ಅವರು ಭಾರತೀಯರಿಗೆ ಕರೆಕೊಟ್ಟರು. ಪೆಟ್ರೋಲ್‌ನಲ್ಲಿ ಎಥೆನಾಲ್ ಮಿಶ್ರಣ ಮಾಡುವಲ್ಲಿ ಅಭೂತಪೂರ್ವ ಕೆಲಸ ಮಾಡಲಾಗಿದೆ ಎಂದು ಇದೇ ವೇಳೆ ಮೋದಿ ಒತ್ತಿ ಹೇಳಿದ್ದಾರೆ. ಪಶ್ಚಿಮ ಏಷ್ಯಾ ಸಂಘರ್ಷದಿಂದಾಗಿ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಬಗ್ಗೆ ಹೆಚ್ಚುತ್ತಿರುವ ಕಳವಳಗಳ ನಡುವೆ ಮೋದಿಯ ಈ ಹೇಳಿಕೆ ಗಂಭೀರತೆ ಪಡೆದಿದೆ.

THIS IS A PUBLIC ANNOUNCEMENT FOR INFORMATION PURPOSES ONLY AND IS NOT A PROSPECTUS ANNOUNCEMENT AND DOES NOT CONSTITUTE AN INVITATION OR OFFER TO ACQUIRE, PURCHASE OR SUBSCRIBE TO SECURITIES UNDER THE SECURITIES AND EXCHANGE BOARD OF INDIA (ISSUE OF CAPITAL AND DISCLOSURE REQUIREMENTS) REGULATIONS, 2018, AS AMENDED ("SEBI ICDR REGULATIONS"). NOT FOR RELEASE, PUBLICATION OR DISTRIBUTION DIRECTLY OR INDIRECTLY, OUTSIDE INDIA. INITIAL PUBLIC OFFERING OF EQUITY SHARES ON THE MAIN BOARD OF THE STOCK EXCHANGES (AS DEFINED IN THE DRHP) IN COMPLIANCE WITH CHAPTER II OF THE SEBI ICDR REGULATIONS

PUBLIC ANNOUNCEMENT

(Please scan this QR code to view the DRHP and the Draft Abridged Prospectus)

ONLINE INSTRUMENTS (INDIA) LIMITED

Our Company was incorporated as "Online Instruments (India) Private Limited", as a private limited company under the provisions of the Companies Act, 1956 pursuant to a certificate of incorporation dated February 20, 2006, issued by the Registrar of Companies, Karnataka at Bangalore. Our Company was subsequently converted from a private company to a public company, pursuant to resolutions passed by our Board on January 8, 2026 and our Shareholders on January 9, 2026, consequent to which its name was changed to "Online Instruments (India) Limited", and a fresh certificate of incorporation was issued by Central Processing Centre on January 19, 2026. For further details on the changes in the name and registered office of our Company, see *"History and Certain Corporate Matters"* on page 293 of the draft red herring prospectus dated May 8, 2026 (the "**DRHP**" or the "**Draft Red Herring Prospectus**").

Corporate Identity Number: U51909KA2006PLC038521
Registered and Corporate Office: DNR Altitude, No.8/1, 11th Floor, Tumkur Road, Yeswanthpura, Bangalore North, Bangalore - 560022, Karnataka, India
Contact Person: Vijaylaxmi Kedia, Company Secretary and Compliance Officer; **Telephone:** +91 8971142671; **E-mail:** cs@onlineinstruments.com; **Website:** www.onlineinstruments.com

NAMES OF PROMOTERS: SHIVANAND MALLAPPA MAHASHETTI, MAHESH BASALINGAPPA BELLAD, ANITA MAHESH BELLAD, AND RAJESHWARI SHIVANAND MAHASHETTI

INITIAL PUBLIC OFFER OF UP TO [●] EQUITY SHARES OF FACE VALUE OF ₹2 EACH ("EQUITY SHARES") OF ONLINE INSTRUMENTS (INDIA) LIMITED ("COMPANY") FOR CASH AT A PRICE OF ₹[●] PER EQUITY SHARE (INCLUDING A SHARE PREMIUM OF ₹[●] PER EQUITY SHARE) ("OFFER PRICE") AGGREGATING UP TO ₹[●] MILLION, ("OFFER"), COMPRISING OF A FRESH ISSUE OF UP TO [●] EQUITY SHARES OF FACE VALUE OF ₹2 EACH AGGREGATING UP TO ₹7,500.00 MILLION ("FRESH ISSUE") AND AN OFFER FOR SALE OF UP TO 5,710,000 EQUITY SHARES OF FACE VALUE OF ₹2 EACH ("OFFERED SHARES") AGGREGATING UP TO ₹[●] MILLION, COMPRISING OF UP TO 2,910,000 EQUITY SHARES OF FACE VALUE OF ₹2 EACH AGGREGATING UP TO ₹[●] MILLION BY ANITA MAHESH BELLAD AND UP TO 2,800,000 EQUITY SHARES OF FACE VALUE OF ₹2 EACH AGGREGATING UP TO ₹[●] MILLION BY RAJESHWARI SHIVANAND MAHASHETTI (COLLECTIVELY, REFERRED TO AS THE "PROMOTER SELLING SHAREHOLDERS" AND SUCH OFFER FOR SALE OF EQUITY SHARES OFFERED BY THE PROMOTER SELLING SHAREHOLDERS, THE "OFFER FOR SALE").

THE OFFER INCLUDES A RESERVATION OF UP TO [●] EQUITY SHARES OF FACE VALUE OF ₹2 EACH, AGGREGATING UP TO ₹[●] MILLION (CONSTITUTING UP TO [●]% OF THE POST-OFFER PAID-UP EQUITY SHARE CAPITAL), FOR SUBSCRIPTION BY ELIGIBLE EMPLOYEES ("EMPLOYEE RESERVATION PORTION"). OUR COMPANY, IN CONSULTATION WITH THE BRLMS, MAY OFFER A DISCOUNT OF UP TO [●]% OF THE OFFER PRICE TO ELIGIBLE EMPLOYEES BIDDING IN THE EMPLOYEE RESERVATION PORTION ("EMPLOYEE DISCOUNT"), SUBJECT TO NECESSARY APPROVALS AS MAY BE REQUIRED. THE OFFER LESS THE EMPLOYEE RESERVATION PORTION IS HEREINAFTER REFERRED TO AS THE "NET OFFER". THE OFFER AND THE NET OFFER SHALL CONSTITUTE [●]% AND [●]% OF THE POST-OFFER PAID-UP EQUITY SHARE CAPITAL OF OUR COMPANY, RESPECTIVELY.

OUR COMPANY IN CONSULTATION WITH THE BRLMS, MAY CONSIDER AN ISSUE OF SPECIFIED SECURITIES AS MAY BE PERMITTED UNDER APPLICABLE LAW FOR AN AMOUNT AGGREGATING UP TO ₹1,500.00 MILLION, AT ITS DISCRETION, PRIOR TO FILING OF THE RED HERRING PROSPECTUS, WITH THE REGISTRAR OF COMPANIES, KARNATAKA AT BENGALURU ("ROC") ("PRE-IPO PLACEMENT"). THE PRE-IPO PLACEMENT, IF UNDERTAKEN, WILL BE AT A PRICE TO BE DECIDED BY OUR COMPANY, IN CONSULTATION WITH THE BRLMS. IF THE PRE-IPO PLACEMENT IS COMPLETED, THE AMOUNT RAISED PURSUANT TO THE PRE-IPO PLACEMENT WILL BE REDUCED FROM THE FRESH ISSUE, SUBJECT TO THE OFFER COMPLYING WITH RULE 19(2)(B) OF THE SECURITIES CONTRACTS (REGULATION) RULES, 1957, AS AMENDED ("SCRR"). THE UTILISATION OF THE PROCEEDS RAISED PURSUANT TO THE PRE-IPO PLACEMENT WILL BE DONE TOWARDS THE OBJECTS OF THE OFFER IN COMPLIANCE WITH APPLICABLE LAW. THE PRE-IPO PLACEMENT, IF UNDERTAKEN, SHALL NOT EXCEED 20% OF THE FRESH ISSUE SIZE. PRIOR TO THE COMPLETION OF THE OFFER, OUR COMPANY SHALL APPROPRIATELY INTIMATE THE SUBSCRIBERS TO THE PRE-IPO PLACEMENT, PRIOR TO ALLOTMENT PURSUANT TO THE PRE-IPO PLACEMENT, THAT THERE IS NO GUARANTEE THAT OUR COMPANY MAY PROCEED WITH THE OFFER OR THE OFFER MAY BE SUCCESSFUL AND WILL RESULT IN LISTING OF THE EQUITY SHARES ON THE STOCK EXCHANGES. FURTHER, RELEVANT DISCLOSURES IN RELATION TO SUCH INTIMATION TO THE SUBSCRIBERS TO THE PRE-IPO PLACEMENT (IF UNDERTAKEN) SHALL BE APPROPRIATELY MADE IN THE RELEVANT SECTIONS OF THE RED HERRING PROSPECTUS AND PROSPECTUS.

THE FACE VALUE OF THE EQUITY SHARES IS ₹2 EACH. THE OFFER PRICE IS [●] TIMES THE FACE VALUE OF THE EQUITY SHARES. THE PRICE BAND, AND THE MINIMUM BID LOT WILL BE DECIDED BY OUR COMPANY, IN CONSULTATION WITH THE BRLMS AND WILL BE ADVERTISED IN ALL EDITIONS OF [●], AN ENGLISH NATIONAL DAILY NEWSPAPER, ALL EDITIONS OF [●], A HINDI NATIONAL DAILY NEWSPAPER AND [●] EDITIONS OF [●], A KANNADA DAILY NEWSPAPER, KANNADA BEING THE REGIONAL LANGUAGE OF KARNATAKA WHERE OUR REGISTERED OFFICE IS LOCATED, EACH WITH WIDE CIRCULATION, AT LEAST TWO WORKING DAYS PRIOR TO THE BID/OFFER OPENING DATE AND SUCH ADVERTISEMENT SHALL BE MADE AVAILABLE TO THE STOCK EXCHANGES FOR THE PURPOSE OF UPLOADING ON THEIR RESPECTIVE WEBSITES IN ACCORDANCE WITH THE SEBI ICDR REGULATIONS.

In case of any revision in the Price Band, the Bid/ Offer Period will be extended by at least three additional Working Days after such revision in the Price Band, subject to the Bid/ Offer Period not exceeding 10 Working Days. In cases of force majeure, banking strike or similar circumstances, our Company may, in consultation with the BRLMs, and for reasons to be recorded in writing, extend the Bid/ Offer Period for a minimum of one Working Day, subject to the Bid/ Offer Period not exceeding 10 Working Days. Any revision in the Price Band and the revised Bid/ Offer Period, if applicable, shall be widely disseminated by notification to the Stock Exchanges, by issuing a public announcement, and also by indicating the change on the respective websites of the BRLMs and at the terminals of the Syndicate Members and by intimation to the Designated Intermediaries and the Sponsor Bank(s), as applicable.

The Offer is being made through the Book Building Process, in terms of Rule 19(2)(b) of the SCRR read with Regulation 31 of the SEBI ICDR Regulations and in compliance with Regulation 6(1) of the SEBI ICDR Regulations, wherein not more than 50% of the Net Offer shall be available for allocation on a proportionate basis to Qualified Institutional Buyers ("**QIBs**", and such portion, "**Net QIB Portion**") provided that our Company may, in consultation with the BRLMs, allocate up to 60% of the QIB Portion to Anchor Investors on a discretionary basis in accordance with the SEBI ICDR Regulations ("**Anchor Investor Portion**"), out of which 33.33% shall be reserved for domestic Mutual Funds and 6.67% for life insurance companies and pension funds. In case of any under-subscription in the portion reserved for life insurance companies and pension funds the allocation shall be made to domestic Mutual Funds. Subject to valid Bids being received from Mutual Funds at or above the price at which Equity Shares of face value of ₹2 each are allocated to Anchor Investors ("**Anchor Investor Allocation Price**"), in accordance with the SEBI ICDR Regulations. In the event of under-subscription or non-allocation in the Anchor Investor Portion, the balance Equity Shares shall be added to the Net QIB Portion. Further, 5% of the Net QIB Portion shall be available for allocation on a proportionate basis only to Mutual Funds and the remainder of the Net QIB Portion shall be available for allocation on a proportionate basis to all QIB Bidders (other than Anchor Investors) including Mutual Funds, subject to valid Bids being received at or above the Offer Price. However, if the aggregate demand from Mutual Funds is less than 5% of the QIB Portion, the balance Equity Shares available for allocation in the Mutual Fund Portion will be added to the remaining QIB Portion for proportionate allocation to QIBs. Further, not less than 15% of the Net Offer shall be available for allocation to Non-Institutional Bidders out of which (a) one-third of such portion shall be reserved for applicants with application size of more than ₹0.20 million and up to ₹1.00 million; and (b) two-third of such portion shall be reserved for applicants with application size of more than ₹1.00 million, provided that the unsubscribed portion in either of such sub-categories may be allocated to applicants in the other sub-category of Non-Institutional Bidders. Further, not less than 35% of the Net Offer shall be available for allocation to Retail Individual Bidders ("**RIBs**") in accordance with the SEBI ICDR Regulations, subject to valid Bids being received at or above the Offer Price. Further, Equity Shares will be allocated on a proportionate basis to Eligible Employees applying under the Employee Reservation Portion, subject to valid Bids received from them at or above the Offer Price. All potential Bidders (except Anchor Investors) are required to mandatorily utilise the Application Supported by Blocked Amount ("**ASBA**") process by providing details of their respective ASBA Accounts and UPI ID in case of UPI Bidders using the UPI Mechanism, if applicable, in which the corresponding Bid Amounts will be blocked by the SCSBs or under the UPI Mechanism, as the case may be, to the extent of respective Bid Amounts. Anchor Investors are not permitted to participate in the Offer through the ASBA process. For details, please refer to the section titled *"Offer Procedure"* on page 530 of the DRHP.

This public announcement is made in compliance with the provisions of Regulation 26(2) of the SEBI ICDR Regulations to inform the public that our Company is proposing to undertake, subject to applicable statutory and regulatory requirements, receipt of requisite approvals, market conditions and other considerations, an initial public offer of its Equity Shares pursuant to the Offer and has filed the DRHP along with the Draft Abridged Prospectus dated May 8, 2026 with SEBI and the Stock Exchanges on May 9, 2026.

Pursuant to Regulation 26(1) of the SEBI ICDR Regulations, the DRHP along with the Draft Abridged Prospectus filed with Securities and Exchange Board of India ("**SEBI**") shall be made available to the public for comments, if any, for period of at least 21 days, from the date of publication of this public announcement by hosting it on the website of SEBI at www.sebi.gov.in, on the websites of the Stock Exchanges i.e., BSE at www.bseindia.com, NSE at www.nseindia.com where the Equity Shares are proposed to be listed, the website of the BRLMs, i.e. Equirus Capital Limited *(Formerly Equirus Capital Private Limited)* at www.equirus.com and Motilal Oswal Investment Advisors Limited at www.motilaloswalgroup.com and the website of our Company at www.onlineinstruments.com. Our Company hereby invites the public to give their comments on the DRHP along with the Draft Abridged Prospectus filed with SEBI and the Stock Exchanges, with respect to disclosures made in the DRHP along with the Draft Abridged Prospectus. The members of public are requested to send a copy of their comments to SEBI, to the Company Secretary and Compliance Officer of our Company and/or the BRLMs at their respective addresses mentioned herein below. All comments must be received by SEBI and/or our Company and/or the BRLMs and/or the Company Secretary and Compliance Officer of our Company at their respective addresses mentioned herein below in relation to the Offer on or before 5:00 p.m. on the 21st day from the aforesaid date of publication of this public announcement in accordance with Regulation 26(2) of SEBI ICDR Regulations.

Investments in equity and equity-related securities involve a degree of risk and investors should not invest any funds in the Offer unless they can afford to take the risk of losing their entire investment. Investors are advised to read the risk factors carefully before taking an investment decision in the Offer. For taking an investment decision, investors must rely on their own examination of our Company and the Offer, including the risks involved. The Equity Shares in the Offer have not been recommended or approved by SEBI, nor does SEBI guarantee the accuracy or adequacy of the contents of the Draft Red Herring Prospectus. Specific attention of the investors is invited to *"Risk Factors"* on page 23 of the DRHP.

Any decision to invest in the Equity Shares described in the DRHP may only be made after the red herring prospectus ("**Red Herring Prospectus**") has been filed with the RoC and must be made solely on the basis of such Red Herring Prospectus, as there may be material changes in the Red Herring Prospectus from the DRHP and the Draft Abridged Prospectus.

The Equity Shares, when offered through the Red Herring Prospectus, are proposed to be listed on the main board of the Stock Exchanges.

For details of the main objects of the Company as contained in its Memorandum of Association, see *"History and Certain Corporate Matters"* on page 293 of the DRHP.

The liability of the members of the Company is limited. For details of the share capital, capital structure of the Company and the names of the signatories to the Memorandum of Association and the number of shares subscribed by them see *"Capital Structure"* on page 117 of the DRHP.

BOOK RUNNING LEAD MANAGERS TO THE OFFER		REGISTRAR TO THE OFFER
Equirus Capital Limited *(Formerly Equirus Capital Private Limited)* Unit No. 2601B, 26th Floor, A Wing, Marathon Futurex, Mafatlal Mills Compound, N M Joshi Marg, Lower Parel Mumbai 400 013, Maharashtra, India **Telephone:** +91 22 4332 0736 **E-mail:** oiil.ipo@equirus.com **Investor grievance e-mail:** investorsgrievance@equirus.com **Website:** www.equirus.com **Contact person:** Malay Shah/ Siddh Vadecha **SEBI registration no.:** INM000011286	**Motilal Oswal Investment Advisors Limited** Motilal Oswal Tower, Rahimtullah Sayani Road, Opposite Parel ST Depot, Prabhadevi, Mumbai 400 025, Maharashtra, India **Telephone:** +91 22 7193 4380 **E-mail:** oiil.ipo@motilaloswal.com **Investor grievance e-mail:** moiaplredressal@motilaloswal.com **Website:** www.motilaloswalgroup.com **Contact person:** Sankita Ajinkya/Subodh Mallya **SEBI registration no.:** INM000011005	**MUFG Intime India Private limited** *(Formerly known as Link Intime India Private Limited)* C-101, Embassy 247, L.B.S. Marg, Vikhroli West Mumbai 400 083 Maharashtra, India **Telephone:** +91 81081 14949 **E-mail:** onlineinstruments.ipo@in.mpms.mufg.com **Investor grievance e-mail:** onlineinstruments.ipo@in.mpms.mufg.com **Contact person:** Shanti Gopalkrishnan **Website:** https://in.mpms.mufg.com/ **SEBI registration number:** INR000004058

COMPANY SECRETARY AND COMPLIANCE OFFICER
Vijaylaxmi Kedia
DNR Altitude, No.8/1, 11th Floor, Tumkur Road, Yeswanthpura, Bangalore North, Bangalore - 560022, Karnataka, India
Telephone: +91 89711 42671; **E-mail:** cs@onlineinstruments.com; **Website:** www.onlineinstruments.com

All capitalized terms used herein and not specifically defined shall have the same meaning as ascribed to them in the DRHP.

For **ONLINE INSTRUMENTS (INDIA) LIMITED**
On behalf of the Board of Directors
Sd/-
Vijaylaxmi Kedia
Company Secretary and Compliance Officer

Place: Bengaluru
Date: May 10, 2026

ONLINE INSTRUMENTS (INDIA) LIMITED is proposing, subject to applicable statutory and regulatory requirements, receipt of requisite approvals, market conditions and other considerations, to undertake an initial public offer of its Equity Shares and has filed the DRHP along with the Draft Abridged Prospectus dated May 8, 2026 with SEBI and the Stock Exchanges on May 9, 2026. The DRHP along with the Draft Abridged Prospectus shall be available on the website of SEBI at www.sebi.gov.in, on the websites of the Stock Exchanges, i.e., BSE at www.bseindia.com, NSE at www.nseindia.com, on the websites of the BRLMs, i.e., Equirus Capital Limited *(Formerly Equirus Capital Private Limited)* at www.equirus.com and Motilal Oswal Investment Advisors Limited at www.motilaloswalgroup.com and on the website of our Company at www.onlineinstruments.com. Potential investors should note that investment in equity shares involves a high degree of risk and for details relating to such risks, see the section titled *"Risk Factors"* on page 23 of the DRHP. Potential investors should not rely on the DRHP or the Draft Abridged Prospectus filed with SEBI and the Stock Exchanges for making any investment decision.

This announcement does not constitute an offer of the Equity Shares for sale in any jurisdiction, including the United States, and the Equity Shares may not be offered or sold in the United States absent registration under the US Securities Act of 1933 or an exemption from registration. Any public offering of the Equity Shares to be made in the United States will be made by means of a prospectus that may be obtained from the Company and that will contain detailed information about the Company and management, as well as financial statements. However, the Equity Shares are not being offered or sold in the United States.

CONCEPT

ಐಪಿಎಲ್ ಹಬ್ಬ 2026

ಆರೆಂಜ್ ಕ್ಯಾಪ್ ಹೆನ್ರಿಕ್ ಕ್ಲಾಸೆನ್ ಹೈದರಾಬಾದ್

ಪರ್ಪಲ್ ಕ್ಯಾಪ್ ಭುವನೇಶ್ವರ್ ಆರ್‌ಸಿಬಿ

IPL T20 2026

ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ
ಬೆಂಗಳೂರು	11	7	4	14
ಹೈದರಾಬಾದ್	11	7	4	14
ಗುಜರಾತ್	11	7	4	14
ಪಂಜಾಬ್	10	6	3	13
ಚೆನ್ನೈ	11	6	5	12
ರಾಜಸ್ಥಾನ್	11	6	5	12
ಕೋಲ್ಕತಾ	10	4	5	9
ಡೆಲ್ಲಿ	11	4	7	8
ಮುಂಬೈ	11	3	8	6
ಲಖನೌ	11	3	8	6

ರಹಾನೆ ನಾಯಕತ್ವ ಬೇಡ: ಕೆಕೆಆರ್ ಅಭಿಮಾನಿಗಳ ಒತ್ತಡ

ಕೋಲ್ಕತಾ: ಐಪಿಎಲ್‌ನಲ್ಲಿ ಕೆಕೆಆರ್ ತಂಡದ ನಾಯಕ ಅಜಿಂಕ್ಯ ರಹಾನೆ ಟೆಸ್ಟ್ ಬ್ಯಾಟ್ಸ್‌ಮನ್ ಆಗಿದ್ದರೂ ಐಪಿಎಲ್‌ನಲ್ಲಿ ಮುಂದುವರಿಯುತ್ತಿದ್ದಾರೆ. 2024ರ

ವರೆಗೆ ಚೆನ್ನೈ ಸೂಪರ್ ಕಿಂಗ್ಸ್ ಪರ ಆಡಿದ್ದರು. ಆದರೆ ಅಲ್ಲಿ ಅತ್ಯುತ್ತಮ ಪ್ರದರ್ಶನ ನೀಡದ ಕಾರಣ ಅವರನ್ನು ಚೆನ್ನೈ ತಂಡ ಬಿಡುಗಡೆ ಮಾಡಿತು. ಎರಡನೇ ಬಾರಿಗೆ ಹರಾಜಿಗೆ ಬಂದ ರಹಾನೆ ಅವರನ್ನು 1.5 ಕೋಟಿ ರು.ಗೆ ಕೋಲ್ಕತಾ ಖರೀದಿಸಿತು. ಶ್ರೇಯಸ್ ಅಯ್ಯರ್ ತಂಡವನ್ನು ತೊರೆದಿದ್ದರಿಂದ ರಹಾನೆಗೆ ಕೆಕೆಆರ್ ನಾಯಕತ್ವ ನೀಡಲಾಯಿತು. ಆದರೆ 2025ರಲ್ಲಿ ರಹಾನೆ ನೇತೃತ್ವದಲ್ಲಿ ಕೆಕೆಆರ್ ಕಳಪೆ ಪ್ರದರ್ಶನ ನೀಡಿತು. ಬ್ಯಾಟ್ಸ್‌ಮನ್ ಆಗಿ, ರಹಾನೆ 13 ಪಂದ್ಯಗಳಲ್ಲಿ 390 ರನ್ ಗಳಿಸಿ ತಕ್ಕಮಟ್ಟಿನ ಪ್ರದರ್ಶನ ನೀಡಿದ್ದರು. 2026ರ ಐಪಿಎಲ್ ನಲ್ಲಿ ಕೆಕೆಆರ್ ಆರಂಭದಲ್ಲಿ ಸತತ ಸೋಲುಗಳನ್ನು ಅನುಭವಿಸಿ 7ನೇ ಸ್ಥಾನ ತಲುಪಿದ್ದಾರೆ. ಉಳಿದ 4 ಪಂದ್ಯಗಳಲ್ಲಿ ಗೆದ್ದರೆ ಪ್ಲೇಆಫ್ ಪ್ರವೇಶಿಸಲು ಉತ್ತಮ ಅವಕಾಶ ಇದೆ. ಆದರೆ ನಾಯಕರಾಗಿರುವ ರಹಾನೆ ಕಳಪೆ ಪ್ರದರ್ಶನ ನೀಡುತ್ತಿದ್ದಾರೆ. ಈ ಋತುವಿನಲ್ಲಿ ರಹಾನೆ 10 ಪಂದ್ಯಗಳಲ್ಲಿ 218 ರನ್ ಗಳಿಸಿದ್ದಾರೆ, ಅವರ ಸರಾಸರಿ 24 ರನ್. ಅವರಿಂದಾಗಿ ಸೀಫರ್ಟ್‌ನಂತಹ ವೇಗದ ಆರಂಭಿಕ ಆಟಗಾರ ಬೆಂಚ್‌ಗೆ ಸೀಮಿತವಾಗಿದ್ದಾರೆ. ರಹಾನೆ ಹೊರಗುಳಿದರೆ ಅಲೆನ್ ಹಾಗೂ ಸೀಫರ್ಟ್‌ಗೆ ಅವಕಾಶ ಇದೆ. ಈ ಋತುವಿನಲ್ಲಿ ರಹಾನೆ ಒಂದರಲ್ಲಿ ಮಾತ್ರ 40ಕ್ಕೂ ಹೆಚ್ಚು ರನ್ ಗಳಿಸಿದರು. ಉಳಿದ 7 ಪಂದ್ಯಗಳಲ್ಲಿ ಅವರು ವಿಫಲರಾಗಿದ್ದಾರೆ. ಹಾಗಾಗಿ ಅವರನ್ನು ಕೋಲ್ಕತಾ ತಂಡದ ನಾಯಕತ್ವದಿಂದ ವಜಾಗೊಳಿಸಬೇಕೆಂಬುದು ಸದ್ಯ ಕೆಕೆಆರ್ ಅಭಿಮಾನಿಗಳ ಒತ್ತಾಯವಾಗಿದೆ.

ಜೈಸ್ವಾಲ್ ದಾಖಲೆ ಸರಿಗಟ್ಟಿದ ಉರ್ವಿಲ್

ಚೆನ್ನೈ: ಸಿಎಸ್‌ಕೆ ತಂಡದ ಬ್ಯಾಟ್ಸ್‌ಮನ್ ಉರ್ವಿಲ್ ಪಟೇಲ್ ಅವರು ಭಾನುವಾರ ನಡೆದ ಐಪಿಎಲ್ ಪಂದ್ಯದಲ್ಲಿ ಕೇವಲ 13 ಎಸೆತಗಳಲ್ಲಿ ಅರ್ಧಶತಕ ಗಳಿಸುವ ಮೂಲಕ ಹೊಸ ಇತಿಹಾಸ ಬರೆದರು. ಲಖನೌ ವಿರುದ್ಧದ ಪಂದ್ಯದಲ್ಲಿ ಅವರು ಈ ಸಾಧನೆ ಮಾಡಿದ್ದು, ಇದು ಐಪಿಎಲ್ ಇತಿಹಾಸದಲ್ಲಿ ವೇಗದ ಅರ್ಧಶತಕವಾಗಿದೆ. 2023ರ ಐಪಿಎಲ್‌ನಲ್ಲಿ ಕೋಲ್ಕತ್ತಾ ನೈಟ್ ರೈಡರ್ಸ್ ವಿರುದ್ಧ ನಡೆದ ಪಂದ್ಯದಲ್ಲಿ 13 ಎಸೆತಗಳಲ್ಲಿ ಅರ್ಧಶತಕ ಬಾರಿಸಿದ ರಾಜಸ್ಥಾನ್ ರಾಯಲ್ಸ್ ಬ್ಯಾಟ್ಸ್‌ಮನ್ ಯಶಸ್ವಿ ಜೈಸ್ವಾಲ್ ಸಾಧನೆಯನ್ನು ಉರ್ವಿಲ್ ಈ ಮೂಲಕ ಸರಿಗಟ್ಟಿದ್ದಾರೆ.

ಕೋಚ್ ಸಲಹೆ ಯಶಸ್ವಿ

ಜೈಪುರ: ಶನಿವಾರ ನಡೆದಿದ್ದ ಐಪಿಎಲ್ ಪಂದ್ಯದಲ್ಲಿ ರಾಜಸ್ಥಾನ್ ರಾಯಲ್ಸ್ ತಂಡದ ಬ್ಯಾಟರ್ ಸೂರ್ಯವಂಶಿಯ ವಿಕೆಟ್ ಕೀಳಲು ಗುಜರಾತ್ ಕೋಚ್ ಆಶಿಶ್ ನೆಹ್ರಾ ನೀಡಿದ ಸಲಹೆಯ ವಿಡಿಯೊ ವೈರಲ್ ಆಗಿದೆ. ಪಂದ್ಯದ ಮೂರನೇ ಓವರ್‌ನಲ್ಲಿ ಜಿ.ಟಿ ಕೋಚ್ ಆಶಿಶ್ ನೆಹ್ರಾ ತನ್ನ ತಲೆಯ ಕಡೆಗೆ ಸನ್ನೆ ಮಾಡುವ ಮೂಲಕ ಸಿರಾಜ್‌ಗೆ ಬೌನ್ಸರ್ ಎಸೆಯುವಂತೆ ಸೂಚಿಸಿದರು. ಕೋಚ್ ಸಲಹೆಯಂತೆ ಸಿರಾಜ್ ಬೌನ್ಸರ್ ಎಸೆದರು. ಬೀಸಿ ಬಾರಿಸಲೆತ್ನಿಸಿದ ಸೂರ್ಯವಂಶಿ ಕ್ಯಾಚ್ ನೀಡುವ ಮೂಲಕ ವಿಕೆಟ್ ಕಳೆದುಕೊಂಡರು. ವಿಕೆಟ್ ಕಿತ್ತ ಸಿರಾಜ್ ಅತಿರೇಕದಿಂದ ಸಂಭ್ರಮಿಸಿದರು.

ಅಗ್ರಸ್ಥಾನಕ್ಕೇರಿದ ರಜತ್ ಪಾಟೀದಾರ್ ಪಡೆ | ಮುಂಬೈ ಇಂಡಿಯನ್ಸ್‌ಗೆ ಸೋಲು

ಆರ್‌ಸಿಬಿಗೆ ರೋಚಕ ಜಯ

ರಾಯ್‌ಪುರ್: ಇಲ್ಲಿ ಭಾನುವಾರ ನಡೆದ ಐಪಿಎಲ್ ಪಂದ್ಯದಲ್ಲಿ ಕೃನಾಲ್ ಪಾಂಡ್ಯ ಅವರ ಸ್ಫೋಟಕ ಬ್ಯಾಟಿಂಗ್ ಮತ್ತು ಭುವನೇಶ್ವರ್ ಅವರ ಮಾರಕ ಬೌಲಿಂಗ್ ದಾಳಿಯ ನೆರವಿನಿಂದ ಆರ್‌ಸಿಬಿ ತಂಡವು ಮುಂಬೈ ವಿರುದ್ಧ ರೋಚಕ ಜಯ ಸಾಧಿಸಿದೆ. ಆ ಮೂಲಕ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದೆ.

ಗುರಿ ಬೆನ್ನಟ್ಟಿದ ಆರ್‌ಸಿಬಿ ಉತ್ತಮ ಆರಂಭ ಪಡೆಯಲಿಲ್ಲ. ಮೊದಲ ಓವರ್‌ನ 4ನೇ ಎಸೆತದಲ್ಲೇ ವಿರಾಟ್ ಕೊಹ್ಲಿ ಖಾತೆ ತೆರೆಯದೇ ದೀಪಕ್ ಚಾಹರ್ ಬೌಲಿಂಗ್‌ನಲ್ಲಿ ರಾಜ್ ಅಂಗದ್ ಭಾವಾಗೆ ಕ್ಯಾಚ್ ನೀಡಿ

ಔಟ್ ಆದರು. ನಂತರ ಬಂದ ದೇವದತ್ ಪಡಿಕ್ಕಲ್ ಕೂಡ ದೀಪಕ್ ಚಾಹರ್ ಬೌಲಿಂಗ್‌ನಲ್ಲೇ ವಿಕೆಟ್ ಕೀಪರ್ ರಿಕಲ್ಟನ್‌ಗೆ ಕ್ಯಾಚ್ ನೀಡಿ ಔಟ್ ಆದರು. ನಾಯಕ ರಜತ್ ಪಾಟೀದಾರ್ 8 ಎಸೆತಗಳಲ್ಲಿ 8 ರನ್‌ಗಳಿಸಿ ಔಟ್ ಆದರು.

ಈ ಹಂತದಲ್ಲಿ ಒಂದಾದ ಬೆಥೆಲ್ ಹಾಗೂ ಕೃನಾಲ್ ಪಾಂಡ್ಯ 4ನೇ ವಿಕೆಟ್ ಜತೆಯಾಟದಲ್ಲಿ 55 ರನ್ ಸೇರಿಸಿ ಚೇತರಿಕೆ ನೀಡಿದರು. 46 ಬಾಲ್‌ಗಳಲ್ಲಿ 73 ರನ್ ಗಳಿಸಿದ ಪಾಂಡ್ಯ ಆರ್‌ಸಿಬಿ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಅವರ ಇನ್ನಿಂಗ್ಸ್‌ನಲ್ಲಿ 5 ಸಿಕ್ಸರ್ ಮತ್ತು 4 ಬೌಂಡರಿ ಇದ್ದವು. ಜಿತೇಶ್ ಶರ್ಮಾ 18 ರನ್ ಗಳಿಸಿದರು.

ಕೊನೆಯಲ್ಲಿ ರಸಿಕ್ ಸಲಾಂ 3 ರನ್ ಹಾಗೂ ಭುವನೇಶ್ವರ್ ಕುಮಾರ್ 7 ರನ್ ಗಳಿಸಿ ಆರ್‌ಸಿಬಿಯನ್ನು ಗೆಲುವಿನ ದಡದತ್ತ ಸೇರಿಸಿದರು.

ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಮುಂಬೈ ತಂಡವು ಭುವನೇಶ್ವರ್ ಕುಮಾರ್ ಅವರ ಬೌಲಿಂಗ್ ದಾಳಿಗೆ ತತ್ತರಿಸಿ 7 ವಿಕೆಟ್‌ಗೆ 166 ರನ್ ಗಳಿಸಿತು.

ಮುಂಬೈ ಉತ್ತಮ ಆರಂಭವನ್ನು ಪಡೆಯಲಿಲ್ಲ, ಕೇವಲ 4 ರನ್ ಆದಾಗ 2 ರನ್ ಗಳಿಸಿದ್ದ ರಿಕೆಲ್ಟನ್ ಅವರು ಭುವನೇಶ್ವರ್ ಕುಮಾರ್ ಅವರ ಬೌಲಿಂಗ್‌ನಲ್ಲಿ ಪಾಟೀದಾರ್‌ಗೆ ಕ್ಯಾಚ್ ನೀಡಿ ವಿಕೆಟ್ ಕಳೆದುಕೊಂಡರು. ಬಳಿಕ ಬಂದ ನಮನ್ ಧೀರ್ ಅವರು ರೋಹಿತ್ ಶರ್ಮಾ ಜತೆ ಬ್ಯಾಟಿಂಗ್ ಮುಂದುವರಿಸಿದರು. ಆದರೆ ತಂಡದ ಮೊತ್ತ 28 ರನ್ ಆಗಿದ್ದಾಗ ಕೇವಲ 10 ಬಾಲ್‌ಗಳಲ್ಲಿ 22 ರನ್ ಗಳಿಸಿದ್ದ ರೋಹಿತ್ ಶರ್ಮಾ ಅವರು ಭುವನೇಶ್ವರ್ ಕುಮಾರ್ ಅವರ ಬೌಲಿಂಗ್‌ನಲ್ಲಿ ಜಿತೇಶ್ ಶರ್ಮಾಗೆ ಕ್ಯಾಚ್ ನೀಡಿ ಪೆವಿಲಿಯನ್ ಸೇರಿದರು. ಅವರ ಇನ್ನಿಂಗ್ಸ್‌ನಲ್ಲಿ 2 ಸಿಕ್ಸರ್ ಮತ್ತು 2 ಬೌಂಡರಿ ಇದ್ದವು.

ಆ ಬಳಿಕ ಬ್ಯಾಟಿಂಗ್‌ಗೆ ಬಂದ ಸೂರ್ಯಕುಮಾರ್ ಯಾದವ್ ಈ ಸಲ ವೈಫಲ್ಯ ಅನುಭವಿಸಿದರು. ಕೇವಲ 1 ಬಾಲ್ ಎದುರಿಸಿ ಯಾವುದೇ ರನ್ ಗಳಿಸದೆ ಭುವನೇಶ್ವರ್ ಕುಮಾರ್ ಬೌಲಿಂಗ್‌ನಲ್ಲಿ ಔಟ್ ಆದರು.

ನಂತರ ತಂಡದ ಮೊತ್ತ 110 ರನ್ ಆಗಿದ್ದಾಗ 32 ಬಾಲ್‌ಗಳಲ್ಲಿ 47 ರನ್ ಗಳಿಸಿದ್ದ ನಮನ್ ಧೀರ್ ಅವರು ರಸಿಖ್ ಅವರ ಬೌಲಿಂಗ್‌ನಲ್ಲಿ ಬೌಲ್ಡ್ ಆದರು. ಅವರ ಇನ್ನಿಂಗ್ಸ್‌ನಲ್ಲಿ 5 ಬೌಂಡರಿ ಮತ್ತು 2 ಸಿಕ್ಸರ್ ಇದ್ದವು. ಬಳಿಕ 5ನೇ ವಿಕೆಟ್‌ಗೆ ತಿಲಕ್ ವರ್ಮಾ-ವಿಲ್ ಜಾಕ್ಸ್ ಮಧ್ಯೆ ಜತೆಯಾಟ ಸಾಗಿತು. ತಂಡದ ಮೊತ್ತ 132 ರನ್ ಆದಾಗ 10 ಬಾಲ್‌ಗಳಲ್ಲಿ 10 ರನ್ ಗಳಿಸಿದ್ದ ವಿಲ್ ಜ್ಯಾಕ್ಸ್ ರೊಮಾರಿಯೋ ಶೆಫರ್ಡ್ ಬೌಲಿಂಗ್‌ನಲ್ಲಿ ಜೇಕಬ್ ಬೆಥೆಲ್‌ಗೆ ಕ್ಯಾಚ್ ನೀಡುವ ಮೂಲಕ ತಮ್ಮ ವಿಕೆಟ್ ಕಳೆದುಕೊಂಡರು.

ಕೊನೆಯಲ್ಲಿ ಬಾಷ್ (5) ಮತ್ತು ಚಹಾರ್ (1) ಅಜೇಯರಾಗಿ ಉಳಿದರು.

ಆರ್‌ಸಿಬಿ ಪರ ಕೇವಲ 23 ರನ್ ನೀಡಿ ಮಹತ್ವದ 4 ವಿಕೆಟ್ ಪಡೆದು ಭುವನೇಶ್ವರ್ ಕುಮಾರ್ ಪಂದ್ಯಶ್ರೇಷ್ಠರಾದರು.

ಸ್ಕೋರ್ ಬೋರ್ಡ್

ಮುಂಬೈ 166/7 20 ಓವರ್

		ರನ್	ಎಸೆತ	4s	6s
ರಿಕಲ್ಟನ್	ಸಿ ಪಾಟಿದಾರ್, ಬಿ ಭುವನೇಶ್ವರ್	2	4	0	0
ರೋಹಿತ್	ಸಿ ಜಿತೇಶ್, ಬಿ ಭುವನೇಶ್ವರ್	22	10	2	2
ನಮನ್	ಬಿ ರಾಸಿಖ್	47	32	5	2
ಸೂರ್ಯಕುಮಾರ್	ಸಿ ಕೊಹ್ಲಿ, ಬಿ ಭುವನೇಶ್ವರ್	0	1	0	0
ತಿಲಕ್	ಬಿ ಭುವನೇಶ್ವರ್	57	42	3	2
ವಿಲ್‌ಜ್ಯಾಕ್ಸ್	ಸಿ ಬೆಥೆಲ್, ಬಿ ಶೆಫರ್ಡ್	10	10	1	0
ರಾಜ್ ಬಾವಾ	ಸಿ ಪಾಟಿದಾರ್, ಬಿ ಹೇಜಲ್‌ವುಡ್	16	14	1	0
ಕಾರ್ಬಿನ್ ಬಾಷ್	ನಾಟ್ ಔಟ್	5	5	0	0
ದೀಪಕ್ ಚಹಾರ್	ನಾಟ್ ಔಟ್	1	2	0	0

ಬೌಲಿಂಗ್ ಆರ್‌ಸಿಬಿ

	ಓವರ್	ಮೇಡನ್	ರನ್	ವಿಕೆಟ್
ಭುವನೇಶ್ವರ್	4	0	23	4
ಹೇಜಲ್‌ವುಡ್	4	0	32	1
ರಸಿಖ್	4	0	42	1
ಶೆಫರ್ಡ್	3	0	18	1
ಪಾಂಡ್ಯ	3	0	26	0
ಸುಯಶ್	2	0	21	0

ವಿಕೆಟ್ ಪತನ : 1/4, 2/28, 3/28, 4/110, 5/132, 6/156, 7/161

ಆರ್‌ಸಿಬಿ 167/8 20 ಓವರ್

		ರನ್	ಎಸೆತ	4s	6s
ಬೆಥೆಲ್	ಸಿ ವರ್ಮಾ, ಬಿ ಬಾಷ್	27	27	2	0
ಕೊಹ್ಲಿ	ಸಿ ಬಾವಾ, ಬಿ ಚಹಾರ್	0	1	0	0
ಪಡಿಕ್ಕಲ್	ಸಿ ರಿಕಲ್ಟನ್, ಬಿ ಚಾಹರ್	12	11	1	1
ಪಾಟಿದಾರ್	ಸಿ ರಿಕಲ್ಟನ್, ಬಿ ಬಾಷ್	8	8	1	0
ಪಾಂಡ್ಯ	ಸಿ ವರ್ಮಾ, ಬಿ ಗಜನ್ಫರ್	73	46	4	5
ಜಿತೇಶ್	ಸಿ ಧೀರ್, ಬಿ ಬಾಷ್	18	12	1	2
ಡೇವಿಡ್	ಸಿ ರಿಕೆಲ್ಟನ್, ಬಿ ಬಾಷ್	0	1	0	0
ಶೆಫರ್ಡ್	ಸಿ ವರ್ಮಾ, ಬಿ ಬಾವಾ	4	11	0	0
ರಸಿಖ್	ನಾಟ್ ಔಟ್	3	2	0	0
ಭುವನೇಶ್ವರ್	ನಾಟ್ ಔಟ್	7	2	0	1

ಮುಂಬೈ ಗುಜರಾತ್

	ಓವರ್	ಮೇಡನ್	ರನ್	ವಿಕೆಟ್
ಚಾಹರ್	4	0	33	2
ಬುಮ್ರಾ	4	0	20	0
ಬಾಷ್	4	1	26	4
ವಿಲ್ ಜ್ಯಾಕ್ಸ್	2	0	13	0
ಗಜನ್ಫರ್	3	0	33	1
ರಾಜ್ ಬಾವಾ	3	0	39	1

ವಿಕೆಟ್ ಪತನ : 1/10, 2/24, 3/39, 4/94, 5/131, 6/131, 7/149, 8/157

ಪ್ಲೇಯರ್ ಆಫ್ ದಿ ಮ್ಯಾಚ್ ▶▶ ಭುವನೇಶ್ವರ್ (ಆರ್‌ಸಿಬಿ)

ಜೋಶ್ ಇಂಗ್ಲಿಸ್ ಲಖನೌ ಪರ ವೇಗದ ಅರ್ಧ ಶತಕ

ಚೆನ್ನೈ: ಭಾನುವಾರ ಸಿಎಸ್‌ಕೆ ವಿರುದ್ಧ ಲಖನೌ ಸೂಪರ್ ಜಯಂಟ್ಸ್ ಪರ ಆಡಿದ ಜಾಶ್ ಇಂಗ್ಲಿಸ್ 5ನೇ ಓವರ್‌ನಲ್ಲೇ ಅರ್ಧಶತಕ ಬಾರಿಸಿದರು. ಅವರು ಕೇವಲ 17 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು. ಇದು ಐಪಿಎಲ್ ಟೂರ್ನಿಯಲ್ಲಿ ಬ್ಯಾಟ್ಸ್‌ಮನ್ ಗಳಿಸಿದ ಮೂರನೇ ಅತಿ ವೇಗದ ಅರ್ಧಶತಕವಾಗಿದೆ. ನಿಕೋಲಸ್ ಪೂರನ್ ಕ್ರಮವಾಗಿ 15 ಮತ್ತು 16 ಎಸೆತಗಳಲ್ಲಿ ಅರ್ಧಶತಕ ಗಳಿಸುವ ಮೂಲಕ ದಾಖಲೆಯನ್ನು ಹೊಂದಿದ್ದರು.

ಉರ್ವಿಲ್ ಪಟೇಲ್ ಸ್ಫೋಟಕ ಅರ್ಧ ಶತಕ | ಚೆನ್ನೈ ತಂಡದ ನಾಕೌಟ್ ಆಸೆ ಜೀವಂತ

ಪ್ಲೇಆಫ್‌ನಿಂದ ಹೊರಬಿದ್ದ ಲಖನೌ

ಚೆನ್ನೈ: ಯುವ ಆಟಗಾರ ಉರ್ವಿಲ್ ಪಟೇಲ್ ಸಿಡಿಸಿದ ಸ್ಫೋಟಕ ಅರ್ಧ ಶತಕದ ಮತ್ತು ಜೆಮಿ ಓವರ್‌ಟನ್ ಅವರ ಉತ್ತಮ ಬೌಲಿಂಗ್ ನೆರವಿನಿಂದ ಚೆನ್ನೈ ಸೂಪರ್‌ನ ಕಿಂಗ್ಸ್ ತಂಡವು ಲಖನೌ ಸೂಪರ್ ಜೈಂಟ್ಸ್ ವಿರುದ್ಧ 5 ವಿಕೆಟ್‌ಗಳ ಜಯ ಸಾಧಿಸಿದೆ.

ಈ ಪಂದ್ಯದ ಮೂಲಕ ಆಡಿರುವ 11 ಪಂದ್ಯಗಳಲ್ಲಿ 6ನೇ ಜಯವನ್ನು ಚೆನ್ನೈ ಸಂಪಾದಿಸಿದರೆ, ಅಷ್ಟೇ ಪಂದ್ಯಗಳಲ್ಲಿ 8 ಸೋಲು ಅನುಭವಿಸಿದ ಲಖನೌ ತಂಡವು ಈ ಸಲದ ಐಪಿಎಲ್ ಪ್ಲೇಆಫ್ ರೇಸ್‌ನಿಂದ ಹೊರಬಿದ್ದಿತು.

ಇಲ್ಲಿನ ಎಂಎ ಚಿದಂಬರಂ ಸ್ಟೇಡಿಯಂ ಮೈದಾನದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಮೊದಲ ಬ್ಯಾಟಿಂಗ್ ಮಾಡಿದ ಲಖನೌ 8 ವಿಕೆಟ್‌ಗೆ 203 ರನ್ ಗಳಿಸಿತು. ಆ ಗುರಿಯನ್ನು ಬೆಂಬತ್ತಿದ ಚೆನ್ನೈ 19.2 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು ಗೆಲುವಿನ ಗುರಿ ತಲುಪಿತು.

204 ರನ್‌ಗಳ ಗುರಿ ಬೆನ್ನಟ್ಟಿದ ಸಿಎಸ್‌ಕೆ ಉತ್ತಮ ಆರಂಭ ಪಡೆದುಕೊಂಡಿತು. 3.4 ಓವರ್‌ಗಳಲ್ಲೇ 45 ರನ್ ಗಳಿಸಿತು. ಸಂಜು ಸ್ಯಾಮ್ಸನ್ 14 ಎಸೆತಗಳಲ್ಲಿ 3 ಬೌಂಡರಿ, 2 ಸಿಕ್ಸರ್ ಸಹಿತ 28 ರನ್ ಗಳಿಸಿ ದಿಗ್ವೇಶ್

ರಾಠಿ ಬೌಲಿಂಗ್‌ನಲ್ಲಿ ಔಟ್ ಆದರು. ನಂತರ ಬಂದ ಉರ್ವಿಲ್ ಪಟೇಲ್ ಕೇವಲ 23 ಎಸೆತಗಳಲ್ಲಿ 2 ಬೌಂಡರಿ, 8 ಸಿಕ್ಸರ್‌ಗಳ ಸಹಿತ 65 ರನ್ ಗಳಿಸಿದರು. 2ನೇ ವಿಕೆಟ್ ಜತೆಯಾಟದಲ್ಲಿ 34 ಎಸೆತಗಳಲ್ಲಿ 81 ರನ್ ಸೇರಿಸಿದರು.

ಗಾಯಕ್ವಾಡ್ 28 ಎಸೆತಗಳಲ್ಲಿ 3 ಬೌಂಡರಿ, 2 ಸಿಕ್ಸರ್‌ಗಳ ಸಹಿತ 42 ರನ್ ಗಳಿಸಿ ನೂರ್ ಅಹ್ಮದ್ ಬೌಲಿಂಗ್‌ನಲ್ಲಿ ಬೌಲ್ಡ್ ಆದರು. ಗಾಯಕ್ವಾಡ್ ವಿಕೆಟ್ ನಂತರ ಚೆನ್ನೈ ಬ್ಯಾಟಿಂಗ್ ರನ್ ಗತಿ ನಿಧಾನವಾಯಿತು.

ಕಾರ್ತಿಕ್ ಶರ್ಮಾ 20 ಎಸೆತಗಳಲ್ಲಿ 20 ರನ್, ಡೆವಾಲ್ಡ್ ಬ್ರೆವಿಸ್ 12 ಎಸೆತಗಳಲ್ಲಿ 1 ಬೌಂಡರಿ, 10 ರನ್ ಗಳಿಸಿದರು. ಆದರೆ ಶಿವಂ ದುಬೆ 7 ಎಸೆತಗಳಲ್ಲಿ 2 ಸಿಕ್ಸರ್‌ಗಳ ಸಹಿತ 15, ಪ್ರಶಾಂತ್ ವೀರ್ 12 ಎಸೆತಗಳಲ್ಲಿ 2 ಸಿಕ್ಸರ್‌ಗಳ ಸಹಿತ ಅಜೇಯ 17 ರನ್ ಗಳಿಸಿ ತಂಡವನ್ನು ಗೆಲುವಿನ ಗಡಿ ದಾಟಿಸಿದರು.

ಲಖನೌ ಆರಂಭಿಕರ ಅಬ್ಬರ: ಮೊದಲು ಬ್ಯಾಟಿಂಗ್ ಮಾಡಿದ ಲಖನೌಗೆ ಆರಂಭಿಕ ಜೋಶ್ ಇಂಗ್ಲಿಸ್ ಹಾಗೂ ಮಿಚೆಲ್ ಮಾರ್ಷ್ ಬಿರುಸಿನ ಆರಂಭ ಒದಗಿಸಿದ್ದರು. ಆ ಜೋಡಿ ಕೇವಲ 5.1 ಓವರ್‌ಗಳಲ್ಲೇ 77 ರನ್ ಕಲೆಹಾಕಿತು. ನಂತರ ವೈಫಲ್ಯ ಅನುಭವಿಸಿತು, ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ಕೈಕೊಟ್ಟದ್ದು ಮುಳುವಾಯಿತು.

ಇಂಗ್ಲಿಸ್ 33 ಎಸೆತಗಳಲ್ಲಿ 10 ಬೌಂಡರಿ ಹಾಗೂ 6 ಸಿಕ್ಸರ್ ಸಹಿತ 85 ರನ್ ಗಳಿಸಿದರು. ಕೆಳಕ್ರಮಾಂಕದಲ್ಲಿ ತಂಡಕ್ಕೆ ಆಸರೆಯಾದ ಶಹಬಾಜ್ ಅಹಮದ್ 25 ಎಸೆತಗಳಲ್ಲಿ ತಲಾ ಮೂರು ಬೌಂಡರಿ ಮತ್ತು ಸಿಕ್ಸರ್ ಸಹಿತ 43 ರನ್ ಕಲೆಹಾಕಿದರು. ಅವರಿಬ್ಬರನ್ನು ಬಿಟ್ಟರೆ,

ಉಳಿದವರಿಂದ ಸಾಮರ್ಥ್ಯಕ್ಕೆ ತಕ್ಕ ಆಟ ಮೂಡಿಬರಲಿಲ್ಲ. ನಿಕೋಲಸ್ ಪೂರನ್ (1), ನಾಯಕ ರಿಷಭ್ ಪಂತ್ (15), ಏಡನ್ ಮಾರ್ಕ್ರಂ (6) ವೈಫಲ್ಯ ಅನುಭವಿಸಿದರು. ಹೀಗಾಗಿ 230ಕ್ಕಿಂತ ಅಧಿಕ ಮೊತ್ತ ಕಲೆಹಾಕುವ ಅವಕಾಶವನ್ನು ಲಖನೌ ಕಳೆದುಕೊಂಡಿತು.

ಚೆನ್ನೈ ತಂಡದ ಜೆಮಿ ಓವರ್‌ಟನ್ 3 ವಿಕೆಟ್‌ಗಳನ್ನು ಪಡೆಯುವ ಮೂಲಕ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಶಾಂಘೈ ಆರ್ಚರಿ ವಿಶ್ವಕಪ್‌ನ 2ನೇ ಹಂತದ ಸ್ಪರ್ಧೆ

ಭಾರತೀಯ ವನಿತೆಯರಿಗೆ ಆರ್ಚರಿ ಚಿನ್ನ

ಶಾಂಘೈ: ಭಾನುವಾರ ಶಾಂಘೈನಲ್ಲಿ ನಡೆದ ಆರ್ಚರಿ ವಿಶ್ವಕಪ್‌ನ 2ನೇ ಹಂತದ ಸ್ಪರ್ಧೆಯಲ್ಲಿ ಭಾರತದ ಮಹಿಳಾ ತಂಡವು ಆತಿಥೇಯ ಚೀನಾವನ್ನು ರೋಚಕ ಶೂಟ್‌ಆಫ್‌ನಲ್ಲಿ ಸೋಲಿಸಿ ಚಿನ್ನದ ಪದಕವನ್ನು ತನ್ನದಾಗಿಸಿಕೊಂಡಿತು.

ದೀಪಿಕಾ ಕುಮಾರಿ, ಅಂಕಿತಾ ಭಕತ್ ಮತ್ತು ಕುಂಕುಮ್ ಮೊಹೋದ್ ಅವರನ್ನೊಳಗೊಂಡ ತಂಡವು 4-4ರಲ್ಲಿ ಕೊನೆಗೊಂಡ ತೀವ್ರ ಪೈಪೋಟಿಯ ಫೈನಲ್‌ನ ನಂತರ ಟೈ-ಬ್ರೇಕರ್‌ನಲ್ಲಿ 28-26ರಲ್ಲಿ ಜಯಗಳಿಸಿ 5-4 ಅಂತರದಲ್ಲಿ ತವರಿನ ತಂಡವನ್ನು ಸೋಲಿಸಿತು.

2021ರ ನಂತರ ವಿಶ್ವಕಪ್ ಟೂರ್ನಿಯಲ್ಲಿ ಭಾರತದ ಮೊದಲ ಮಹಿಳಾ ತಂಡದ ಪ್ರಶಸ್ತಿ ಇದಾಗಿದೆ. ಸೆಮಿಫೈನಲ್‌ನಲ್ಲಿ ಭಾರತ 10 ಒಲಿಂಪಿಕ್ ಚಿನ್ನದ ಪದಕ ಗೆದ್ದಿದ್ದ ದಕ್ಷಿಣ ಕೊರಿಯಾವನ್ನು ಸೋಲಿಸಿದಾಗ ಪದಕ ಗೆಲ್ಲುವ ಭರವಸೆ ಮೂಡಿತ್ತು. 2021ರಲ್ಲಿ ಗ್ವಾಟೆಮಾಲಾ ಸಿಟಿ ಮತ್ತು ಪ್ಯಾರಿಸ್‌ನಲ್ಲಿ ಭಾರತದ ಯಶಸ್ವಿ ವಿಶ್ವಕಪ್

ಅಭಿಯಾನಗಳಲ್ಲಿ ಅನುಭವಿಯಾಗಿದ್ದ ದೀಪಿಕಾ, ಒಟ್ಟಾರೆಯಾಗಿ ತಮ್ಮ ಏಳನೇ ವಿಶ್ವಕಪ್ ತಂಡ ಚಿನ್ನದ ಪದಕವನ್ನು ಗೆದ್ದುಕೊಂಡರು. ಈ ಪದಕವು ವಿಶ್ವಕಪ್ ಮಟ್ಟದಲ್ಲಿ ಭಾರತೀಯ ಮಹಿಳಾ ತಂಡಕ್ಕೆ 3 ವರ್ಷಗಳ ಕಾಯುವಿಕೆಯನ್ನು ಕೊನೆಗೊಳಿಸಿತು.

ಶಾಂಘೈನಲ್ಲಿ ಭಾರತದ ಪದಕಗಳ ಪಟ್ಟಿ ಈಗಾಗಲೇ ಸಕಾರಾತ್ಮಕವಾಗಿ ಆರಂಭವಾಗಿದ್ದು, ಕಾಂಪೌಂಡ್ ಬಿಲ್ಲುಗಾರ ಸಾಹಿಲ್ ಜಾಧವ್ ಒಂದು ದಿನ ಮುಂಚಿತವಾಗಿ ಕಂಚಿನ ಪದಕ ಗೆದ್ದ ನಂತರ ಭಾರತ ಮತ್ತೊಂದು ಪದಕದ ಹುಡುಕಾಟದಲ್ಲಿತ್ತು. ಸಿಮ್ರನ್‌ಜೀತ್ ಕೌರ್ ರಿಕರ್ವ್ ಸೆಮಿಫೈನಲ್ ತಲುಪಿದ್ದಾರೆ.

ಶ್ರೇಯಸ್ ಅಯ್ಯರ್ ಪಡೆಗೆ ಪ್ಲೇಆಫ್ ಖಚಿತಪಡಿಸುವಾಸೆ | ಗೆದ್ದರೂ ಡೆಲ್ಲಿಗೆ ನಾಕೌಟ್ ಪ್ರವೇಶ ಸಾಧ್ಯತೆ ಕ್ಷೀಣ

ಪಂಜಾಬ್‌ಗೆ ಇಂದು ಡೆಲ್ಲಿ ಎದುರಾಳಿ

ಧರ್ಮಶಾಲಾ: ಇಲ್ಲಿನ ಹಿಮಾಚಲ ಪ್ರದೇಶ ಕ್ರಿಕೆಟ್ ಅಸೋಸಿಯೇಶನ್ ಸ್ಟೇಡಿಯಂನಲ್ಲಿ ಇಂದು ನಡೆಯಲಿರುವ ಐಪಿಎಲ್ ಕ್ರಿಕೆಟ್ ಪಂದ್ಯದಲ್ಲಿ ಪಂಜಾಬ್ ತಂಡವು ಡೆಲ್ಲಿಯನ್ನು ಎದುರಿಸಲಿದೆ.

ಈಗಾಗಲೇ 10 ಪಂದ್ಯಗಳನ್ನು ಆಡಿ 6ರಲ್ಲಿ ಗೆದ್ದು 3ರಲ್ಲಿ ಸೋತಿರುವ ಶ್ರೇಯಸ್ ಅಯ್ಯರ್ ನಾಯಕತ್ವದ ಪಂಜಾಬ್ ತಂಡ 13 ಅಂಕಗಳನ್ನು ಸಂಪಾದಿಸಿದೆ. 11 ಪಂದ್ಯಗಳನ್ನು ಆಡಿರುವ ಅಕ್ಷರ್ ಪಟೇಲ್ ನಾಯಕತ್ವದ ಡೆಲ್ಲಿ ತಂಡವು 4 ಪಂದ್ಯಗಳಲ್ಲಷ್ಟೇ ಗೆದ್ದು, 7ರಲ್ಲಿ ಸೋತು ಕೇವಲ 8 ಅಂಕಗಳನ್ನಷ್ಟೇ ಕಲೆ ಹಾಕಿದೆ.

ಈ ಆವೃತ್ತಿಯ ಮೊದಲ ಪಂದ್ಯದಲ್ಲೇ ಪಂಜಾಬ್ ತಂಡವು ಆರ್‌ಸಿಬಿ ವಿರುದ್ಧ ಸೋತರೂ, ಮುಂದಿನ ಪಂದ್ಯಗಳಲ್ಲಿ ಗುಜರಾತ್, ಚೆನ್ನೈ, ಹೈದರಾಬಾದ್, ಮುಂಬೈ, ಲಖನೌ, ಡೆಲ್ಲಿ ವಿರುದ್ಧ ಗೆಲುವನ್ನು ಸಾಧಿಸಿತು. ಆದರೆ ಕಳೆದ ಮೂರು ಪಂದ್ಯಗಳಲ್ಲಿ ರಾಜಸ್ಥಾನ್, ಗುಜರಾತ್ ಮತ್ತು ಹೈದರಾಬಾದ್ ವಿರುದ್ಧ ಹ್ಯಾಟ್ರಿಕ್ ಸೋಲು ಕಂಡಿತ್ತು.

ಡೆಲ್ಲಿ ತಂಡವು ಈ ಆವೃತ್ತಿಯ ಮೊದಲ ಪಂದ್ಯದಲ್ಲಿ ಲಖನೌ ವಿರುದ್ಧ, 2ನೇ ಪಂದ್ಯದಲ್ಲಿ ಮುಂಬೈ ವಿರುದ್ಧ ಜಯ ಗಳಿಸಿತ್ತು. ಆದರೆ 3ನೇ ಪಂದ್ಯದಲ್ಲಿ ಗುಜರಾತ್ ವಿರುದ್ಧ ಮತ್ತು 4ನೇ ಪಂದ್ಯದಲ್ಲಿ ಚೆನ್ನೈ ವಿರುದ್ಧ ಸೋತಿತ್ತು. 5ನೇ ಪಂದ್ಯದಲ್ಲಿ ಆರ್‌ಸಿಬಿ ವಿರುದ್ಧ ಗೆದ್ದು, 6ನೇ ಪಂದ್ಯದಲ್ಲಿ ಹೈದರಾಬಾದ್ ವಿರುದ್ಧ ಸೋತಿತ್ತು. 7ನೇ ಪಂದ್ಯದಲ್ಲಿ ಪಂಜಾಬ್ ತಂಡದ ವಿರುದ್ಧ ಡೆಲ್ಲಿ ಸೋತಿತ್ತು. 8ನೇ ಪಂದ್ಯದಲ್ಲಿ ಡೆಲ್ಲಿಯು ಆರ್‌ಸಿಬಿಗೆ ಮಣಿಯಿತು. 9ನೇ ಪಂದ್ಯದಲ್ಲಿ ರಾಜಸ್ಥಾನ ವಿರುದ್ಧ ಡೆಲ್ಲಿ ಮೇಲುಗೈ ಪಡೆದರೆ,

10ನೇ ಪಂದ್ಯದಲ್ಲಿ ಚೆನ್ನೈ ವಿರುದ್ಧ, 11ನೇ ಪಂದ್ಯದಲ್ಲಿ ಕೋಲ್ಕತಾ ವಿರುದ್ಧವೂ ಸೋತು ಇದೀಗ ಹ್ಯಾಟ್ರಿಕ್ ಸೋಲಿನ ಭೀತಿಯಲ್ಲಿದೆ.

ಡೆಲ್ಲಿ ವಿರುದ್ಧದ ಈ ಪಂದ್ಯ ಗೆದ್ದರೆ ಪಂಜಾಬ್‌ನ ಪ್ಲೇಆಫ್ ಹಾಗಿ ಸುಗಮವಾಗಲಿದೆ. ಆದರೆ ಈ ಆವೃತ್ತಿಯಲ್ಲಿ ತೀರಾ ಕಳಪೆ ಪ್ರದರ್ಶನ ತೋರಿಸಿರುವ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಈ ಪಂದ್ಯವೂ ಸೇರಿದಂತೆ ಮುಂದಿನ ಎಲ್ಲಾ ಪಂದ್ಯಗಳನ್ನು ಗೆದ್ದರೂ ನಾಕೌಟ್ ಹಂತ ಪ್ರವೇಶಿಸುವ ಸಾಧ್ಯತೆ ತೀರಾ ಕಮ್ಮಿಯಾಗಿದೆ.

ಇಂದಿನ ಪಂದ್ಯ
ಪಂಜಾಬ್-ಡೆಲ್ಲಿ
ಸ್ಥಳ: ಪಿಸಿಎ ಕ್ರೀಡಾಂಗಣ, ಧರ್ಮಶಾಲಾ
ಸಮಯ: ರಾತ್ರಿ 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್
ಲೈವ್ ಸ್ಟ್ರೀಮ್: ಜಿಯೋ ಹಾಟ್‌ಸ್ಟಾರ್

ರೌಡಿ ಜನಾರ್ಧನನಾದ ದೇವರಕೊಂಡ

ಟಾಲಿವುಡ್ ಖ್ಯಾತ ನಟ ವಿಜಯ್ ದೇವರಕೊಂಡ ರೌಡಿ ಅವತಾರದಲ್ಲಿ ಅಬ್ಬರಿಸಲು ಸಿದ್ಧವಾಗಿದ್ದಾರೆ. ವಿಜಯ್, ರೌಡಿ ಜನಾರ್ಧನ ಚಿತ್ರದಲ್ಲಿ ಅಭಿನಯಿಸುತ್ತಿದ್ದಾರೆ. ಈ ಚಿತ್ರದಲ್ಲಿ ವಿಜಯ್ ವಿಭಿನ್ನ ಅವತಾರ ತಾಳಿದ್ದು, ರಗಡ್ ಲುಕ್‌ನಲ್ಲಿ ಕಂಗೊಳಿಸಿದ್ದಾರೆ. ಸದ್ಯ ಈ ಚಿತ್ರದ ಪೋಸ್ಟರ್ ರಿಲೀಸ್ ಆಗಿದ್ದು ಸಿನಿಮಾದ ಬಗ್ಗೆ ಕುತೂಹಲ ಮೂಡುವಂತೆ ಮಾಡಿದೆ. ಸುರಿಯುತ್ತಿರುವ ಮಳೆಯಲ್ಲಿ ಗನ್ ಹಿಡಿದು ಕುಳಿತಿರುವ ನಾಯಕ, ಆತನ ಎದೆಯ ಮೇಲೆ ನಾಯಕಿ ಕಾಲಿಟ್ಟಿರುವುದು ಕಾಣಿಸುತ್ತದೆ. ಇದನ್ನು ಗಮನಿಸಿದರೆ ಇದು ರೊಮ್ಯಾಂಟಿಕ್ ಸನ್ನಿವೇಶ ಎನ್ನುವುದು ತಿಳಿಯುತ್ತದೆ.

ರೌಡಿ ಜನಾರ್ಧನ ಶೀರ್ಷಿಕೆಯೇ ಹೇಳುವಂತೆ ಇದು, ರೌಡಿಸಂ ಜತೆಗೆ ಆ್ಯಕ್ಷನ್ ಕಥೆಯನ್ನು ಒಳಗೊಂಡಿದೆ ಎಂಬುದು ಸ್ಪಷ್ಟವಾಗುತ್ತದೆ. ವಿಜಯ್‌ಗೆ ನಾಯಕಿಯಾಗಿ ಕೀರ್ತಿ ಸುರೇಶ್ ಅಭಿನಯಿಸಿದ್ದಾರೆ. ಕೀರ್ತಿ ನಾಯಕನ ಎದೆಯ ಮೇಲೆ ಕಾಲಿಟ್ಟಿರುವುದು ಪೋಸ್ಟರ್‌ನ ಹೈಲೈಟ್ ಆಗಿದೆ. ರವಿಕಿರಣ್ ಕೋಲಾ ನಿರ್ದೇಶನದಲ್ಲಿ ಈ ಚಿತ್ರ ಮೂಡಿಬರುತ್ತಿದ್ದು, ಶ್ರೀವೆಂಕಟೇಶ್ವರ ಕ್ರಿಯೇಷನ್ಸ್ ಬ್ಯಾನರ್‌ನಲ್ಲಿ ದಿಲ್‌ರಾಜು ಮತ್ತು ಶಿರೀಶ್ ಈ ಸಿನಿಮಾವನ್ನು ಅದ್ದೂರಿಯಾಗಿ ನಿರ್ಮಾಣ ಮಾಡುತ್ತಿದ್ದಾರೆ. ರೌಡಿ ಜನಾರ್ಧನ ಚಿತ್ರದ ಶೂಟಿಂಗ್ ಭರದಿಂದ ಸಾಗುತ್ತಿದ್ದು ಇದೇ ಡಿಸೆಂಬರ್‌ನಲ್ಲಿ ಚಿತ್ರ ವಿಶ್ವಾದ್ಯಂತ ಅದ್ದೂರಿಯಾಗಿ ತೆರೆಗೆ ಬರಲಿದೆ. ಸತತ ಸೋಲಿನಿಂದ ಕಂಗೆಟ್ಟಿರುವ ವಿಜಯ್ ದೇವರಕೊಂಡ ಈ ಚಿತ್ರದಲ್ಲಿ ಬಿಗ್ ಬ್ರೇಕ್ ಸಿಗುವ ನಿರೀಕ್ಷೆಯಲ್ಲಿದ್ದಾರೆ.

ರುದ್ರಾಭಿಷೇಕಂನ ಹಾಡು ಸಡಗರ

ನಟ ವಿಜಯ ರಾಘವೇಂದ್ರ ಸಾಲು ಸಾಲು ಸಿನಿಮಾಗಳಲ್ಲಿ ಅಭಿನಯಿಸುತ್ತಿದ್ದಾರೆ. ಪ್ರತಿ ಸಿನಿಮಾಗಳಲ್ಲಿಯೂ ವಿಭಿನ್ನ ಪಾತ್ರಗಳನ್ನು ಆಯ್ದುಕೊಳ್ಳುತ್ತಿದ್ದಾರೆ. ಅಂತೆಯೇ ಈಗ ರುದ್ರಾಭಿಷೇಕಂ ಚಿತ್ರದಲ್ಲಿ ನಟಿಸಿದ್ದು, ಹೊಸತನದ ಪಾತ್ರದಲ್ಲಿ ಮಿಂಚಿದ್ದಾರೆ. ರುದ್ರಾಭಿಷೇಕಂ ವೀರಗಾಸೆ ಕಲೆಯ ಕುರಿತ ಕಥೆಯನ್ನು ಒಳಗೊಂಡಿದ್ದು, ಪೌರಾಣಿಕ ಹಿನ್ನೆಲೆಯಲ್ಲಿ ಸಾಗಲಿದೆ. ಇದರಲ್ಲಿ ವಿಜಯ ರಾಘವೇಂದ್ರ, ಹಲವು ವಿಭಿನ್ನ ಗೆಟಪ್‌ಗಳಲ್ಲಿ ಕಂಗೊಳಿಸಿದ್ದಾರೆ. ಸದ್ಯ ಈ ಸಿನಿಮಾದ ಹಾಡುಗಳು ಬಿಡುಗಡೆಯಾಗಿದ್ದು ಸಿನಿಪ್ರಿಯರ ಮನಗೆದ್ದಿವೆ. ವಿ.ಮನೋಹರ್ ಸಂಗೀತ ನಿರ್ದೇಶನದಲ್ಲಿ ಮೂಡಿಬಂದಿರುವ ಎಲ್ಲಾ ಹಾಡುಗಳು ಕೇಳಲು ಬಲು ಮಧುರವಾಗಿವೆ. ವಿಜಯ್ ರಾಘವೇಂದ್ರ ಅವರಿಗೆ ಜತೆಯಾಗಿ ಪ್ರಿಯಾಂಕ ತಿಮ್ಮೇಶ್ ಬಣ್ಣಹಚ್ಚಿದ್ದಾರೆ.

ಈ ರೀತಿಯ ಪಾತ್ರದಲ್ಲಿ ಅಭಿನಯಿಸಬೇಕು ಎಂಬುದು ನನ್ನ ಹಲವು ದಿನಗಳ ಕನಸಾಗಿತ್ತು. ಅದು ಈ ಚಿತ್ರದ ಮೂಲಕ ನನಸಾಗಿದೆ. ಸಿನಿಮಾದ ಕಥೆ ಅದ್ಭುತವಾಗಿದ್ದು ನಮ್ಮ ನಾಡಿನ ಶ್ರೀಮಂತ ಕಲೆಯನ್ನು ಬಿಂಬಿಸುತ್ತದೆ. ಈ ಚಿತ್ರದಲ್ಲಿ ನಾನು ಹಲವು ಶೇಡ್‌ನಲ್ಲಿ ಮಿಂಚಿದ್ದೇನೆ. ವೀರಗಾಸೆಯ ಲುಕ್ ಸಿನಿಮಾದ ಹೈಲೈಟ್ ಆಗಿದೆ ಎಂದು ವಿಜಯ ರಾಘವೇಂದ್ರ ತಮ್ಮ ಪಾತ್ರದ ಬಗ್ಗೆ ತಿಳಿಸಿದರು.

ಕರುನಾಡಿನ ಶ್ರೀಮಂತ ಪರಂಪರೆಯನ್ನು ಸಾರುವ ಕಥೆ ನಮ್ಮ ಚಿತ್ರದಲ್ಲಿದೆ. ಒಳ್ಳೆಯ ಪಾತ್ರದಲ್ಲಿ ಅಭಿನಯಿಸಿದ ಸಂತಸ ನನಗಿದೆ ಎಂದು ಪ್ರಿಯಾಂಕಾ ಸಂತಸದಿಂದ ನುಡಿದರು. ನಿರ್ದೇಶಕ ವಸಂತ್ ಕುಮಾರ್ ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ರುದ್ರಾಭಿಷೇಕಂ ಅದ್ದೂರಿ ವೆಚ್ಚದ ಚಿತ್ರವಾಗಿದ್ದು ಪ್ಯಾನ್ ಇಂಡಿಯಾ ಕ್ರಿಯೇಷನ್ಸ್‌ನಲ್ಲಿ ನಿರ್ಮಾಣವಾಗಿದೆ.



ಶೋಧಕ್ಕೆ ಹೊರಟ ಫ್ಲೆಮಿಂಗೊ

ಸ್ಕಂದ ಫಿಲಂ ಹೌಸ್ ಹಾಗೂ ಫ್ಲೆಮಿಂಗೊ ಸೆಲೆಬ್ರಿಟೀಸ್ ವರ್ಲ್ಡ್ ಫಿಲಂ ಅಕಾಡೆಮಿ ಸಹಯೋಗದಲ್ಲಿ ನಿರ್ಮಾಣವಾಗುತ್ತಿರುವ ಶೋಧ ಚಿತ್ರದ ಮುಹೂರ್ತ ಬೆಂಗಳೂರಿನ ರಾಜಾಜಿನಗರದ ಶ್ರೀದಂಡಪಾಣಿ ದೇವಸ್ಥಾನದಲ್ಲಿ ನೆರವೇರಿತು.

ಶೋಧ ಚಿತ್ರಕ್ಕೆ ಹಿರಿಯ ನಟ ಮತ್ತು ನಿರ್ದೇಶಕ ಎಂ. ಡಿ. ಕೌಶಿಕ್ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಫ್ಲೆಮಿಂಗೋ ಸಂಸ್ಥೆಯ ರೂವಾರಿ ಧವನ್ ಸೋಹ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ಚೇತನ್, ಶೋಧ ಚಿತ್ರದ ಮೂಲಕ ನಾಯಕ ನಟನಾಗಿ ಕನ್ನಡ ಚಿತ್ರರಂಗಕ್ಕೆ ಪರಿಚಯವಾಗುತ್ತಿದ್ದಾರೆ.

ಇನ್ನು ಶೋಧ ಸಸ್ಪೆನ್ಸ್ ಕಂ ಕ್ರೈಂ-ಥ್ರಿಲ್ಲರ್ ಚಿತ್ರವಾಗಿದ್ದು, ಇಂದಿನ ಸಾಮಾಜಿಕ, ರಾಜಕೀಯ ಮತ್ತು ಪೊಲೀಸ್ ವ್ಯವಸ್ಥೆಯ ಸುತ್ತ ಚಿತ್ರದ ಕಥೆ ಸಾಗಲಿದೆ. ನಮ್ಮ ನಡವೆಯೇ ಹುದುಗಿ ಹೋಗಿರುವ ಸತ್ಯದ ಶೋಧಕ್ಕೆ ಹೊರಟಾಗ ಯಾವೆಲ್ಲಾ ಸಮಸ್ಯೆಗಳು ಎದಿರಾಗುತ್ತವೆ ಎಂಬುದೇ ಚಿತ್ರದ ಕಥೆ. ಅದನ್ನು ಇಂದಿನ ಪ್ರೇಕ್ಷಕರಿಗೆ ಇಷ್ಟವಾಗುವಂತೆ ತೆರೆಮೇಲೆ ತರಲಾಗುತ್ತಿದೆ.

ಶೋಧ ಚಿತ್ರದ ಹಾಡುಗಳಿಗೆ ಭುವನೇಶ್ ರೆಡ್ಡಿ ಸಂಗೀತ ಸಂಯೋಜಿಸುತ್ತಿದ್ದು, ಚಂದು ಸಿ. ಛಾಯಾಗ್ರಹಣದ ಜವಾಬ್ದಾರಿ ಹೊತ್ತಿದ್ದಾರೆ. ಬೆಂಗಳೂರು, ಕನಕಪುರ ಸುತ್ತಮುತ್ತ ಶೋಧ ಚಿತ್ರದ ಚಿತ್ರೀಕರಣ ನಡೆಸಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ. ಇದೇ ಆಗಸ್ಟ್ ವೇಳೆಗೆ ಶೋಧ ತೆರೆಗೆ ಬರಲಿದೆ.